# ಹೊಸ ಮನುಷ್ಯ

೬೦

ಸಮಾಜವಾದಿ ಮಾಸಿಕ

ಜುಲೈ, ೨೦೧೬ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೫ ಸಂಚಿಕೆ: ೧೨

**ಬೆಲೆ:** ಬಿಡಿ ಪ್ರತಿ: ರೂ. ೨೦/- ಪುಟ: ೨೦



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಈ ಸಂಚಿಕೆಯೊಂದಿಗೆ ನಿಮ್ಮ ಪತ್ರಿಕೆ ಐದು ವರ್ಷಗಳನ್ನು ಪೂರೈಸುತ್ತಿದೆ. ಹಾಗಾಗಿ ಇದು ಪತ್ರಿಕೆಯ ಅರವತ್ತನೇ ಸಂಚಿಕೆ. ಪತ್ರಿಕೆಯನ್ನು ಐದು ವರ್ಷಗಳ ಹಿಂದೆ ಆರಂಭಿಸಿದಾಗ, ಇದನ್ನು ಆದಷ್ಟೂ ದೀರ್ಘ ಕಾಲ ನಡೆಸಿಕೊಂಡು ಹೋಗಬೇಕೆಂಬ ಹಠವಿತ್ತಾದರೂ, ಮನದೊಳಗೆ ಒಂದು ವರ್ಷವಾದರೂ ದಾಟೀತೆ ಎಂಬ ಅನುಮಾನ ಇದ್ದೇ ಇತ್ತು. ಏಕೆಂದರೆ ಇದನ್ನು ಸಮಾಜವಾದಿ ಪತ್ರಿಕೆ ಎಂದು ಆರಂಭಿಸಿದ್ದೆ. ಸಮಾಜವಾದಿ ಏರುಗಾಲದಲ್ಲೇ ಸಮಾಜವಾದಿ ಪತ್ರಿಕೆಗಳು ಬಹುಕಾಲ ನಡೆಯಲಿಲ್ಲ. 'ಜನತಾ' ಎಂಬ ಇಂಗ್ಲಿಷ್ ವಾರಪತ್ರಿಕೆ ಹಾಗೂ ಹೀಗೂ ೭೧ ವರ್ಷಗಳ ಕಾಲ ಉಳಿದು ಬಂದಿದೆ. ಅದು ಇಂಗ್ಲಿಷ್ ಪತ್ರಿಕೆಯಾಗಿ ಅಖಿಲ ಭಾರತ ವ್ಯಾಪ್ತಿ ಪಡೆದಿರುವುದೂ ಕಾರಣವಿರಬಹುದು. ಆದರೆ ಸಮಾಜವಾದದ ಕಾಲ ಮುಗಿಯಿತು ಎಂಬ ಸಾರ್ವಜನಿಕ ಅಭಿಪ್ರಾಯ ಸೃಷ್ಟಿಯಾಗುತ್ತಿರುವ ಈ ಜಾಗತೀಕರಣದ ಕಾಲದಲ್ಲಿ ಸಮಾಜವಾದದ ಹೆಸರಿನಲ್ಲಿ ಅದೂ ಕನ್ನಡದ ಸೀಮಿತ ಭಾಷಾ ವಲಯದಲ್ಲಿ ಪತ್ರಿಕೆ ಮಾಡುವುದು ಹುಚ್ಚು ಸಾಹಸವೆಂದೇ ನನ್ನ ಹಲವು ಗೆಳೆಯರು ಹೇಳಿದ್ದರು. ಆದರೆ ಸಮಾಜವಾದದಿಂದ. ವಿಶೇಷವಾಗಿ ಲೋಹಿಯಾ ವಿಚಾರಗಳಿಂದ ನನ್ನ ಬದುಕಿನ ಹಲವು ಚೆಲುವುಗಳನ್ನು ಕಂಡುಕೊಂಡಿದ್ದ ನಾನು ಆ ಋಣ ತೀರಿಸಲೆಂಬಂತೆ ಪತ್ರಿಕೆ ಆರಂಭಿಸಿದೆ. ಸಮಾಜವಾದ ಎನ್ನುವುದು ಇನ್ನೂ ತನ್ನ ಸೃಜನಶೀಲತೆಯನ್ನು ಕಳೆದುಕೊಂಡಿಲ್ಲ ಮತ್ತು ಹೀಗೆ ಯೋಚಿಸುವ ಸಾಕಷ್ಟು ಗೆಳೆಯರಿದ್ದಾರೆ ಎಂಬ ನಂಬಿಕೆಯೂ ನನ್ನ ಜೊತೆಗಿತ್ತು. ಆದರೆ ಈ ಪತ್ರಿಕೆಯನ್ನೀಗ' ನಿಲ್ಲಿಸುವ ನಿರ್ಧಾರಕ್ಕೆ ಬಂದಿರುವೆ. ಇದಕ್ಕೆ ವಿವರವಾದ ಕಾರಣಗಳನ್ನೂ ಹೋದ ಸಂಚಿಕೆಯಲ್ಲಿ ನೀಡಿರುವೆ.

ಪತ್ರಿಕೆ ನಿಲ್ಲಿಸುವ ನನ್ನ ಈ ನಿರ್ಧಾರದ ಬಗ್ಗೆ ಓದುಗರಿಂದ ವ್ಯಾಪಕವಾದ ಪ್ರತಿಕ್ರಿಯೆಗಳು ಬಂದಿವೆ. ಅವನ್ನೆಲ್ಲ ನೀವು ಈ ಸಂಚಿಕೆಯ ೫ ಮತ್ತು ೬ನೇ ಪುಟಗಳಲ್ಲಿ ನೋಡಬಹುದು. ಪತ್ರಿಕೆ ನಿಲ್ಲಬಾರದೆಂಬುದು ಬಹುಜನರ ಅಪೇಕ್ಷೆ. ಅದಕ್ಕೆ ಅವರು ತಮ್ಮದೇ ಕಾರಣಗಳನ್ನು ನೀಡಿದ್ದಾರಲ್ಲದೆ, ಪರ್ಯಾಯ ವ್ಯವಸ್ಥೆಗಾಗಿ ಸಲಹೆ-ಸೂಚನೆಗಳನ್ನೂ ನೀಡಿದ್ದಾರೆ. ಮತ್ತೆ ಕೆಲವರು ತಮ್ಮದೇ ರೀತಿಯಲ್ಲಿ ಸಹಾಯ ಹಸ್ತ ಚಾಚಿದ್ದಾರೆ. ಇನ್ನು ಹಲವರದ್ದು ಸಂಪಾದಕರ ಆರೋಗ್ಯದ ಕಾರಣವೇ ನಿಜವಾಗಿದ್ದರೆ ಅದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿದೆ ಎಂದಿದ್ದಾರೆ. ಒಬ್ಬರು ಮಾತ್ರ ಪತ್ರಿಕೆ ನಿಲ್ಲುತ್ತಿರುವುದು ಸಂತೋಷ ಎಂದಿದ್ದರೆ, ಪತ್ರಿಕೆಯ ಅಭಿಮಾನಿಯೇ ಆದ ಗೆಳೆಯ ಜಯಂತ ಕಾಯ್ಕಿಣಿ ನನ್ನ ಮೇಲಿನ ಪ್ರೀತಿಯಿಂದಾಗಿಯೇ ಈ ನಿರ್ಧಾರವನ್ನು ಯಾವುದೇ ಕಾರಣಕ್ಕೂ ಹಿಂತೆಗೆದುಕೊಳ್ಳಬೇಡಿ ಎಂದು ಎಚ್ಚರಿಸಿದ್ದಾರೆ. ಪತ್ರಿಕೆಯನ್ನು ಕುರಿತ ಮತ್ತು ನನ್ನನ್ನು ಕುರಿತ ಇವರೆಲ್ಲರ ಪ್ರೀತಿ-ಅಭಿಮಾನಗಳಿಂದ ಬೆರಗಾಗಿದ್ದೇನೆ.

ಮೊದಲೇ ಹೇಳಿಬಿಡುತ್ತೇನೆ. ಪತ್ರಿಕೆಗೆ ಅಂತಹ ಹಣಕಾಸಿನ ತೊಂದರೆ ಇಲ್ಲ. ಹತ್ತಿರ ಹತ್ತಿರ ಸಾವಿರ ಚಂದಾದಾರರಿದ್ದಾರೆ. ಆದರೆ ನಾನು ಪತ್ರಿಕೆಯನ್ನು, ಓರ್ವ ಹಿರಿಯರು ತಮ್ಮ ಪತ್ರದಲ್ಲಿ ತಿಳಿಸಿರುವಂತೆ ನಾಳೆಯೇ ಕ್ರಾಂತಿಯಾಗಿಬಿಡುತ್ತದೆ ಎಂಬ ನಿರೀಕ್ಷೆಯಿಂದೇನೂ ಆರಂಭಿಸಲಿಲ್ಲ. ಬದಲಿಗೆ, ಇದು ಕೆಟ್ಟ ಜಾಗತೀಕರಣದಿಂದಾಗಿ ನನ್ನ ಸುತ್ತಮುತ್ತಲ ಸಮಾಜ ತನ್ನ ಮೂಲ ಸ್ವಭಾವವನ್ನೇ ಕಳೆದುಕೊಂಡು ಮಿತಿ ಇಲ್ಲದ ಸುಖದಾಸೆಗಳ ಹಿಂದೆ ಬಿದ್ದು ಹೆಚ್ಚೆಚ್ಚು ಹಿಂಸಾತ್ಮಕವಾಗುತ್ತಾ ತನ್ನ ಆತ್ಮವನ್ನು ನಾಶಪಡಿಸಿಕೊಳ್ಳುತ್ತಿರುವಂತೆ ತೋರುತ್ತಿರುವ ಸಂದರ್ಭ. ಇದನ್ನು ಮುನ್ನೋಡಿ ಎಚ್ಚರಿಸಿದ್ದ ನಮ್ಮ ಮಹಾನ್ ಚಿಂತಕರ ಆಲೋಚನೆಗಳ ಸ್ಫೂರ್ತಿಯಲ್ಲಿ ಇದರ ವಿರುದ್ಧ ಒಂದು ಪರ್ಯಾಯ ಆಲೋಚನಾ ಕ್ರಮವನ್ನು ಸಂಘಟಿಸಲು ಸಾಧ್ಯವೇ ಎಂಬ ಪ್ರಯತ್ನವಾಗಿ ಈ ಪತ್ರಿಕೆ ಮಾಡಿದೆ. ಪತ್ರಿಕೆ ಹೀಗೆ ಆಲೋಚಿಸುವವರ ಒಂದು ಕೂಟವನ್ನು ತಾನೇ ತಾನಾಗಿ ನಿರ್ಮಿಸಿಕೊಂಡು ಕ್ರಿಯಾಶೀಲವಾಗುತ್ತದೆ ಎಂದೂ ಭಾವಿಸಿದ್ದೆ.

ಆದರೆ ಇಂತಹ ಯಾವ ಸೂಚನೆಯೂ ನನಗೆ ದೊರಕುತ್ತಿಲ್ಲ. ನಿಜ, ಅದೇ ನಾಲ್ಕಾರು ಜನ ಪ್ರತಿಕ್ರಿಯೆಯಗಳನ್ನು ಬರೆಯುತ್ತಾರೆ. ಅಲ್ಲಿಗೆ ಮುಗಿಯಿತು ಸಮಾಜವಾದಿ ಸಂವಾದ. ನಮ್ಮ ಬಹಳಷ್ಟು ಓದುಗರು ಪತ್ರಿಕೆಯನ್ನು ಓದಿನ ಸುಖಕ್ಕಾಗಿ ಮಾತ್ರ ಓದುತ್ತಾರೆ ಎಂದು ನನಗನಿಸಿದೆ. ಮುಂದಿನ ಹೆಜ್ಜೆಯೇ ಇಲ್ಲ. ನಾನು ಬಲ್ಲ ಹತ್ತಿರದ ಓದುಗ ಗೆಳೆಯರನ್ನೇ ನೋಡುತ್ತಿದ್ದೇನೆ. ಜಾಗತೀಕರಣದ ಆರ್ಥಿಕ ಫಲಾನುಭವಿಗಳಾದ ಇವರಿಗೆ ತಮ್ಮ ಹೊಸ ಜೀವನಶೈಲಿಯ ಬಗ್ಗೆ ಯಾವ ಎಗ್ಗೂ ಇಲ್ಲ. ಅದರ ಅಪಾಯಗಳು ಎದುರಿಗೇ ಕಾಣುತ್ತಿದ್ದರೂ, ಅದು ನಮ್ಮ ಮನೆ ಬಾಗಿಲಿಗೆ ಬರುವವರೆಗೂ ಚಿಂತೆಯ ಅಗತ್ಯವಿಲ್ಲ ಎಂದು ಭಾವಿಸಿದ್ದಾರೆ. ಎರಡೂ ಮೂರು ಸೈಟು, ಮನೆಗಳು! ಜೊತೆಗೆ ತೋಟ-ಗದ್ದೆಗಳು! ಅವರು ತಮ್ಮ ಮಕ್ಕಳ ಮದುವೆ ಮಾಡುವ ರೀತಿ ನೀತಿಗಳೇನು, ಅದರ ಅಶ್ಲೀಲ ವೈಭವವೇನು, ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಹುಡುಕುವ ಶಾಲೆ-ಕಾಲೇಜುಗಳ ಶ್ರೇಷ್ಠತೆಯ ಕಲ್ಪನೆಗಳೇನು, ತಮ್ಮ ಮಕ್ಕಳು ಮುಂದೆ ತಮಗಿಂತಲೂ ಸುಖವಾಗಿರಬೇಕೆಂದು ಬಯಸಿ ಅವರನ್ನು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಕಳಿಸಲು ಪಡುವ ಪಾಡೇನು, ಮಾಲ್‌ಗಳಿಗೆ ಹೋಗಿ ಅವರು ಪಡುವ ಖುಷಿಗಳೇನು!! ಸಿಕ್ಕಾಗ ಮಾತ್ರ ಪತ್ರಿಕೆಯ ಬರಹಗಳನ್ನು ಹೊಗಳಿದ್ದೂ ಹೊಗಳಿದ್ದೇ! ಇದನ್ನು ಕೇಳಿದಾಗ ನನಗಂತೂ ಇವರು ನನ್ನ ಪತ್ರಿಕೆಯ ಮೇಲೆ ಉಗುಳಿದಂತಾಗುತ್ತದೆ.

ಇವರಲ್ಲಿ ಹೆಚ್ಚಿನವರು ಬೇರೆ ಯಾರೂ ಅಲ್ಲ, ಒಂದು ಕಾಲದಲ್ಲಿ ಸಮಾಜವಾದಿಗಳೆಂದು ಕರೆದುಕೊಂಡವರೇ. ಈಗಲೂ ಸಮಾಜವಾದಿ ಎಂದು ಗುರುತಿಸಿಕೊಂಡರೆ ಏನಾದರೂ ಲಾಭ ಸಿಗುವುದಾದರೆ ಅದನ್ನು ಗಿಟ್ಟಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನೂ ಮಾಡುವಂಥವರೇ! ಸಮಾಜವಾದಿ ಚಳುವಳಿಯ ಪ್ರಭಾವದಲ್ಲಿ ಬೆಳೆದವರೇ ಹೀಗಿರುವಾಗ ಹೊಸ ತಲೆಮಾರಿನವರ ಬಗ್ಗೆ ಏನು ಹೇಳುವುದು? ಒಮ್ಮೊಮ್ಮೆ ಅವರೇ ಆಶಾಕಿರಣಗಳಂತೆ ಕಾಣುವುದೂ ಉಂಟು. ಆದರೆ ಅವರು ಕೂಡ ಎಲ್ಲರಂತೆ ಪತ್ರಿಕೆಯ ಓದಿನ ಸುಖವನ್ನು ಮಾತ್ರ ಅನುಭವಿಸುತ್ತಾ ಸುಮ್ಮನಿದ್ದುಬಿಟ್ಟಿದ್ದಾರೆನಿಸುತ್ತದೆ. ಪರಿಸ್ಥಿತಿ ಹೀಗಿರುವಾಗ ಪತ್ರಿಕೆಯ ಮೂಲ ಉದ್ದೇಶವಾದ 'ಹೊಸ ಮನುಷ್ಯ'ನ ಹೊಳಹನ್ನಾದರೂ ಎಲ್ಲಿ ಕಾಣುವುದು?

ಇದಕ್ಕೆಲ್ಲ ಮೂಲ ಕಾರಣ ಹಳೆಯ ಸಮಾಜವಾದದಲ್ಲೇ ಇದೆ ಎಂದು ನನಗನ್ನಿಸುತ್ತದೆ. ಅದರ ಮೂಲ ದೌರ್ಬಲ್ಯವೆಂದರೆ ಅದು ಮೂಲತಃ ಪಶ್ಚಿಮದ ನಾಗರೀಕತೆಯ ರಖಮ್ಮಾಗಿರುವುದು. ಕರ್ತವ್ಯಗಳಿಗಿಂತ ಹಕ್ಕುಗಳ ಬಗ್ಗೆ ಅದರ ಒತ್ತು. ಈ ಹಕ್ಕುಗಳಲ್ಲಿ ಸುಖದ ಹಕ್ಕು ಎಲ್ಲಕ್ಕಿಂತ ದೊಡ್ಡದು. ಆ ಹಕ್ಕೇ ಇತರೆಲ್ಲ ಹಕ್ಕುಗಳಿಗೆ ಪ್ರೇರಣೆ! ದೇಹ ಹೊತ್ತು ಬಂದಿರುವ ಮನುಷ್ಯನಿಗೆ ಆ ದೇಹವನ್ನು ಸಂರಕ್ಷಿಸಿಕೊಳ್ಳಲು ಒಂದು ಮಟ್ಟದ ಸುಖ ಬೇಡವೆಂದು ಯಾರೂ ಹೇಳುವುದಿಲ್ಲ. ಆದರೆ ಸುಖವೇ ಮನುಷ್ಯನ ಪರಮೋದ್ದೇಶವಾದರೆ? ಅದಕ್ಕೊಂದು ಮಿತಿಯೇ ಬೇಡವೆಂದರೆ? ಮನುಷ್ಯ ಗುರಿಯಷ್ಟೇ ಅಲ್ಲ, ಮಾರ್ಗ ಕೂಡ ಎಂಬ ಅರಿವೇ ಇಂತಹ ಆಲೋಚನಾ ಕ್ರಮಕ್ಕಿರುವಂತಿಲ್ಲ. ಅಂದರೆ ಮನುಷ್ಯ ಸುಖಗಳನ್ನು ಅರಸುತ್ತಾ, ಅನುಭವಿಸುತ್ತಾ ಏನಾಗುತ್ತಾ ಹೋಗುತ್ತಾನೆ ಎಂಬ ಪ್ರಶ್ನೆಯೇ ಇದನ್ನು ಇಂದು ಕಾಡುತ್ತಿರುವಂತೆ ತೋರುತ್ತಿಲ್ಲ. ಬಡತನ ನಿವಾರಣೆ ಈ ದೇಶಕ್ಕೆ ಒಂದು ವ್ಯಸನವಾಗಿ ಹೋಗಿದೆ. ಅದರ ಹೆಸರಲ್ಲೇ ನಡೆಯುತ್ತಿರುವುದು ಈ ಕಾಲ

ತಳಗಿನ ನೆಲವನ್ನೇ ಅಲುಗಾಡಿಸುತ್ತಿರುವ ಅಭಿವೃದ್ಧಿ ಎಂಬ ಹುಚ್ಚಾಟ. ಸಮಾಜವಾದ ಮತ್ತು ಬಂಡವಾಳಶಾಹಿಗಳಿಗಿರುವ ಏಕೈಕ ವ್ಯತ್ಯಾಸವೆಂದರೆ ಇಂತಹ ಅಭಿವೃದ್ಧಿಯನ್ನು ಸಾಧಿಸುವ ಮಾರ್ಗದ ಬಗ್ಗೆ ಅಷ್ಟೆ.

ಈ ಕುರಿತ ಕಥನ-ಸಂಕಥನಗಳನ್ನೇ ಈ ಐದು ವರ್ಷಗಳಲ್ಲಿ ಈ ಪತ್ರಿಕೆ ಹೇಳುತ್ತಾ, ಸಮಾಜವಾದದ ಹೊಸ ದರ್ಶನದ ಹೊಳಹುಗಳಿಗಾಗಿ ಹುಡುಕಾಡಿದ್ದು.. ಆದರೆ ನಮ್ಮ ಹೆಚ್ಚಿನ ಓದುಗರು ರಸ್ತೆ ಅಪಘಾತದಲ್ಲಿ ಅರೆಜೀವವಾಗಿ ಬಿದ್ದಿರುವ ಜನರನ್ನು, ಬಹುಶಃ ವೇದನೆಯಿಂದಲೇ ನೋಡಿದರೂ ಕೆಲಸಗಳಿಗೆ ಧಾವಿಸುವ ಒತ್ತಡದಲ್ಲಿ, ಅಲ್ಲಿ ತಮ್ಮ ಪಾತ್ರವೇನೂ ಇಲ್ಲವೆಂಬ ಭಾವನೆಯ ಸಮಾಧಾನದೊಂದಿಗೆ ತಂತಮ್ಮ ದುಡಿಮೆಯ ತಾಣಗಳತ್ತ ಧಾವಿಸಿ ಸಂಜೆ ಆ ಭಯಾನಕ ದೃಶ್ಯವನ್ನು ತಮ್ಮ ಗೆಳೆಯರೊಂದಿಗೆ ಲೊಚ್ ಪಚ್ ಎಂದು ಹಂಚಿಕೊಳ್ಳುತ್ತಾ ತಮ್ಮ ಮಾನವ ಧರ್ಮ ಪಾಲನೆ ಮಾಡುವಂತೆ ಪತ್ರಿಕೆಗೆ ಉದಾರವಾಗಿ ಚಂದಾ ಕೊಟ್ಟು, ಓದಿ ಮೆಚ್ಚಿ ತಮ್ಮ ಧರ್ಮ ಪಾಲನೆ ಮಾಡಿದ್ದಾರೆ. ನಾನು ಬೇಕೆಂದೇ ಈ ಉಪಮೆಯಲ್ಲಿ ರಸ್ತೆ ಅಪಘಾತ, ಅರೆಜೀವಗಳು,, ಮೂಲ ಮಾನವೀಯತೆಯನ್ನೂ ಅದುಮಿಡುವಂತಹ ಕೆಲಸಗಳಿಗೆ ಹೋಗುವ ಧಾವಂತ ಸೃಷ್ಟಿಸುವ ಇಂದಿನ ದುಡಿಮೆಯ ಸ್ವರೂಪ, ಮತ್ತು ಸಂಜೆಯ ಧರ್ಮ ಪಾಲನೆಯ ರೀತಿಯನ್ನು ಸೂಚಿಸಿರುವೆ. ಇವೆಲ್ಲ ಯಾವುದರ ಪರಿಣಾಮಗಳು?

ಇದನ್ನೆಲ್ಲ ಹೇಳಿದರೆ ನನ್ನ ಗೆಳೆಯರು ನಿಮಗೆ ಯಾವ ಕಾಲದಲ್ಲಿ ಯಾವ ಪುರಾಣ ಹೇಳಬೇಕೆಂಬ ಪರಿವೆಯೇ ಇದ್ದಂತಿಲ್ಲ ಎನ್ನುವರು. ಹಾಗಾದರೆ ನಾನು ನನ್ನ ಆರೋಗ್ಯವನ್ನೂ ಲೆಕ್ಕಿಸದೆ ಇವರಿಗೆ ಈ ಪುರಾಣ ಹೇಳಲು ಏಕೆ ನನ್ನ ಕಾಲ ಮತ್ತು ಶಕ್ತಿಯನ್ನು ವ್ಯಯ ಮಾಡಿಕೊಳ್ಳಬೇಕು? ನೀವೇ ಹೇಳಿ, ಪತ್ರಿಕೆ ನಿಲ್ಲಬಾರದೆಂದು ಹೇಳುತ್ತಿರುವ ಓದುಗರೇ! ದಯವಿಟ್ಟು ಕ್ಷಮಿಸಿ.

*****

ನಮ್ಮ ಮುಖ್ಯಮಂತ್ರಿ ಸಿದ್ಧರಾಮಯ್ಯ ಕುಲಗೆಟ್ಟು ಹೋಗಿರುವ ರಾಜ್ಯ ಸಭೆಗೆ ನಡೆದ ಚುನಾವಣೆಗಳಲ್ಲಿ ಅದನ್ನು ಮತ್ತಷ್ಟು ಕುಲಗೆಡಿಸುವಂತಹ ರಾಜಕಾರಣ ಮಾಡಿ ಒಬ್ಬ ಹೆಚ್ಚುವರಿ ಕಾಂಗ್ರೆಸ್ ಸದಸ್ಯನನ್ನು ಅಲ್ಲಿಗೆ ಕಳಿಸಿದ್ದನ್ನು ಮೆಚ್ಚಿಯೇ ಏನೋ ಸೋನಿಯಾ ಗಾಂಧಿಯವರು ಅವರಿಗೆ ಸಂಪುಟ ಪುನಾರಚನೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದೇ ಕಾರಣವಾಗಿ ಅವರೀಗ ಸಂಕಷ್ಟಕ್ಕೆ ಸಿಕ್ಕಿದಂತಿದೆ. ನಿಜ, ಈ ಪುನಾರಚನೆ ಸಿದ್ಧರಾಮಯ್ಯನವರು ಇತ್ತೀಚೆಗೆ ಅಪರೂಪಕ್ಕೆ ಮಾಡಿರುವ ಒಳ್ಳೆಯ ಕೆಲಸ. ಭ್ರಷ್ಟ ಮತ್ತು ಅದಕ್ಷರನ್ನು ಸಂಪುಟದಿಂದ ಹೊರಹಾಕಿದ್ದಾರೆ. ಆದರೆ ಅದೇ ಅವರ ಸಂಕಷ್ಟಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಎಂದರೆ ಇದೇ! ಭ್ರಷ್ಟರು ಮತ್ತು ಅದಕ್ಷರು ಇದ್ದರೇನೇ ಕಾಂಗ್ರೆಸ್ ನೆಮ್ಮದಿಯಿಂದ ಇರಬಲ್ಲುದು! ಅಂದ ಮಾತ್ರಕ್ಕೆ ಪುನಾರಚನೆ ಪರಿಪೂರ್ಣವೆಂದೇನೂ ಅಲ್ಲ. ದೇಶಪಾಂಡೆ ಮತ್ತು ಮಹದೇವಪ್ಪನವರನ್ನು ಕೈಬಿಡಲು ಎಲ್ಲ ಕಾರಣಗಳೂ ಇದ್ದವು. ಹಾಗೇ ಪ್ರಿಯಾಂಕ್ ಖರ್ಗೆ ಮತ್ತು ಎಸ್.ಎಸ್. ಮಲ್ಲಿಕಾರ್ಜುನರನ್ನು ಸೇರಿಸಿಕೊಳ್ಳಲು ಯಾವ' ಒಳ್ಳೆಯ ಕಾರಣಗಳೂ ಇರಲಿಲ್ಲ. ಕಾಂಗ್ರೆಸ್ ರಾಜಕಾರಣಕ್ಕೇ ವಿಶಿಷ್ಟವಾದ ಕಾರಣಗಳನ್ನು ಬಿಟ್ಟು! ಇದೇ ಮಾತನ್ನು ಡಿಕೆಶಿ ಮತ್ತು ರೋಷನ್ ಬೇಗ್ ಸಂಪುಟದಲ್ಲಿ ಉಳಿದುಕೊಂಡಿರುವುದಕ್ಕೂ ಅನ್ವಯಿಸಿ ಹೇಳಬಹುದು.ಅದೇನೇ ಇದ್ದರೂ ಮೊನ್ನೆಯ ವಿಧಾನ ಪರಿಷತ್ ಚುನಾವಣಾ ಫಲಿತಾಂಶಗಳನ್ನು ನೋಡಿದರೆ, ಇಂತಹ ಯಾವ ಅರೆಬರೆ ಕಸರತ್ತೂ ಕಾಂಗ್ರೆಸ್ಸನ್ನು ಉಳಿಸುವಂತೆ ಕಾಣುವುದಿಲ್ಲ. ಇದನ್ನು ಮೀರಿದ ಜನ ಮೆಚ್ಚುವಂತಹ ಕೆಲಸಗಳನ್ನು ಮುಖ್ಯಮಂತ್ರಿಗಳು ಕ್ಷಿಪ್ರವಾಗಿ ಕೈಗೆತ್ತಿಕೊಳ್ಳಬೇಕಿದೆ

**-ಸಂಪಾದಕ**


## ಹೊಸಮನುಷ್ಯ ವಾರ್ಷಿಕ ವಿಶೇಷ ಸಂಚಿಕೆ-೨೦೧೬

**ಪತ್ರಿಕೆಯು ತನ್ನ ಐದು ವರ್ಷಗಳನ್ನು ಪೂರೈಸಿದ್ದರ ಸಂಭ್ರಮದಲ್ಲಿ ಹೊರತರಲಾಗುತ್ತಿರುವ ಈ ವಾರ್ಷಿಕ ವಿಶೇಷ ಸಂಚಿಕೆ ಒಂದು ಸಮೃದ್ಧ ಸಾಂಸ್ಕೃತಿಕ ಸಂಪುಟವನ್ನಾಗಿ ಹೊರತರಲು ಸಿದ್ಧತೆಗಳು ನಡೆಯುತ್ತಿವೆ-**

**ವಿಶೇಷ ಲೇಖನಗಳು:**

*ಲೌಕಿಕ-ಪಾರಮಾರ್ಥಿಕ ಎಂಬುವು ಎರಡಲ್ಲ; ಒಂದು:* ಲಕ್ಷ್ಮೀಶ ತೋಳ್ಪಾಡಿ ಅವರಿಂದ

*'ಮಾಧ್ಯಮಗಳ ಮಾಯಾಬಜಾರ್'* : ಹಿರಿಯ ಮಾಧ್ಯಮ ತಜ್ಞ ಡಾ. ಎಚ್.ಎಸ್. ಈಶ್ವರ ಅವರಿಂದ

**ಅರುಂಧತಿ ರಾಯ್‌ಗೊಂದು ಬಹಿರಂಗ ಪತ್ರ:** ಅಮೆರಿಕನ್ ಪ್ರಜೆಯೊಬ್ಬರಿಂದ ಗಾಂಧಿ ಕುರಿತ ಪಾಠಗಳು

**ಲೋಹಿಯಾರ ಸ್ತ್ರೀವಾದದ ಒಂದು ಶೋಧನೆ:** ಡಾ. ಜಯಾ ಶ್ರೀವಾಸ್ತವ ಅವರಿಂದ

ಸಮಾಜ ಪರಿವರ್ತನಾ ಸಂಸ್ಥೆಯ ಮುಖ್ಯಸ್ಥ ಎಸ್. ಆರ್. ಹಿರೇಮಠರೊಂದಿಗೆ ಸರ್ಜಾಶಂಕರ್‌ರ ಸಂದರ್ಶನ

ಚನ್ನವೀರ ಕಣವಿ, ಎಸ್. ಮಂಜುನಾಥ್, ಸುಬ್ಬು ಹೊಲೆಯಾರ್, ಜ.ನಾ.ತೇಜಶ್ರೀ, ಕಾವ್ಯಶ್ರೀ ಮತ್ತಿತರರ ಕಾವ್ಯ ಲಹರಿ

ಬಿ.ಟಿ. ಜಾಹ್ನವಿ ಅವರ ಸಣ್ಣಕಥೆ

ಜಯಂತ ಕಾಯ್ಕಿಣಿ ಅವರ ಕುತೂಹಲಕಾರಿ ಲೇಖನ

ವಿಜಯೇಂದ್ರ ಪಾಟೀಲರ ವಿಶಿಷ್ಟ ವಿನೋದ ಲಹರಿ

ನಮ್ಮ ಸಮಾಜವಾದಿಗಳು ಅಂಕಣದಲ್ಲಿ ಮಧು ಲಿಮಯೆ ಪರಿಚಯ

ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆಯ ಕೊನೆಯ ಪುಷ್ಪ

ಹಾಗೂ ಇತರ ಸ್ಥಿರ ಶೀರ್ಷಿಕೆಗಳು, ಸಿನಿಮಾ-ಕ್ರೀಡೆಗಳ ಕುರಿತ ವಿಶೇಷ ನೋಟಗಳು ಇತ್ಯಾದಿ ಇತ್ಯಾದಿ...

ಈ ಸಂಚಿಕೆ ಸಮೃದ್ಧವಾಗಿ ಬರಲು ನಿಮ್ಮ ಸಹಕಾರ ಅಗತ್ಯ. ದಯವಿಟ್ಟು ಈ ವಿಶೇಷ ಸಂಚಿಕೆಗೆ ನಿಮ್ಮ ಕೈಲಾದಷ್ಟು ಜಾಹೀರಾತು

**<u>ನಮ್ಮ ಜಾಹೀರಾತು ದರಗಳು</u>:** ಒಳ ಪುಟಗಳ ಕಪ್ಪು-ಬಿಳುಪು ಜಾಹೀರಾತು: ಪೂರ್ಣಪುಟ: ಮೂರು ಸಾವಿರ ರೂಪಾಯಿಗಳು: ಅರ್ಧ ಪುಟ: ಒಂದೂವರೆ ಸಾವಿರ ರೂಪಾಯಿಗಳು ಕಾಲು ಪುಟ: ಏಳುನೂರಾ ಐವತ್ತು ರೂಪಾಯಿಗಳು

ಜಾಹೀರಾತುಗಳ ವಿವರ ನಮ್ಮನ್ನು ಜುಲೈ ಹದಿನೈದರೊಳಗಾಗಿ ಜಾಹೀರಾತು (ಡಿಡಿ ಅಥವಾ ಚೆಕ್ ರೂಪದಲ್ಲಿನ) ಶುಲ್ಕದೊಂದಿಗೆ ತಲುಪಬೇಕು.

**ವಿಶೇಷ ಸಂಚಿಕೆಯ ಬಿಡುಗಡೆ: ಆಗಸ್ಟ್ ಎರಡನೇ ವಾರದಲ್ಲಿ**

# ನಮ್ಮ ಸಮಾಜವಾದಿಗಳು | ಸರಳ ಸಜ್ಜನಿಕೆಯ ಹೋರಾಟಗಾರ ಎಸ್.ಎಂ. ಜೋಷಿ



**ಭಾ**ರತದ ಸಮಾಜವಾದದ ಇತಿಹಾಸದಲ್ಲಿ ಸ್ವಾತಂತ್ರ ಚಳುವಳಿಯ ಕಾಲದಲ್ಲೆ ಸಾಮಾಜಿಕ ನ್ಯಾಯದ ಸಿದ್ಧಾಂತಕ್ಕಾಗಿ ಹೋರಾಡಿದ ಪ್ರಖರ ಸಮಾಜವಾದಿ ಚಿಂತಕರಲ್ಲಿ ಎಸ್.ಎಂ.ಜೋಷಿ ಕೂಡಾ ಒಬ್ಬರು. ಸರಳ, ಪಾರದರ್ಶಕ ವ್ಯಕ್ತಿತ್ವ, ನಿರ್ಭಿಡೆಯ ನೇರವಂತಿಕೆಗೆ ಹೆಸರಾಗಿದ್ದ ಶ್ರೀಧರ ಮಹಾದೇವ ಜೋಷಿ ತಮ್ಮ ಆಪ್ತರ ವಲಯದಲ್ಲಿ ಎಸ್.ಎಂ. ಎಂದೇ ಚಿರಪರಿಚಿತರಾಗಿದ್ದರು.

ಎಸ್.ಎಂ. ಜನಿಸಿದ್ದು ೧೯೦೪ರ ನವೆಂಬರ್ ೧೨ರಂದು ಪುಣೆ ಜಿಲ್ಲೆಯ ಜುನ್ನಾರ್ ಎಂಬಲ್ಲಿ. ಅವರದ್ದು ಒಂದು ಕೆಳ ಮಧ್ಯಮವರ್ಗದ ಕುಟುಂಬ. ಆದರ್ಶಗಳು ಹುಟ್ಟುವುದು ಸಂಕಷ್ಟಗಳ ನಡುವೆಯೇ ಎನ್ನುವ ಮಾತಿನಂತೆ ಎಸ್.ಎಂ. ಬದುಕಿನುದ್ದಕ್ಕೂ ತಮ್ಮನ್ನು ಗುರುತಿಸಿಕೊಂಡಿದ್ದು ಬಡ ಹಾಗೂ ತಳ ಸಮುದಾಯದ ಜನರೊಂದಿಗೆ. ವಿದ್ಯಾರ್ಥಿ ದೆಸೆಯಿಂದಲೇ ಅನ್ಯಾಯ, ಶೋಷಣೆಗಳ ವಿರುದ್ಧ ಧ್ವನಿ ಎತ್ತುವ ಸ್ವಭಾವ ಅವರದ್ದಾಗಿತ್ತು.

ಎಸ್.ಎಂ. ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದ ಕಾಲಕ್ಕೆ ತಮ್ಮ ತಂದೆಯನ್ನು ಕಳೆದುಕೊಂಡರು. ಈ ಕಾರಣಕ್ಕೆ ಅವರ ಕುಟುಂಬ ಹಲವು ತೊಂದರೆಗಳನ್ನು ಅನುಭವಿಸಬೇಕಾಯಿತು. ಇದರಿಂದ ವಿಚಲಿತರಾಗದ ಎಸ್.ಎಂ. ತಮ್ಮ ಪ್ರತಿಭೆಯ ಕಾರಣಕ್ಕೆ ವಿದ್ಯಾರ್ಥಿ ವೇತನದ ನೆರವಿನಿಂದಲೇ ಶಿಕ್ಷಣ ಮುಂದುವರೆಸಿದರು. ಆತ್ಮಗೌರವವೇ ಮನುಷ್ಯನ ಜೀವನದ ದೊಡ್ಡ ಸಂಪತ್ತು ಎಂದು ನಂಬಿದ್ದ ಎಸ್.ಎಂ.ರ ತಾಯಿ, ಅವರ ಬದುಕಿಗೆ ಸ್ಫೂರ್ತಿಯಾಗಿದ್ದರು.

ಎಸ್.ಎಂ. ಶಿಕ್ಷಣ ಪಡೆಯುತ್ತಿದ್ದ ಹೊತ್ತಿಗೆ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾವು ಏರುತ್ತಿತ್ತು. ಇದರ ಪ್ರಭಾವ ಅವರ ಮೇಲೆ ಆರಂಭವಾಗಿತ್ತು. ಬ್ರಿಟಿಷ್ ಅಧಿಕಾರಿಯೊಬ್ಬರು ಎಸ್.ಎಂ. ಓದುತ್ತಿದ್ದ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದಾಗ ಪ್ರತಿಭಟನೆಯ ಭಾಗವಾಗಿ ಅವರ ಮೇಲೆ ಎಸ್.ಎಂ. ಬ್ಯಾಡ್ಜ್ ಎಸೆದು ಶಾಲೆಯಿಂದ ಶಿಕ್ಷೆ ಅನುಭವಿಸಿದ್ದರು!

ಕಾಲೇಜಿನಲ್ಲಿದ್ದಾಗ ಎಸ್.ಎಂ. ಭಾಷಣ, ಪ್ರಬಂಧ ಸೇರಿದಂತೆ ಹಲವು ಸೃಜನಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ೧೯೨೮ರಲ್ಲಿ ಅವರು ನಡೆಸಿದ ಹರಿಜನರಿಗೆ ದೇವಸ್ಥಾನಕ್ಕೆ ಪ್ರವೇಶ ನೀಡುವ ಚಳುವಳಿ ಇಡೀ ದೇಶದ ಗಮನ ಸೆಳೆಯಿತು. ಕಾರ್ಲ್‌ಮಾರ್ಕ್ಸ್, ಗಾಂಧೀಜಿ, ಭಗತ್ ಸಿಂಗ್, ಚಂದ್ರಶೇಖರ ಆಜಾದ್, ಬಾಲಗಂಗಾಧರ ತಿಲಕ್ ಮೊದಲಾದವರ ಬರಹ, ಚಿಂತನೆಗಳಿಂದ ಆಕರ್ಷಿತರಾಗಿದ್ದ ಎಸ್.ಎಂ. ತಮ್ಮ ಗೆಳೆಯರಾದ ಎನ್.ಜಿ.ಗೋರೆ, ಆರ್.ಕೆ. ಖಾಡಿಲ್ಕರ್, ಶಿರುಬಾಹು ಲಿಮೆಯೆ ಅವರೊಂದಿಗೆ 'ಯುವಜನ ಸಭಾ' ಎಂಬ ಸಂಘಟನೆಯನ್ನು ಹುಟ್ಟುಹಾಕಿದ್ದರು. ಈ ಯುವಜನ ಸಭಾದ ಮೊದಲ ಸಮಾವೇಶ ೧೯೨೭ರಲ್ಲಿ ಮುಂಬಯಿನಲ್ಲಿ ನಡೆದಿತ್ತು.

ಯುವಜನ ಸಭಾದ ಎರಡನೇ ಸಮ್ಮೇಳನ ಪುಣೆಯಲ್ಲಿ ನೆಹರು ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆದ ನಂತರ ಬ್ರಿಟಿಷ್ ಸರ್ಕಾರ ಎಸ್.ಎಂ. ಮತ್ತು ಅವರ ಗೆಳೆಯರ ಗುಂಪು ಉನ್ನತ ಶಿಕ್ಷಣಕ್ಕೆ ಸೇರದಂತೆ ತಡೆಯೊಡ್ಡಿತ್ತು. ಅನೇಕ ಅಡೆತಡೆಗಳ ನಡುವೆಯೂ ಜನಪರ ಹೋರಾಟ ನಡೆಸುತ್ತಲೇ ಎಸ್.ಎಂ. ಕಾನೂನು ಪದವಿ ಪಡೆದರು. ನಂತರ ಅದರ ಬಲದಿಂದ ವೃತ್ತಿ ನಡೆಸಿ ಆರಾಂ ಆದ ಬದುಕು ನಡೆಸಬಹುದಾಗಿದ್ದ ಎಸ್.ಎಂ. ತುಳಿದಿದ್ದು ಭಿನ್ನ ಹಾದಿ.

೧೯೩೦ರಲ್ಲಿ ಕೊಂಕಣದ ಅಲಿಬಾಗ್ನ ತೀರದಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸ್ಫೂರ್ತಿಯುತ ಭಾಷಣ ಮಾಡಿ ಬೃಹತ್ ಜನಸಮೂಹದ ದೀರ್ಘ ಕರತಾಡನಕ್ಕೆ ಪಾತ್ರರಾದ ಜೋಷಿಯವರು ಪ್ರಥಮ ಬಾರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕಾಗಿ ಸೆರೆಮನೆ ಸೇರಬೇಕಾಯಿತು. ಬಿಡುಗಡೆಯ ನಂತರ 'ರಾಯ್ ದಿನ'ದ ಆಚರಣೆಯ ಸಂದರ್ಭದಲ್ಲಿ ಮಾಡಿದ ಭಾಷಣಕ್ಕೆ ಬ್ರಿಟಿಷ್ ಸರ್ಕಾರ ಅವರ ಮೇಲೆ ದೇಶದ್ರೋಹದ ಆರೋಪ ಹೊರಿಸಿ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಮುಂದೆ ೧೯೩೪ರಲ್ಲಿ ಮುಂಬೈನಲ್ಲಿ ಎಂ.ಎನ್.ರಾಯ್ ಅವರ ಬಿಡುಗಡೆಗೆ ಒತ್ತಾಯಿಸಿ ಭಾಷಣ ಮಾಡಿದ್ದಕ್ಕಾಗಿ ಎಸ್.ಎಂ. ಅವರಿಗೆ ಜೈಲು ಶಿಕ್ಷೆ ವಿಧಿಸಿ 'ಸಿ'ದರ್ಜೆಯ ಕಾರಾಗೃಹದಲ್ಲಿ ಬಂಧಿಸಿಡಲಾಗಿತ್ತು.

ಎನ್.ಜಿ.ಗೋರೆ, ಅಚ್ಯುತ್ ಪಟವರ್ಧನ್, ಯೂಸೂಫ್ ಮೆಹರ್ ಆಲಿ ಮೊದಲಾದವರೊಂದಿಗೆ ಸೇರಿ ಸೈಮನ್ ಕಮಿಷನ್ ವಿರುದ್ಧ ಯಶಸ್ವಿ ಪ್ರತಿಭಟನೆ ನಡೆಸಿದ ಶ್ರೇಯಸ್ಸು ಎಸ್.ಎಂ. ಅವರಿಗೆ ಸಲ್ಲುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ದೊರಕುವುದು ಎಂದರೆ ಕೇವಲ ವಸಾಹತುಶಾಹಿ ಆಡಳಿತದಿಂದ ಮುಕ್ತಿ ದೊರಕುವುದು ಮಾತ್ರವಲ್ಲ, ಬದಲಾಗಿ ಸಾಮಾಜಿಕ ಆರ್ಥಿಕ ಅಸಮಾನತೆಗಳ ಕೊನೆ ಕೂಡಾ ಎನ್ನುವುದು ಎಸ್.ಎಂ. ಅವರ ನಂಬಿಕೆಯಾಗಿತ್ತು.

ಹೋರಾಟದ ಬದುಕು ಮುಳ್ಳಿನ ಹಾಸಿಗೆ ಎನ್ನುವ ಕಾರಣಕ್ಕೆ ಎಸ್.ಎಂ. ಮದುವೆಯಾಗುವುದೇ ಬೇಡ ಎನ್ನುವ ತೀರ್ಮಾನಕ್ಕೆ ಬಂದಿದ್ದರು. ಆದರೆ ಎಸ್.ಎಂ.ರ ಕೆಚ್ಚು ಮತ್ತು ಆದರ್ಶದಿಂದ ಆಕರ್ಷಿತರಾಗಿದ್ದ ಶ್ರೀಮಂತ ಮನೆತನದ ತಾರಾ ಪೆಂಡ್ಸೆ ಎಂಬ ಯುವತಿ ಅವರ ಜೀವನ ಸಂಗಾತಿಯಾಗಿ ಸುಖ ದುಃಖಗಳಲ್ಲಿ ಭಾಗಿಯಾಗುವುದಾಗಿ ವಾಗ್ದಾನ ನೀಡಿದ ಕಾರಣಕ್ಕೆ ಅವರನ್ನೆ ಮದುವೆಯಾದರು. ತಾರಾ ಪೆಂಡ್ಸೆ ಶಾಲಾ ಉಪಾಧ್ಯಾಯಿನಿಯಾಗಿದ್ದರು.

೧೯೩೪ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಆರಂಭದಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಎಸ್.ಎಂ. ಕೂಡಾ ಒಬ್ಬರು. ಈ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾಗಿ ಅವರು ಮೂರು ವರ್ಷ ಕಾರ್ಯ ನಿರ್ವಹಿಸಿದ್ದರು. ನಂತರ ಪಕ್ಷದ ವಿವಿಧ ಪ್ರಮುಖ ಹುದ್ದೆಗಳಲ್ಲಿ ಅವರು ಕೆಲಸ ಮಾಡಿದರು.

೧೯೪೨ರಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳವಳಿಯ ಕಾವು ಜೋರಾದ ಸಂದರ್ಭದಲ್ಲಿ ಎಸ್.ಎಂ. ತಮ್ಮ ಗೆಳೆಯರೊಂದಿಗೆ ಸೇರಿ ಭೂಗತರಾಗಿ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಉರ್ದು ಭಾಷೆಯ ಮೇಲೆ ಹಿಡಿತ ಹೊಂದಿದ್ದ ಅವರು ಮೌಲ್ವಿಯೊಬ್ಬರ ವೇಷ ಧರಿಸಿ ಕರಾಚಿ ಪ್ರಾಂತ್ಯ ಸೇರಿದಂತೆ ವಿವಿಧ ಭಾಗಗಳಲ್ಲಿ ಸಂಚರಿಸಿ ಸಂಘಟನೆ ಕಾರ್ಯ ನಡೆಸಿದ್ದು ವಿಶೇಷ ಸಂಗತಿ. ೧೯೪೩ರಲ್ಲಿ ಬ್ರಿಟಿಷರು ಬಂಧಿಸಿದ ಹಲವು ಭೂಗತ ಸ್ವಾತಂತ್ರ್ಯ ಸೇನಾನಿಗಳ ಪೈಕಿ ಎಸ್.ಎಂ. ಕೂಡಾ ಒಬ್ಬರಾಗಿದ್ದರು. ಹೀಗೆ ಬಂಧಿತರಾದವರ ವಿರುದ್ಧ ಪ್ರಮುಖ ಸಾಕ್ಷಿ ದೊರೆಯದೇ ಇದ್ದರೂ ಬ್ರಿಟಿಷ್ ಸರ್ಕಾರ ಅವರ ವಿರುದ್ಧ 'ದೇಶದ ವಿರುದ್ಧ ಪಿತೂರಿ' ಆರೋಪ ಹೊರಿಸಿ ಜೈಲಿಗೆ ಅಟ್ಟಿತ್ತು.

ಸ್ವಾತಂತ್ರ್ಯಾನಂತರ ಸಮಾಜವಾದಿ ಪಕ್ಷದಿಂದ ೧೯೫೨ರ ಪ್ರಥಮ ಲೋಕಸಭಾ ಚುನಾವಣೆಗೆ ಪುಣೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಸ್.ಎಂ. ಅವರಿಗೆ ಯಶಸ್ಸು ದೊರಕಲಿಲ್ಲ. ಚುನಾವಣೆಯಲ್ಲಿ ಸೋತ ಕಾರಣಕ್ಕೆ ನಿರಾಶರಾಗದೇ ಜನರ ಸೇವೆಯಲ್ಲಿ ಮುಂದುವರೆದ ಎಸ್.ಎಂ. ೧೯೫೭ರಲ್ಲಿ ಮಹಾರಾಷ್ಟ್ರದ ವಿಧಾನಸಭೆಗೆ ಆಯ್ಕೆಯಾದರು. ೧೯೬೭ರ ಲೋಕಸಭೆ ಚುನಾವಣೆಯಲ್ಲಿ ಜಯಗಳಿಸುವ ಮೂಲಕ ಎಸ್.ಎಂ. ಸಂಸತ್ತಿಗೆ ಪ್ರವೇಶ ಮಾಡಿದರು. ಸಂಸದರಾಗಿ ತಮ್ಮ ಅಪಾರ ಜ್ಞಾನ ಸಂಪತ್ತನ್ನು ಬಳಸಿಕೊಂಡು ಅವರು ಮಾಡಿದ ಭಾಷಣಗಳು ಪ್ರಭಾವಶಾಲಿಯಾಗಿದ್ದನ್ನು ಇಂದಿಗೂ ಮರೆಯುವಂತಿಲ್ಲ.

ಪ್ರಜಾ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿದ್ದ (೧೯೬೩-೬೪) ಅಧ್ಯಕ್ಷರಾಗಿದ್ದ ಎಸ್.ಎಂ. ೧೯೬೪ರಲ್ಲಿ ಪಿ.ಎಸ್.ಪಿ ಹಾಗೂ ಎಸ್.ಪಿ. ಪಕ್ಷಗಳು ಒಂದಾಗಿ ಸಂಯುಕ್ತ ಸಮಾಜವಾದಿ ಪಕ್ಷ ರೂಪುಗೊಂಡಾಗ ಅದರ ಪ್ರಥಮ ಅಧ್ಯಕ್ಷರಾಗಿ ಎಸ್.ಎಂ. ಆಯ್ಕೆಯಾಗಿದ್ದರು. ೧೯೭೦ರ ದಶಕದ ಆರಂಭದಲ್ಲಿ ಜಯಪ್ರಕಾಶ್ ನಾರಾಯಣ್ ಅವರು ಆರಂಭಿಸಿದ 'ಸಂಪೂರ್ಣ ಕ್ರಾಂತಿ' ಚಳುವಳಿಯಲ್ಲಿ ಸಕ್ರಿಯರಾಗಿದ್ದ ಅವರು ೧೯೭೭ರಲ್ಲಿ ಆರಂಭಗೊಂಡ ಜನತಾ ಪಕ್ಷದ ಸ್ಥಾಪಕ ಸದಸ್ಯರಾಗಿದ್ದು ಮಹಾರಾಷ್ಟ್ರ ಘಟಕದ ಅಧ್ಯಕ್ಷರಾಗಿದ್ದರು. ತಮ್ಮ ಇಡೀ ರಾಜಕೀಯ ಜೀವನದ ತುಂಬ ವಿವಿಧ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ

**(೫ನೇ ಪುಟಕ್ಕೆ**

# ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ-೪೫

-ಇಂದಿರಾ ಬಿ.ಕೃಷ್ಣಪ್ಪ

## ಮನೆ–ಮಕ್ಕಳ ಚಿಂತೆಯಲ್ಲಿ...

ಮಾನವನ ಘನತೆಯ ಬದುಕಿಗೆ, ನೆಮ್ಮದಿಯ ಸೂರು, ಹಸಿವು ಮುಕ್ತ ಜೀವನ, ಶಿಕ್ಷಣ, ಇವುಗಳ ಬಗ್ಗೆ ನಾವೆಲ್ಲ ಮಾತಾಡ್ತ ಇರ್ತೇವೆ. ಈ ವಿಷಯದಲ್ಲಿ ನಮಗ್ಯಾವ ಕೊರತೆಯೂ ಇರಲಿಲ್ಲ. ಆದರೆ ಕೃಷ್ಣಪ್ಪನವರಿಗೆ ತಾನು 'ಒಂದು ಮನೆ ಕಟ್ಟಬೇಕು' ಅಂತ ಯಾವಾಗ ಮನಸ್ಸಿಗೆ ಬಂತೋ ಗೊತ್ತಿಲ್ಲ. ಬಹುಶ: ಅವರ ಗೆಳೆಯರ ಬಳಗದಲ್ಲಿ ಮಾತುಕತೆ ನಡೆದಿರಬೇಕು. ಶಿವಮೊಗ್ಗಾದ ಸಹ್ಯಾದ್ರಿ ಕಾಲೇಜು ಎದುರಿನ ರಸ್ತೆಯಲ್ಲಿ ಒಂದು ನಿವೇಶನವನ್ನು ಪಡೆಯಲು ಹತ್ತು ಸಾವಿರ ರೂ.ಗಳನ್ನು ಪಾವತಿಸಿ ಅಗ್ರಿಮೆಂಟನ್ನು ಮಾಡಿಕೊಂಡು ಬಂದಿದ್ದರು (೧೯೮೭). ಆ ನಿವೇಶನ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವ ಬಗ್ಗೆಯಾಗಲೀ, ದುಡ್ಡಿನ ವಿಷಯವೇ ಆಗಲೀ ನನ್ನೊಡನೆ ಚರ್ಚೆ ಮಾಡಿದ್ದೇ ಇಲ್ಲ. ಹಾಗೆ ಮಾಡಲಿಲ್ಲ ಎಂದು ಈಗೇನೂ ಬೇಸರವಿಲ್ಲ. ಆದರೆ ಆ ಮನೆ ಕಟ್ಟಿ ಮುಗಿಸೋದರೊಳಗೆ ಸಾಲದ ಹೊರೆ ತಲೆ ಮೇಲೆ ಬಿದ್ದಿತ್ತು ಮತ್ತು ಹಲವಾರು ತೊಂದರೆಗಳನ್ನು ಎದುರಿಸಬೇಕಾಯಿತು ಎಂಬುದನ್ನು ಇಲ್ಲಿ ತಿಳಿಸಬೇಕು. ಅವರಿಲ್ಲವಾದಾಗ, ನನ್ನ ಹೆಸರಿಗೆ ಆ ಮನೆ ವರ್ಗಾವಣೆ ಮಾಡಿಸಿಕೊಳ್ಳುವಾಗ, ಕಡತ ಹರಡಿಕೊಂಡಾಗ, ಸಂಕಷ್ಟಗಳ ಹಿನ್ನೋಟವೊಂದು ಕಣ್ಣ ಮುಂದೋಡಿತ್ತು. ಅವರ ನಿವೃತ್ತಿಯ ಜೀವನ ಹತ್ತಿರ ಬರ್‍ತಾ ಇದೆ ಅನ್ನೋದೊಂದು ಒಂದು ಕಡೆ, ದಸಂಸದಲ್ಲಿ ಪೂರ್ಣಾವಧಿಯಾಗಿ ತೊಡಗಿಕೊಳ್ಳಬೇಕೆಂಬ ಆಕಾಂಕ್ಷೆ ಮತ್ತೊಂದು ಕಡೆ, ಹಾಗೂ ಚುನಾವಣಾ ರಾಜಕೀಯಕ್ಕೆ ದಸಂಸ ತೆರೆದುಕೊಳ್ಳುತ್ತಿದ್ದುದು ಇನ್ನೊಂದು ಕಡೆ, ಇವೆಲ್ಲ ಸೇರಿ ಅವರನ್ನು ಮನೆ ಕಟ್ಟಲು ಪ್ರೇರೇಪಿಸುತ್ತಿತ್ತು ಎಂದೆನಿಸುತ್ತದೆ.

ಸಂಘಟನೆಯ ಟಿ. ರಾಜಣ್ಣನವರಿಂದ ಇಪ್ಪತ್ತು ಸಾವಿರಕ್ಕೆ ಪ್ರೊನೋಟ್ ಬರೆದುಕೊಟ್ಟು ಸಾಲ ಪಡೆದು, ಒಟ್ಟು ರೂ. ಮೂವತ್ತು ಸಾವಿರಕ್ಕೆ ನಿವೇಶನದ ಕ್ರಯ ಮಾಡಿದ್ದರು. ಇದೆಲ್ಲ ರಿಜಿಸ್ಟ್ರೇಶನ್ ಆದ ನಂತರವೇ ನನಗೆ ಗೊತ್ತಾಗಿದ್ದು. ಆದರೆ ಮನೆ ಕಟ್ಟೋಕೆ ದುಡ್ಡೆಲ್ಲಿದೆ? ಎಂಬ ಪ್ರಶ್ನೆ ಬಂದಾಗ, HDFC ಸಾಲ ಕೊಡುತ್ತಾರೆ ಅಂತ ಮಾಹಿತಿ ಸಿಕ್ತು. ಕೈ ಸಾಲ–ಬಾಯಿ ಸಾಲ ಮಾಡಿ, ಮನೆಯ ಅಡಿಪಾಯ ಹಾಕಿಸಿ, ಎಲ್ಲಾ ದಾಖಲೆಗಳೊಂದಿಗೆ, ನಾಲ್ಕಾರು ಬಾರಿ ಬೆಂಗಳೂರಿನ HDFC ಗೆ ಹೋಗಿ ಬಂದೆವು. ಸಹ ವಾರಸುದಾರಳಾಗಿ ನನ್ನನ್ನು ಮಾಡಿದ್ದರಿಂದ, ಒಂದೂವರೆ ಲಕ್ಷ ರೂ. ಗಳ ಸಾಲಕ್ಕೆ ನಮ್ಮಿಬ್ಬರ LIC ಬಾಂಡ್‌ಗಳು ಮತ್ತು ಮನೆಯನ್ನು pledge ಮಾಡಿಸಿಕೊಂಡರು. ಕೃಷ್ಣಪ್ಪ, ಕಾಲೇಜಿನ ಸಹಕಾರ ಸಂಘ, ಅಧ್ಯಾಪಕರ ಸಂಘ ಇತ್ಯಾದಿ ಕಡೆಗಳಿಂದ ಸಾಲ ತಂದರು. ನಾನಾಗ ಶಿವಮೊಗ್ಗಾ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೆಲಸ ಮಾಡುತ್ತಿದ್ದುದರಿಂದ, ವೇತನದ ಮೇಲಿನ ಸಾಲವನ್ನು ನಾನು ಸುಲಭವಾಗಿ ತಂದಿದ್ದೆ, ಸರ್ಕಾರಿ ನೌಕರರ ಸಹಕಾರ ಸಂಘದಿಂದ ಸಾಲ ಪಡೆದೆ. ಆ ಮನೆಯ ಅಂದಾಜು ವೆಚ್ಚ ಎರಡೂವರೆ ಲಕ್ಷ ರೂ. ಗಳನ್ನು ಹೊಂದಿಸಲು ಇನ್ನಿಲ್ಲದ ಪಡುಪಾಟಲು ಪಟ್ಟೆವು.

ನಾನು ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಕಟ್ಟಡ ನೋಡಲು ಹೋದರೆ; ಅವರು ಸಂಜೆ ಬರುತ್ತಿದ್ದರು, ಉಳಿದ ವೇಳೆಯಲ್ಲಿ ನಮ್ಮ ತಿಪ್ಪೇಶ ನೋಡಿಕೊಳ್ಳುತ್ತಾ ಇದ್ದ. ಆ ಸಂದರ್ಭದಲ್ಲಿ ನೆರವಿಗೆ ಡಾ. ಸಣ್ಣರಾಮ, ನಿಸಾರ್ ಅಹ್ಮದ್, ಮುನೀರ್ ಬಾಷಾ, ಗಿರಿಯಪ್ಪ, ಮುಂತಾದ ಗೆಳೆಯರ ಬಳಗವೇ ಇತ್ತು. ಕೃಷ್ಣಪ್ಪನವರಿಗೂ – ಕಂಟ್ರಾಕ್ಟದಾರನ ಮಧ್ಯೆ ವಾಗ್ವಾದವಾಗಿ, ಮನೆ ಕೆಲಸ, ಕಡೆ ಹಂತಕ್ಕೆ ಬಂದು ನಿಂತೇ ಹೋಯಿತು. ಸುಮಾರು ೭–೮ ತಿಂಗಳು ನಿಂತು ಹೋದ ಕೆಲಸವನ್ನು ಬೇರೆ ಕಂಟ್ರಾಕ್ಟರ್ ವಹಿಸಿಕೊಳ್ಳದೆ, ೨ನೇ ಕಂತಿನ ಹಣವೂ HDFC ಯಿಂದ ಬಿಡುಗಡೆಯಾಗದೆ, ಬಹಳ ತೊಂದರೆಗೆ ಸಿಲುಕಿಕೊಂಡೆವು. ಇದೇ ಸಂದರ್ಭದಲ್ಲಿ ಕೃಷ್ಣಪ್ಪ ಲೋಕಸಭಾ ಚುನಾವಣೆಯಲ್ಲಿ ಕೋಲಾರ ಮತಕ್ಷೇತ್ರದಿಂದ ಸ್ಪರ್ಧಿಸಿದ್ದರಿಂದ, ಮನೆ ಕೆಲಸ ಪೂರ್ಣ ನಿಂತೇ ಹೋಯಿತು. ಅಲ್ಲಿಂದ ಅವರು ಸೋತು ಹಿಂತಿರುಗಿದ ನಂತರ, ಗೆಳೆಯರು ಬೇರೆ ಕಂಟ್ರಾಕ್ಟರ್ ಗೊತ್ತು ಮಾಡಿದ್ದರಿಂದ, ಮನೆ ಪೂರ್ಣಗೊಂಡಿತು. ಆದರೆ ಒಳಗಿನ ಎಷ್ಟೋ ಕೆಲಸಗಳು ಬಾಕಿ ಉಳಿದವು. ಆಪ್ತಮಿತ್ರರು, ಗೆಳತಿಯರು, ಒಡನಾಡಿಗಳು, ಬಂಧುಗಳ ಮಿತ ಪರಿವಾರದೊಂದಿಗೆ ಮನೆ 'ನಿಸರ್ಗ'ದ ಗೃಹಪ್ರವೇಶವನ್ನು (೧೨.೦೭.೧೯೯೧) ಅತ್ಯಂತ ಸರಳವಾಗಿ ಮಾಡಿದ್ದೆವು.



ರುದ್ರಪ್ಪ ಹನಗವಾಡಿ–ಗಾಯತ್ರಿ ಅವರ ಕುಟುಂಬದೊಂದಿಗೆ ಬಿ. ಕೃಷ್ಣಪ್ಪ–ಇಂದಿರಾ ಕುಟುಂಬ ಸಿದ್ಧಗಂಗೆ ಬೆಟ್ಟಕ್ಕೆ ಪ್ರವಾಸ ಹೋದಾಗ

ಅತ್ಯಂತ ಶ್ರಮದಾಯಕವಾಗಿ, ಆರ್ಥಿಕವಾಗಿ ಹೊರೆಯಾದ ಮನೆಯಲ್ಲಿ ನಾವು ಇದ್ದದ್ದು ಕೇವಲ ೩ ದಿನಗಳು ಮಾತ್ರ. HDFC ಯಲ್ಲಿ ಅಡಮಾನ ಮಾಡಿದ ಮನೆ ಪತ್ರಗಳನ್ನು, ಕೃಷ್ಣಪ್ಪ ನಿವೃತ್ತಿಯಿಂದ ಬಂದ ಹಣದಿಂದ ಬಿಡಿಸಿಕೊಂಡಿದ್ದರು. LIC ಬಾಂಡ್‌ಗಳು ಅವರು ಇಲ್ಲವಾದಾಗ, ಅವಧಿ ಮುಗಿದಾಗ ಬಿಡುಗಡೆ ಪಡೆದಿದ್ದವು. ಮನೆಯನ್ನು ಸರ್ ಎಂ.ವಿ. ಕಾಲೇಜಿನಲ್ಲಿ, ಸಂಸ್ಕೃತ ಅಧ್ಯಾಪಕರಾಗಿದ್ದ, ಕೃಷ್ಣಪ್ಪನವರ ಸಹೋದ್ಯೋಗಿ ಶ್ರೀ ಸತ್ಯನಾರಾಯಣ ಶಾಸ್ತ್ರಿಯವರಿಗೆ ಲೀಸ್‌ಗೆ ಕೊಡಲಾಯಿತು. ನಂತರ ಪ್ರೊ.ರಾಜೇಂದ್ರ ಚೆನ್ನಿಯವರಿಗೆ, ತದನಂತರ, ಪ್ರೊ. ಅಂಗಡಿಯವರಿಗೆ ಲೀಸ್‌ಗೆ ಕೊಡಲಾಗಿತ್ತು. ಲೀಸ್‌ನಿಂದ ಪಡೆದ ಹಣದಿಂದ ಅವರು ಪಡೆದ ಕೈಸಾಲವನ್ನೆಲ್ಲಾ ತೀರಿಸಿದರೆಂದು ಕಂಡು ಬರುತ್ತದೆ. ಆದರೆ ಪ್ರೊ .ಅಂಗಡಿಯವರಿಂದ ಪಡೆದ ಸಾಲವನ್ನು, ನಾನು ಸಾಲಮಾಡಿ ತೀರಿಸಿದ್ದೆ. ಅವರೂ ಬಿಟ್ಟು ಹೋದ ನಂತರ, ಮನೆಯ ಒಳ ಆವರಣಗಳಲ್ಲಿನ ಬಾಕಿ ಕೆಲಸವನ್ನು ನಮ್ಮ ಆಪ್ತರಾದ ನಿಸಾರ್ ಅಹ್ಮದ್ ನೆರವಿನಿಂದ ಮಾಡಿದ್ದಾಯಿತು.

*****

ಹಿರಿಯ ಮಗಳು ಶಾಲಿನಿ, ಎಸ್.ಎಸ್.ಎಲ್.ಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿದ್ದಳು. ಅವಳು ವಿಜ್ಞಾನದಲ್ಲಿ ಆಸಕ್ತಳಾಗಿದ್ದರಿಂದ, ಪಿ.ಯು.ಸಿ. ಸೈನ್ಸ್ ಕಾಲೇಜಿಗೆ ಸೇರುವುದು ಅಂತನೂ ನಿಶ್ಚಯಿಸಿದ್ವಿ. ಮರು ವರ್ಷ ಎರಡನೇ ಮಗಳು ಸೀಮಾಳೂ ಎಸ್.ಎಸ್.ಎಲ್.ಸಿ.ಗೆ ಬರುವವಳಿದ್ದಳು. ಆದ್ದರಿಂದ ಇಬ್ಬರನ್ನೂ ಕೂರಿಸಿಕೊಂಡು, ಅವರ ತಂದೆ ಹೇಳಿದ್ದು – "ನೋಡ್ರಮ್ಮ ನಾನು ಅವರಿವರ ಬಳಿ ಹೋಗಿ, ಸೀಟು ಕೇಳುತ್ತಾ ಓಡಾಡಲಾರೆ. ನೀವು ಚೆನ್ನಾಗಿ ಓದಿರಿ. ನೀನು ನನ್ನ ಕಾಲೇಜಿನಲ್ಲಿ, ಪ್ರಿನ್ಸಿಪಾಲರ ಮಗಳು ಅಂತ ಹೇಳುವಂತಿಲ್ಲ. ನಿನ್ನ ಕಾಲೇಜು – ನಿನ್ನ ಓಡಾಟ, ನಿನ್ನ ಓದು ನಿನಗೇ ಸೇರಿದ್ದು".

ಅದರಂತೆ ಶಾಲಿನಿ ತನ್ನ ಗೆಳತಿಯರು, ಸಿಟಿ ಬಸ್, ಓಡಾಟಕ್ಕೆ ಮಾತ್ರ ಸೀಮಿತಳಾಗಿ ಪಿ.ಯು.ಸಿ ನಲ್ಲೂ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಳು. ನಂತರ ಸಿಇಟಿಗೂ ಅವರ ತಂದೆ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದರು. ಸಿಇಟಿ ಫಲಿತಾಂಶ ಬಂದಾಗ, ಎರಡೂ ಅಂಕಪಟ್ಟಿ ಕೈಲಿಡಿದು ಮನೆ ಹಿಂದಿನ ಅಂಗಳದಲ್ಲಿ ಮಗಳನ್ನು ಹತ್ತಿರ ಕೂರಿಸಿಕೊಂಡು ಲೆಕ್ಕಾಚಾರ ಹಾಕಿದ್ದೇ ಹಾಕಿದ್ದು. ಕಡೆಗೆ ನನ್ನನ್ನು ಕರೆದು, ಸಂತೋಷದಿಂದ, ಮಗಳನ್ನು ಕರೆದುಕೊಂಡು ಸೀಟು ಹಂಚಿಕೆಗಾಗಿ ಬೆಂಗಳೂರಿಗೆ ಹೋಗಬೇಕೆಂದು ಹೇಳಿದ್ದರು. ಅಪ್ಪ ಮಗಳು ಬೆಂಗಳೂರಿಗೆ ರಾತ್ರೋ ರಾತ್ರಿ ಹೊರಟು ಸೀಟ್ ಕೌನ್ಸಿಲಿಂಗ್‌ನಲ್ಲಿ, ದಾವಣಗೆರೆ ಡೆಂಟಲ್ ಕಾಲೇಜಿನಲ್ಲಿ ಅವಕಾಶ ಪಡೆದು ಬಂದಿದ್ದರು. ಕೃಷ್ಣಪ್ಪನವರ ಸಹೋದರಿ ಗಂಗಮ್ಮನವರು ಅಲ್ಲೇ ಇದ್ದುದರಿಂದ ಶಾಲಿನಿಗೆ ಆಸರೆಯಾಗುತ್ತೆ ಅಂತ ನಮಗೆ ಸಮಾಧಾನವಾಯ್ತು.

ಇದೇ ಮೊದಲಬಾರಿಗೆ, ನಮ್ಮಿಂದ ದೂರವಿದ್ದ ಶಾಲಿನಿಗೆ, ಅಲ್ಲಿಯ ಹಾಸ್ಟೆಲ್ ಊಟ–ತಿಂಡಿ, ಸಹಪಾಠಿಗಳು ಸರಿಹೊಂದದೇ ಇದ್ದುದರಿಂದ, ವಾರಕ್ಕೊಮ್ಮೆ ಭದ್ರಾವತಿಗೆ ಬಂದು ಬಿಡುತ್ತಿದ್ದಳು. "ನೀನು ಆಗಾಗ್ಗೆ ಬರಬೇಡ,

ನಾನೇ ಬರ್ತೀನಿ. ನೀನು ಓದು" – ಅಂತ ಹೇಳಿ ಕಳಿಸೋರು. ಆದರೂ ಸಮಾಧಾನ ಆಗ್ತಾ ಇರಲಿಲ್ಲ. ಮತ್ತೆ ಮತ್ತೆ ಮನೆಗೆ ಬಂದು ಬಿಡ್ತಾ ಇದ್ಳು. "ಹಾಸ್ಟೆಲ್‌ಬೇಡ, ಅತ್ತೆ ಮನೆಯಲ್ಲೇ ಇರು. ಅಲ್ಲಿ ಯಶೋದ, ಮಂಜು, ಆನಂದ ಎಲ್ಲರೂ ಇರುತ್ತಾರೆ ಅಂದರೂ ಅವಳು ಮನಸ್ಸು ಮಾಡಲಿಲ್ಲ.. ಮತ್ತೆ ಸಿ.ಇ.ಟಿ. ಬರೀತಿನಿ. ಬೇರೆ ಕಾಲೇಜಿಗೆ ಹೋಗ್ತೀನಿ ಅಂತ ದು:ಖಿತಳಾಗ್ತಾ ಇದ್ದಳು.

ಮರು ವರ್ಷ ಕಾಲೇಜುಗಳು ಆರಂಭವಾದವು. "ಇವಳನ್ನ ನಮ್ಮ ಕಾಲೇಜಿನಲ್ಲಿ ಬಿ.ಎಸ್ಸಿ ಗೆ ಸೇರಿಸೋಣ" ಅಂದರು. ನಾನು, 'ಅವಳನ್ನು ಕೇಳೋಣ' ಅಂದೆ. ಅವರಿಗೆ ಸಿಟ್ಟು ಎಲ್ಲಿತ್ತೋ, ಧುಮ್ಮಿಕ್ಕಿ ಬಂದಿತ್ತು. 'ಆಡ್ಮಿಷನ್ ಮುಗೀತಾ ಇದೆ. ಕಡೆಗೆ ಅಲ್ಲೂ ಇಲ್ಲ, ಇಲ್ಲೂ ಇಲ್ಲ ಅಗುತ್ತೆ. ಇವಳಿಗೇನು ಮನೆ ಬಾಗಿಲಿಗೆ ಸೀಟು ಸಿಗುತ್ತಾ?' ಎಂದು ಕೂಗ್ತಾ, ಸ್ಕೂಟರ್ ಹತ್ತಿ ಹೊರಟೇಬಿಟ್ಟರು. ಆವತ್ತು ರಾತ್ರಿ ಮತ್ತೆ ಅದೇ ವಿಚಾರ ಬಂತು. ಮಗಳು, ನಾನು ಮತ್ತೆ ಸಿಇಟಿ ಬರೀತೀನಿ ಅಂತ ಅಳ್ತಾ ಇದ್ದರೆ, ಕೃಷ್ಣಪ್ಪ, "ಇವಳು ಏನೂ ಮಾಡಲ್ಲ ನೋಡು, ಕಡೆಗೆ ಬಿ.ಎಸ್ಸಿನೂ ಆಗಲ್ಲ" ಎಂದು ಊಟದ ತಟ್ಟೆ ಎತ್ತಿ ಬಿಸಾಕಿ ಎದ್ದು ಹೋದರು. "ಅವಳು ಮಾಡ್ತೀನಿ ಅಂತಾಳೆ, ಇನ್ನೊಂದು ಅವಕಾಶ ಕೊಡೋಣ" – ಅಂತ ನಾನು ಇಬ್ಬರನ್ನು ಸಮಾಧಾನ ಮಾಡಿದ್ದೆ.

ಕೃಷ್ಣಪ್ಪ ಪಿ.ಯು.ಸಿ.ನಲ್ಲಿ ವಿಜ್ಞಾನ ವಿಷಯ ತೆಗೆದುಕೊಂಡಿದ್ದರು. ಅವರಿಗೆ ವೈದ್ಯರಾಗಬೇಕೆಂದು ಇಚ್ಛೆ ಇದ್ದಿತ್ತು. ಹಣಕಾಸಿನ ತೊಂದರೆಯಿಂದಾಗಿ ಮೊದಲು ಬಿ.ಎಸ್ಸಿಗೆ ಸೇರಿದ್ರು. ಅದನ್ನೂ ಬಿಟ್ಟು, ಮೈಸೂರಿನಲ್ಲಿ ಮಹಾರಾಜ ಕಾಲೇಜಿನಲ್ಲಿ ಬಿ.ಎ ಪದವಿಗೆ ಸೇರಿದರು. ನಂತರ ಸಹೋದರ ಮಾರುತಿಯನ್ನು ವೈದ್ಯನನ್ನಾಗಿ ಮಾಡಬೇಕು ಅಂತ ಪ್ರಯತ್ನಿಸಿದ್ರು. ಅವನೂ ಆಗಲಿಲ್ಲ. ಈಗ ಮಗಳಲ್ಲಿ ಆ ಆಶಯವನ್ನು ಕಾಣಲಿಕ್ಕೆ ಪ್ರಯತ್ನಿಸಿದ್ದರು. ಪುನಃ ಸಿ.ಇ.ಟಿ ಬರೆದಳು, ಶಿವಮೊಗ್ಗದಲ್ಲಿ ಅದಾಗ ತಾನೇ ಪ್ರಾರಂಭವಾದ 'ಶರಾವತಿ ಡೆಂಟಲ್ ಕಾಲೇಜಿನಲ್ಲಿ' ಸೀಟು ಸಿಕ್ಕಿತ್ತು. ಮನೆಯಿಂದ ಓಡಾಟ ಅವಳಿಗೆ ನೆಮ್ಮದಿ ಕೊಟ್ಟಿತ್ತು.

ಅಷ್ಟರಲ್ಲಾಗಲೇ, ಎರಡನೇ ಮಗಳು ಸೀಮಾ ಪಿಯುಸಿ ಮುಗಿದಿತ್ತು. ಅವಳು ಭರತನಾಟ್ಯ ಕಲಿಯುತ್ತಿದ್ದುದರಿಂದ, ಮತ್ತು ಅದರಲ್ಲಿ ಅತೀವ ಆಸಕ್ತಿ ಇದ್ದುದರಿಂದ, ಮೈಸೂರಿನಲ್ಲಿ ವಸುಂಧರಾ ದೊರೆಸ್ವಾಮಿಯವರಲ್ಲಿ, ಶಿಷ್ಯಳಾಗಿ ಕಲಿಯಬಹುದೆಂಬ ಸಲಹೆಗಳು ಬಂದವು. ಪಿಯುಸಿ ಮತ್ತು ಭರತನಾಟ್ಯ ಎರಡಕ್ಕೂ ಅವಕಾಶವಾಗುವಂತೆ, ಮೈಸೂರಿನಲ್ಲಿ ಮಹಾರಾಣಿ ಕಾಲೇಜಿಗೆ ಸೇರಿಸಿ ಬಂದಿದ್ವಿ. ಮೈಸೂರಿನಲ್ಲಿ, ರುದ್ರಪ್ಪ ಹನಗವಾಡಿ– ಗಾಯಿತ್ರಿಯವರಿದ್ದುದು, ಮಗಳ ಬೇಕು ಬೇಡಗಳನ್ನು ಗಮನಿಸಲು ನಮ್ಮವರೇ ಇದ್ದಾರೆಂಬ ನೆಮ್ಮದಿ ನಮ್ಮದಾಗಿತ್ತು.

ಆಗ ಒಬ್ಬಳು ದಾವಣಗೆರೆ, ಒಬ್ಬಳು ಮೈಸೂರು, ಬಾಕಿ ಉಳಿದವರು ಹರಿಹರಕ್ಕೆ ಹೋಗಿದ್ದರು. ನಾವಿಬ್ಬರೇ ಮನೆಯಲ್ಲಿ, ಮನೆ–ಮನಸ್ಸು ಬಿಕೋ ಅಂತಿತ್ತು. ಆಗೊಮ್ಮೆ ಮೈಸೂರಿಂದ ಬಂದಿದ್ದ ಗಾಯಿತ್ರಿ–ರುದ್ರಪ್ಪ, 'ಈವತ್ತೇ ನೋಡಿ, ನೀವಿಬ್ರೆ ಇರೋದನ್ನ ನೋಡಿದ್ದು!'– ಎಂದು ನಗುತ್ತಾ ಹೇಳಿದರು, ನಮಗೆ ಏಕಾಂತದ ಬದುಕೇ ಇಲ್ಲದ್ದನ್ನು ಜ್ಞಾಪಿಸಿ ಕೊಟ್ಟಿದ್ದರು. ಸೀಮಾ ಪಿಯುಸಿ ನಂತರ ಅದೇ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮುಂದುವರಿಸಿದಳು. ಕಾಲೇಜು, ಹಾಸ್ಟೆಲ್ – ಡ್ಯಾನ್ಸ್ ಕ್ಲಾಸ್, ಅಂತ ತೊಂದರೆ ಆಗಬಾರದು ಅಂತ ಅವಳಿಗೆ 'ಸ್ಕೂಟಿ' ಒಂದನ್ನು ಕೊಡಿಸಿದರು. ದಸಂಸದ ಕೆಲಸಗಳಿಗಾಗಿ, ಮೈಸೂರಿಗೆ ಆಗಾಗ್ಗೆ ಹೋಗ್ತಾ ಇದ್ದ ಕೃಷ್ಣಪ್ಪರವರಿಗೆ, ಮಗಳನ್ನು ನೋಡಿ ಬಂದ ಸಂತೋಷ ತುಂಬಿರುತ್ತಿತ್ತು.

*****

ದಸಂಸ ರಾಜ್ಯ ಸಂಚಾಲಕತ್ವದ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ಕೃಷ್ಣಪ್ಪ, ಧಾರವಾಡದಲ್ಲಿ ಕರೆದಿದ್ದ ರಾಜ್ಯ ಸಮಿತಿ ಸಭೆಗೆ ಪ್ರಜ್ಞಾಪೂರ್ವಕವಾಗಿಯೇ ಗೈರು ಹಾಜರಾದರೆಂದು ಕಂಡು ಬರುತ್ತದೆ. 'ನೀವು ಧಾರವಾಡಕ್ಕೆ ಏಕೆ ಬರಲಿಲ್ಲ? ನೀವು ಬರಲೇಬೇಕಿತ್ತು' ಎಂಬ ಕಳಕಳಿಯ ಪತ್ರಗಳು, ಮಾತುಗಳು ಕೇಳಿ ಬಂದವು. ಆಗ ಹಂಗಾಮಿ ರಾಜ್ಯ ಸಂಚಾಲಕರಾಗಿದ್ದ, ದೇವನೂರು ಮಹಾದೇವರನ್ನು ಅವಿರೋಧವಾಗಿ ರಾಜ್ಯ ಸಂಚಾಲಕರನ್ನಾಗಿ ಮಾಡಲಾಯಿತು. ಇವರ ಅವಧಿಯಲ್ಲಿ, ಕೃಷ್ಣಪ್ಪ, ಚಂದ್ರಪ್ರಸಾದ್ ತ್ಯಾಗಿ, ಕೆ.ರಾಮಯ್ಯ, ಇಂದೂಧರ ಹೊನ್ನಾಪುರ, ಮಂಗಳೂರು ವಿಜಯ ಇವರುಗಳು ಒಗ್ಗೂಡಿ ಚಳುವಳಿ ಮುನ್ನಡೆಸಿದ್ದರು. 'ಕುರಿಕೋಳಿ–ಸೀರೆತಾಳಿ ಬೇಡ. ಹೋಬಳಿಗೊಂದು ವಸತಿ ಶಾಲೆ ಕೊಡಿ' – ಎಂಬ ಶಿಕ್ಷಣದ ಸಾರ್ವತ್ರಿಕ ಕರೆ ೧೯೮೫ ರಲ್ಲಿ ಆರಂಭವಾಗಿ ಸುಮಾರು ೫–೬ ವರ್ಷಗಳವರೆಗೆ, ಕೈಗೆತ್ತಿಕೊಂಡ ದೀರ್ಘಾವಧಿಯ ಪ್ರಮುಖ ಹೋರಾಟವಾಗಿದೆ. ಆಂಧ್ರದ ಕಾರಂಚೇಡು ಹತ್ಯಾಕಾಂಡ ವಿರೋಧಿಸಲು ಆಂಧ್ರ ಮಹಾ ಸಭಾ ಹೈದ್ರಾಬಾದ್‌ನಲ್ಲಿ, ಅಖಿಲ ಭಾರತ ಮಟ್ಟದಲ್ಲಿ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ, ದಸಂಸ, "ಹೈದ್ರಾಬಾದ್ ಚಲೋ" ಕರೆಯೊಂದಿಗೆ ಭಾಗವಹಿಸಿದ್ದು (೧೩.೧೦.೮೫) ಡಾ. ಅಂಬೇಡ್ಕರ್ ಸ್ಮರಣ ದಿನವನ್ನು ಪ್ರತಿಜ್ಞಾ ದಿನವಾಗಿ (೦೬.೧೨.೮೫) ಆಚರಿಸಿದ್ದು, ನೆಲಮಂಗಲ ಪೋಲಿಸ್ ದೌರ್ಜನ್ಯದ ವಿರುದ್ಧ ಮುಖ್ಯಮಂತ್ರಿಗಳ ಮನೆಮುಂದೆ ಧರಣಿ (೩.೧೨.೮೫), ನಿವೇಶನಕ್ಕಾಗಿ ಗಲ್‌ಬಲ್‌ನಿಂದ–ಮೂಡಿಗೆರೆವರೆಗೆ ಕಾಲ್ನಡಿಗೆ ಜಾಥ (ನವೆಂಬರ್ ೩–೪) ಇತ್ಯಾದಿ ಅನೇಕ ಹೋರಾಟಗಳು ನಡೆದಿದ್ದವು.

ಪ್ರೊ. ಕೃಷ್ಣಪ್ಪ ಮತ್ತು ದೇವನೂರು ಮಹಾದೇವರವರ ಅನ್ಯೋನ್ಯವಾದ ಮೈತ್ರಿಯಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದವೇ ಹೊರತು ಸ್ನೇಹಕ್ಕೆ ಬೆರಳೆತ್ತಿ ತೋರಿಸುವಂಥಹದು ಕಿಂಚಿತ್ತೂ ಇರಲಿಲ್ಲ. ಅವರಿಬ್ಬರು ಸಂಘಟನಾತ್ಮಕವಾಗಿ, ತಾತ್ವಿಕವಾಗಿ ತೆಗೆದುಕೊಂಡ ನಿಲುವುಗಳನ್ನು, ಕೆಲವರು ಹಾಲಲ್ಲಿ ಹುಳಿ ಹಿಂಡಿದಂತೆ ಅಪಪ್ರಚಾರಕ್ಕೆ ಎಡೆ ಮಾಡಿಕೊಟ್ಟಿದ್ದರು. ದಸಂಸ ಉಗಮದಿಂದಲೂ ಕೃಷ್ಣಪ್ಪನವರೊಂದಿಗೆ ಮತ್ತು ಚಳುವಳಿಯೊಂದಿಗೆ ಅವರು ಬೆಸೆದುಕೊಂಡ 'ಸಂಬಂಧ' ಅವರ ಮಾತಿನಲ್ಲೇ ಹೇಳುವುದಾದರೆ, 'ಬಲು ದೊಡ್ಡದು ಕನಾ' ಎಂಬುದಾಗಿದೆ. ಅವರ ಪತ್ರಗಳು, 'ಪ್ರೀತಿಯ ಕೃಷ್ಣಪ್ಪ' ಎಂದೇ ಆರಂಭವಾಗಿ, 'ನಿಮ್ಮ ದೇಮಾ' ಎಂದು ಮುಕ್ತಾಯ ಹಾಡುತ್ತಿತ್ತು. ಪತ್ರಗಳಲ್ಲಿ, ಅಧಿಕಾರಯುತವಾಗಿ ಹೇಳುವ – ಕೇಳುವ – ಕರೆಯುವ – ಸಲಹೆ ನೀಡುವ ಆಪ್ತ ಮಿತ್ರನಂತಿರುತ್ತಿತ್ತು. ಅವರ 'ಕುಸುಮ ಬಾಲೆ' ಕಾದಂಬರಿ ಪ್ರಕಟವಾಗುವ ಮುನ್ನ ಕೃಷ್ಣಪ್ಪನವರಿಗೆ ಪತ್ರ ಬರೆದು "ನಿಮ್ಮ ಕೈಲಿ ನನ್ನ ಕಾದಂಬರಿ ಓದಿಸಬೇಕಿತ್ತು. ಯಾಕೆಂದರೆ, ದಲಿತ ಸಂಘದ ಹಿನ್ನೆಲೆ ಬರುತ್ತಾ, ಪುಟ– ೬೮ ರಲ್ಲಿ ಸ್ವಲ್ಪ ಗೇಲಿಯ ವಾತಾವರಣ ಇದೆ, ಅದು ನಿಮಗೆ ಬೇಸರವಾಗುವುದಾದರೆ, ನಿಮ್ಮ ಹೆಸರನ್ನು ತೆಗೆದು ಹಾಕಿ ಬಿಡುವೆ" ಎಂದೂ, ಆ ನಂತರ ಆ ಕಾದಂಬರಿಯ ಪುಟಗಳನ್ನು ಸ್ಟೆನ್ಸಿಲ್ ಮಾಡಿ ಕಳುಹಿಸುತ್ತಾ, 'ಇಲ್ಲಿನ ವಾತಾವಣ ತಿಳಿಹಾಸ್ಯವಾಗದೆ, ಗಂಭೀರವಾಗಿದ್ದರೆ ಕಲಾತ್ಮಕವಾಗಿ ಸೋಲುತ್ತಿತ್ತು. ಈ ತಿಳಿಹಾಸ್ಯವನ್ನು ಸಾಹಿತ್ಯಿಕವಾಗಿ ತೆಗೆದುಕೊಳ್ಳದೆ, ನೀವು ಬೇಸರ ಪಟ್ಟುಕೊಂಡು ಒಳಗೊಳಗೆ ಕೊರಗಬಹುದು ಎಂಬ ಆತಂಕದಿಂದ ಇದನ್ನು ಕಳುಹಿಸುತ್ತಿರುವೆ. ನಿಮಗೆ ಒಪ್ಪಿಗೆ ಆಗದ್ದು, ಯಾವುದಾದರೂ ಅಂಶವಿದ್ದರೆ ತಿಳಿಸಿ; ಬದಲಿಸುವೆ. ನಿಮಗೆ ನೋವಾದರೆ ನನಗೆ ತಳಮಳ ಉಂಟಾಗುವುದು" ಎಂದು ಬರೆದಿದ್ದರು. ಕನ್ನಡ ಸಾಹಿತ್ಯದ ಅಧ್ಯಾಪಕರು, ಬರಹಗಾರರು ಆಗಿದ್ದ ಕೃಷ್ಣಪ್ಪ, ನಕಾರಾತ್ಮಕ ಉತ್ತರ ಹೇಳದೆ ಇದ್ದುದರಿಂದ, ಕಾದಂಬರಿ ಯುಥಾವತ್ ಮುಂದುವರಿದಿತ್ತು.

ದಸಂಸದ ತ್ರಿಮೂರ್ತಿ ನಾಯಕರಂತಿದ್ದ ಬಿಕೆ, ದೇಮ ಮತ್ತು ಸಿದ್ದಲಿಂಗಯ್ಯನವರ ನಡುವೆ ಯಾವುದೇ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ, ಸಂಘಟನೆಯ ನೆಲೆಯಲ್ಲಿ ಆ ಮುವ್ವರೂ ಒಂದೇ ನಿರ್ಧಾರಕ್ಕೆ ಬರುತ್ತಿದ್ದರು ಎನ್ನುವುದಕ್ಕೆ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಅನೇಕ ತಾತ್ವಿಕ ಗೊಂದಲ–ಪ್ರಶ್ನೆಗಳನ್ನು ಹುಟ್ಟುಹಾಕಲಾಯಿತಾದರೂ–ಆ ಮೂವ್ವರೂ ಭಾಗವಹಿಸಿದ್ದೊಂದು ಸಾಕ್ಷಿ ಎಂಬುದನ್ನೂ ಇಲ್ಲಿ ದಾಖಲಿಸಬಹುದು.

**(ಮುಂದುವರೆಯುವುದು)**

---

**೩ನೇ ಪುಟದಿಂದ)**

ಕೆಚ್ಚೆದೆಯಿಂದ ಹೋರಾಡಿದ್ದವರಾದರೂ ಎಸ್.ಎಂ. ಯಾರ ಶತ್ರುತ್ವಕ್ಕೂ ಗುರಿಯಾಗದೆ 'ಅಜಾತ ಶತ್ರು' ಎಂದೇ ಹೆಸರಾಗಿದ್ದರು.

ರಾಜಕೀಯ ಚಟುವಟಿಕೆಗಳ ಜೊತೆಗೆ ಹಲವು ಕಾರ್ಮಿಕ ಸಂಘಟನೆಗಳಲ್ಲಿ ಸಾಮಾನ್ಯ ಕಾರ್ಯಕರ್ತರಂತೆ ಎಸ್.ಎಂ. ದುಡಿದಿದ್ದಾರೆ. ಪತ್ರಕರ್ತರಾಗಿಯೂ ಕೆಲಸ ಮಾಡಿರುವ ಅವರು ಅನೇಕ ಪತ್ರಿಕೆಗಳಿಗೆ ನಿರಂತರವಾಗಿ ಲೇಖನಗಳನ್ನು ಬರೆದು ಜಾಗೃತಿ ಮೂಡಿಸಿದ್ದಾರೆ. 'ಓರ್ಮಿ' ಎಸ್.ಎಂ.ಜೋಷಿ ಅವರ ಪ್ರಬಂಧಗಳ ಸಂಕಲನ. 'ಸಮಾಜವಾದಿಯ ನಡೆಯ ನಿಜದ ಹಾದಿ' 'ಭಾರತದಲ್ಲಿ ಭ್ರಷ್ಟಾಚಾರದ ಪಿಡುಗು, ಪರಿಹಾರಗಳು' ಸೇರಿದಂತೆ ಎಸ್.ಎಂ. ಅವರ ಹಲವು ಕೃತಿಗಳು ಬಿಡುಗಡೆಯಾಗಿವೆ. ಮರಾಠಿ ಹಾಗೂ ಹಿಂದಿ ಭಾಷೆಯಲ್ಲಿ ಅವರ ಆತ್ಮಕತೆ ಕೂಡಾ ಪ್ರಕಟಗೊಂಡಿದೆ.

೧೯೮೯ರ ಏಪ್ರಿಲ್ ೧ರಂದು ನಿಧನರಾದ ಎಸ್.ಎಂ. ಭಾರತ ಕಂಡ ಅಪರೂಪದ ಸಮಾಜವಾದಿ ಚಿಂತಕ ಮಾತ್ರವಲ್ಲದೆ ಬದ್ಧತೆಯಿಂದ ತಳಮಟ್ಟದ ಸ್ತರಗಳ ಹೋರಾಟದಲ್ಲಿ ಭಾಗಿಯಾದ ಸಾಮಾಜಿಕ ಕಳಕಳಿಯ ಅಪ್ರತಿಮ ವ್ಯಕ್ತಿ.

**–ಎಂ. ರಾಘವೇಂದ್ರ**

# ನಿಮ್ಮ ಪತ್ರ

**(ಈ ಬಾರಿ ತುಂಬ ಪತ್ರಗಳು/ಕರೆಗಳು/ಸಂದೇಶಗಳು ಬಂದಿರುವುದರಿಂದ, ಅನಿವಾರ್ಯವಾಗಿ ಅವನ್ನು ಸಂಕ್ಷಿಪ್ತಗೊಳಿಸಿ ಇಲ್ಲಿ ಪ್ರಕಟಿಸುತ್ತಿದ್ದೇವೆ**–ಸಂ.)

ಪ್ರಿಯ ಸಂಪಾದಕರೆ,

ಮೇ ತಿಂಗಳ 'ಹೊಸ ಮನುಷ್ಯ' ಸಂಚಿಕೆಯನ್ನು ಕೈಗೆತ್ತಿಕೊಂಡು, ಕಳೆದುಹೋಗಿರುವ ಬುದ್ಧನನ್ನು ಅರಸುತ್ತಾ ಹೊರಟಿರುವ ನಿಮ್ಮನ್ನು ಮತ್ತು ನೋವಿನ ಸ್ವರೂಪದ ಮೂಲವನ್ನು ಹುಡುಕಾಡುತ್ತಿರುವ ಲಕ್ಷ್ಮೀಶ ತೋಳ್ಪಾಡಿಯವರ ಲೇಖನಗಳನ್ನು ಪುನರ್‌ಮನನ ಮಾಡುತ್ತಿರುವಾಗಲೇ, ಜೂನ್ ಸಂಚಿಕೆ ಕೈಸೇರಿತು. ಅದರಲ್ಲಿನ ಪತ್ರಿಕೆ ನಿಲ್ಲಿಸುವ ನಿಮ್ಮ ಪ್ರಕಟಣೆ ಮತ್ತು ಅದಕ್ಕೆ ನೀಡಿರುವ ವಿವರಣೆ ಓದಿ ಆಘಾತವಾಯಿತು.

ಲಂಕೇಶ್ ಪತ್ರಿಕೆಯ ನಂತರ 'ಹೊಸ ಚಿಂತನೆಗಳಿಗೆ, ಆಲೋಚನೆಗಳಿಗೆ, ಆಯಾಮಗಳಿಗೆ ತೆರೆದುಕೊಂಡಿರುವ 'ಹೊಸ ಮನುಷ್ಯ' ಅದಕ್ಕಿಂತ ಹೆಚ್ಚು ಪ್ರಭಾವಶಾಲಿ, ಬದುಕಿನ ತುಲನಾತ್ಮಕ ನೋಟ ನೀಡುತ್ತಿದ್ದ ರೀತಿಯಲ್ಲಿ ಎಂದು ನನ್ನ ಅನಿಸಿಕೆ. ಯಾವುದೇ ವಿಷಯದ ಬಗೆಗೆ ಅದರ ಎಲ್ಲ ಮಗ್ಗುಲುಗಳನ್ನೂ ಪರಿಶೀಲಿಸುವ ನಿಮ್ಮ ಪತ್ರಿಕೆಯ ರೀತಿ ಅಮೋಘವೆಂದರೆ ಉತ್ಪ್ರೇಕ್ಷೆಯಲ್ಲ. ಹಾಗೆಯೇ ಓದುಗನನ್ನು ಮರುಚಿಂತನೆಗೆ ಹಚ್ಚುವ, ಪುನರ್‌ಮನನ ಮಾಡುವ, ಮನಸ್ಸನ್ನು ನೇರ್ಪುಗೊಳಿಸುವ ಕಲೆ ಮಾಯವಾಗುತ್ತಿದೆಯಲ್ಲಾ ಎನ್ನುವ ಆತಂಕ, ನೋವು ನನ್ನದು. 'ಲಂಕೇಶ್ ಪತ್ರಿಕೆ'ಯನ್ನು ಕಳೆದುಕೊಂಡಿದ್ದ ನೋವನ್ನು ಶಮನಗೊಳಿಸಿದ್ದ 'ಹೊಸ ಮನುಷ್ಯ'ನೂ ವಿದಾಯ ಹೇಳುತ್ತಿರುವ ಸುದ್ದಿ ಸಂಕಟಕಾರಿ.

ನಿಜ, ನೀವು ಪತ್ರಿಕೆ ನಿಲ್ಲಿಸಲು ನೀಡಿರುವ ಕಾರಣಗಳನ್ನು ಪ್ರಶ್ನಿಸುವ ದುಸ್ಸಾಹಸಗಳನ್ನು ನಾನು ಮಾಡಲಾರೆ. ಆದರೆ ನಿಮ್ಮಿಂದ ಬೌದ್ಧಿಕ ಲಾಭ ಪಡೆಯುತ್ತಿರುವ ನಾವು ನಿಮಗೆ ಸೂಕ್ತ ರೀತಿಯಲ್ಲಿ 'ಸಾಥ್' ನೀಡಲಾಗುತ್ತಿಲ್ಲ ಎಂಬ ಒಂದು ಸತ್ಯವನ್ನು ಮುಚ್ಚಿಡಲಾರೆ: ದಯವಿಟ್ಟು ನಿಮ್ಮ ತೀರ್ಮಾನವನ್ನು ಮುಂದೂಡಲಾರಿರಾ?

**–ನ್ಯಾ. ಎ.ಜೆ. ಸದಾಶಿವ,** ಬೆಂಗಳೂರು

ಯಾವತ್ತೂ ತಿಂಗಳ ಕೊನೆಯಲ್ಲಿ ಸಂತೋಷ ಕೊಡುತ್ತಿದ್ದ 'ಹೊಸ ಮನುಷ್ಯ'ದ ಪ್ರಕಟಣೆ ಸದ್ಯಕ್ಕಂತೂ ಕೊನೆಯಾಗುತ್ತಿದೆ ಎನ್ನುವುದು ನನಗಂತೂ ನಿರಾಶೆಯ ಸುದ್ದಿ. ಪ್ರಕಟಣೆಯನ್ನು ಸ್ಥಗಿತಗೊಳಿಸಲು ನೀವು ಕೊಡುವ ಕಾರಣಗಳು ಸಮಂಜಸವೇ ಆಗಿವೆ. ಈ ಸಂದರ್ಭದಲ್ಲಿ ನಾವು, ಎಂದರೆ ನಿಮ್ಮ ಪತ್ರಿಕೆಯ ಗ್ರಾಹಕರು, ನಮ್ಮ ಹೊಣೆಯನ್ನು ನಿರ್ವಹಿಸುವಲ್ಲಿ ಸೋತಿರಲೂಬಹುದು! ಅದು ಏನೂ ಇರಲಿ, ಈ ಬಗೆಯ ಒತ್ತಡಗಳನ್ನು ಅನುಭವಿಸುತ್ತಾ ನೀವು ಈ ಕೆಲಸ ಮುಂದುವರಿಸಿಕೊಂಡು ಹೋಗಿ ಎಂದು ಸೂಚಿಸುವುದು ನಮ್ಮ ಸ್ವಾರ್ಥ ಆಗುತ್ತದೆ. ಈ ನಿರ್ಧಾರದಿಂದ ನಿಮ್ಮ ಸ್ವಂತ ಓದು ಬರೆಹಗಳಿಗೆ ಸಹಾಯವಾಗುತ್ತದೆ ಎಂದಾದರೆ, ನಿಮ್ಮ ಚಿಂತನೆ ಮತ್ತು ಬರೆಹಗಳ ಲಾಭ ಪರೋಕ್ಷವಾಗಿಯಾದರೂ ನಮಗೂ ದೊರಕೀತು.

ಕನ್ನಡ ಪತ್ರಿಕೋದ್ಯಮ ಇತಿಹಾಸ ಸಂದರ್ಭದಲ್ಲಿ 'ಹೊಸ ಮನುಷ್ಯ' ಸದಾ ನೆನಪಿನಲ್ಲಿ ಇರುತ್ತದೆ ಎನ್ನುವ ನನ್ನ ಆಶಯವನ್ನು ವ್ಯಕ್ತಪಡಿಸುತ್ತಾ, ಇಂತಹ ಒಂದು ತಾತ್ವಿಕ ಮಹತ್ವ ಹೊಂದಿದ್ದ ಪತ್ರಿಕೆಯನ್ನು ಸತತವಾಗಿ ಐದು ವರ್ಷಗಳ ಕಾಲ ನಡೆಸಿಕೊಂಡು ಬಂದ ನಿಮ್ಮ ಸಾಮರ್ಥ್ಯ ಮತ್ತು ಶ್ರಮಗಳನ್ನು ಅಭಿನಂದಿಸುತ್ತೇನೆ.

**–ಡಾ. ಎಚ್.ಎಸ್. ಈಶ್ವರ,** ಬೆಂಗಳೂರು

ನಿಮ್ಮ ಇತ್ತೀಚಿನ ಸಂಚಿಕೆಯಲ್ಲಿ ಹೊಸ ಮನುಷ್ಯ ಪತ್ರಿಕೆಯನ್ನು ನಿಲ್ಲಿಸುವ ಸೂಚನೆ ಮತ್ತು ಅದಕ್ಕೆ ಕಾರಣಗಳನ್ನೂ ಕೊಟ್ಟಿದ್ದೀರಿ. ಪತ್ರಿಕೆಯನ್ನು ನಡೆಸುವುದು ನಿಮಗೆ ಎಷ್ಟು ಕಷ್ಟವಾಗುತ್ತಿದೆ ಎಂಬುದು ಸ್ಪಷ್ಟವಾಯಿತು. ಪತ್ರಿಕೆ ನಡೆಸುತ್ತಿರುವುದರಿಂದ ಏನಾದರೂ ಉಪಯೋಗವಾಗುತ್ತಿದೆಯೇ ಎಂಬ ಬಗ್ಗೆ ನಿಮಗೆ ಅನುಮಾನ ಬೇಡ. 'ಹೊಸ ಮನುಷ್ಯ'ದಲ್ಲಿ ಈವರೆಗೆ ಬಂದಿರುವ ಅನೇಕ ಪ್ರತಿಭಾವಂತ ಲೇಖಕರ ಶ್ರೇಷ್ಠ ಲೇಖನಗಳು ನನ್ನ ಮನಸ್ಸಿನಲ್ಲಂತೂ ತುಂಬಾ ಉಪಯುಕ್ತವಾದ ಪರಿಣಾಮಗಳನ್ನುಂಟು ಮಾಡಿವೆ.

ಪತ್ರಿಕೆಯಿಂದ ಆಗಬೇಕಾದ ಪರಿಣಾಮಗಳ ಬಗ್ಗೆ ಸಂಪಾದಕರ ನಿರೀಕ್ಷೆಗಳೇ ತುಂಬಾ ಅತಿಯಾಗಿದ್ದಂತಿದೆ. ಈ ಪತ್ರಿಕೆಯಿಂದ ತಕ್ಷಣದಲ್ಲಿ ಕ್ರಾಂತಿಯಂತೂ ಆಗುವುದಿಲ್ಲ. ಆದರೆ ಹಲವಾರು ಜನಗಳ ಮನಸ್ಸಿನಲ್ಲಿ ಸಕಾರಾತ್ಮಕ ಬದಲಾವಣೆಗಳಾಗುವುದರಲ್ಲಿ ನನಗೆ ಸಂದೇಹವೇ ಇಲ್ಲ.

ಪತ್ರಿಕೆ ನಿಂತುಹೋದರೆ ಅದರ ಸಹೃದಯ ಓದುಗರ ಗುಂಪಿನ ಆತ್ಮೀಯ ಸಂಸಾರವೇ ಒಡೆದಂತಾಗುತ್ತದೆ. ನಾಗಭೂಷಣರ ಅತ್ಯುತ್ತಮ ಸಂಪಾದಕೀಯಗಳು, ಅನೇಕ ಲೇಖಕರ ವಿಚಾರ ಪ್ರಚೋದಕ ಲೇಖನಗಳು, ನಮ್ಮ ಅಭಿಪ್ರಾಯಗಳನ್ನು ಸಮಾನ ಮನಸ್ಕರ ಜೊತೆ ಹಂಚಿಕೊಳ್ಳುವ ಅವಕಾಶ ಇತ್ಯಾದಿಗಳೆಲ್ಲ ಒಂದೇ ಏಟಿಗೆ ಮಾಯವಾಗುತ್ತವೆ. ಆದ್ದರಿಂದ 'ಹೊಸ ಮನುಷ್ಯ' ಪತ್ರಿಕೆಯನ್ನು ಮುಂದುವರೆಸುವುದು ತುಂಬಾ ಮುಖ್ಯವಾದುದು. ಹಾಗಾಗಿ ನಾಗಭೂಷಣರಿಗೆ ಸಾಕಷ್ಟು ವಿಶ್ರಾಂತಿ ದೊರಕುವ ರೀತಿಯಲ್ಲಿ ಶಿವಮೊಗ್ಗದ ಅವರ ಸಹಮನಸ್ಕ ಗೆಳೆಯರು ಪತ್ರಿಕೆಯ ತಯಾರಿಯ ಜವಾಬ್ದಾರಿಯನ್ನು ಸೂಕ್ತ ರೀತಿಯಲ್ಲಿ ಹಂಚಿಕೊಳ್ಳುವ ಬಗ್ಗೆ ಕೂಡಲೇ ಯೋಚಿಸುವುದೊಳಿತು.

**–ಡಾ. ಎ.ಎನ್. ನಾಗರಾಜ್,** ಭೀಮನಕಟ್ಟೆ (ತೀರ್ಥಹಳ್ಳಿ)

ಜೂನ್ ತಿಂಗಳ ಸಂಚಿಕೆಯಲ್ಲಿ ಬರ ಕುರಿತಾದ ನಿಮ್ಮ ವಿಶ್ಲೇಷಣೆ ಮತ್ತು ಇತರೆ ಲೇಖನಗಳೂ ಮಾಹಿತಿಪೂರ್ಣವಾಗಿವೆ.

ಪತ್ರಿಕೆ ನಿಲ್ಲಿಸುವ ಸುದ್ದಿ ವೈಯಕ್ತಿಕವಾಗಿ ಬೇಸರದ ವಿಷಯವಾದರೂ ಇದಕ್ಕೆ ನೀವು ನೀಡಿರುವ ಕಾರಣಗಳು ಸರಿಯಾಗಿಯೇ ಇವೆ. ಹತ್ತು ವರ್ಷಗಳ ಕಾಲ ನೀರಿನ ಕುರಿತಾದ ತ್ರೈಮಾಸಿಕ ಪ್ರಕಟಿಸಿ ಅನುಭವವಿರುವ ನಾನು ಆ ಕಷ್ಟಗಳನ್ನು ಅರ್ಥ ಮಾಡಿಕೊಳ್ಳಬಲ್ಲೆ. ವಿಶ್ರಾಂತ ಬದುಕಿನ ಹಂತದಲ್ಲಿರುವ ನಿಮಗೆ ಇದು ತ್ರಾಸದಾಯಕವೇ. ಆದರೆ ನೀವು ಪತ್ರಿಕೆ ಮೂಲಕ ನೀಡುತ್ತಿದ್ದ ಅದ್ಭುತ ಒಳನೋಟಗಳನ್ನು 'ಮಿಸ್' ಮಾಡಿಕೊಳ್ಳುತ್ತೇನೆ. ನಿಮ್ಮ ಸಂಪಾದಕೀಯ, ಟಿಪ್ಪಣಿಗಳು, ಸಮಕಾಲೀನ ವಿಚಾರಗಳ ಚರ್ಚಾ ರೂಪದ ಲೇಖನಗಳು ಸದಾ ಹೊಸತನದಿಂದ ಕೂಡಿರುತ್ತಿದ್ದವು. ನಾಡಿನೆಲ್ಲೆಡೆಗಳಿಂದ ಬರುತ್ತಿದ್ದ ಪ್ರತಿಕ್ರಿಯೆಗಳು ಪತ್ರಿಕೆಯ 'ರೀಚ್' ಅನ್ನು ತಿಳಿಸುತ್ತಿತ್ತು.

**–ಮಲ್ಲಿಕಾರ್ಜುನ ಹೊಸಪಾಳ್ಯ,** ತುಮಕೂರು

'ಹೊಸ ಮನುಷ್ಯ' ನಿಲ್ಲಿಸಬೇಕಾದ ಅನಿವಾರ್ಯತೆ ದುಗುಡ ತರಿಸಿತು. ನಿಮ್ಮ ಹೊರೆಯನ್ನು ತಮ್ಮ ತಮ್ಮ ಮಿತಿಯಲ್ಲಿ ಕನ್ನಡದ ಲೇಖಕರು ಕಡಿಮೆ ಮಾಡಬಲ್ಲರಾದರೆ 'ಹೊಸ ಮನುಷ್ಯ' ಚೈತನ್ಯ ಪಡೆದು ಮುಂದುವರೆಯಬಹುದು. ನೀವು ಪತ್ರಿಕೆ ಮುಂದುವರೆಸುವ ತೀರ್ಮಾನ ಕೈಗೊಂಡಲ್ಲಿ ಪತ್ರಿಕೆಯ ಕ್ಲರಿಕಲ್ ಕೆಲಸಗಳನ್ನು ನನ್ನ ಮಿತಿಯಲ್ಲಿ ಮಾಡಲು, ಇದಕ್ಕಾಗಿ ತಿಂಗಳ ಒಂದು ದಿನವನ್ನು ಮೀಸಲಾಗಿಡಲು ನಾನು ಸಿದ್ಧನಿದ್ದೇನೆ.

ಮುಂದಿನ ನಿಮ್ಮ ನಿರ್ಧಾರ ಏನೇ ಇರಲಿ, ಇಷ್ಟು ಸಮಯ ಪತ್ರಿಕೆ ನಮ್ಮ ಸಣ್ಣಪುಟ್ಟ ತಕರಾರುಗಳೊಂದಿಗೇ, ನಮ್ಮನ್ನು ನಿರಂತರ ಆತ್ಮವಿಮರ್ಶೆಗೆ, ಚಿಂತನೆಗೆ ಹಚ್ಚಿತ್ತು ಎನ್ನುವುದನ್ನು ಮರೆಯಲಾಗದು. ಆ ಕಾರಣಕ್ಕಾಗಿ ಅದರ ಸಂಪಾದಕರಾದ ನಿಮಗೆ, ನಿಮ್ಮ ಹಿಂದಿದ್ದ ಬಳಗಕ್ಕೆ ಅಭಿನಂದನೆ ಸಲ್ಲಲೇಬೇಕು.

**–ಸರ್ಜಾಶಂಕರ ಹರಳೀಮಠ,** ಶಿವಮೊಗ್ಗ

ಏನಪ್ಪಾ ಇದು ಬಾಂಬ್! ಪ್ರತಿ ತಿಂಗಳೂ ನಿಮ್ಮ ವಿವೇಕಪೂರ್ಣವಾದ ಸಂಪಾದಕೀಯ ಓದುವುದೇ ಒಂದು ಆನಂದ. ಇತ್ತೀಚಿನ ದಿನಗಳಲ್ಲಿ ಇಂತಹ ಮನೋಭಾವ ಮತ್ತು ಬರವಣಿಗೆ ಅಪರೂಪ. ಸಮಾಜವಾದದ ಬಗ್ಗೆ ಕೇಳಿದ್ದೆ, ತಿಳಿದಿರಲಿಲ್ಲ. 'ಹೊಸ ಮನುಷ್ಯ' ಹೊಸ ತಿಳುವಳಿಕೆ ನೀಡುತ್ತಾ ಇದ್ದ. ಪತ್ರಿಕೆ ನಿಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ನೀವೇ ಹೇಳುತ್ತಿರುವಾಗ ನಾನೇನೂ ಹೇಳಲು ತೋಚುತ್ತಿಲ್ಲ. ಪತ್ರಿಕೆಯನ್ನು ತ್ರೈಮಾಸಿಕವಾಗಿಯಾದರೂ ತರಬಹುದೇ ಯೋಚಿಸಿ. ನಿಲ್ಲಿಸಿಬಿಡುವುದು ಒಳ್ಳೆಯದಲ್ಲ.

**–ಡಾ. ಡಿ.ಬಿ. ರಾಮಚಂದ್ರಾಚಾರ್,** ಮೈಸೂರು

ಪತ್ರಿಕೆ ನಿಲ್ಲಿಸುವ ನಿಮ್ಮ ನಿರ್ಧಾರ ವಿಷಾದನೀಯ. ನಿಮ್ಮ ನಿರ್ಧಾರಕ್ಕೆ ನೀವು ಕೊಟ್ಟಿರುವ ಮೊದಲೆರಡು ಕಾರಣಗಳು ಒಪ್ಪತಕ್ಕವೇ. ಆದರೆ ಈ ಪತ್ರಿಕೆಯ ಓದುಗನಾಗಿ ನನಗೆ ಖಂಡಿತ ಲಾಭವಾಗಿದೆ. ಸಮಕಾಲೀನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಗುಹೋಗುಗಳ ಬಗ್ಗೆ ಈ ಪತ್ರಿಕೆ ಇತರ ಪ್ರಕಟಣೆಗಳಿಗಿಂತ ಭಿನ್ನವಾದ ನೋಟಗಳನ್ನು ಒದಗಿಸುತ್ತಾ ಬಂದಿದೆ. ನಮ್ಮ ಬಹುಪಾಲು ಪ್ರಗತಿಪರರು 'ಮದಾಂಧ ಮಾನವತಾವಾದಿ'ಗಳಾಗಿ ಮಾತನಾಡುತ್ತಿರುವಾಗ ನೀವು ನಿಜವಾದ ಮಾನವೀಯ ಮಾನವತಾವಾದಿಯಾಗಿ ನಿಮ್ಮ ಚಿಂತನೆಗಳನ್ನು ಮಂಡಿಸುತ್ತಾ ಬಂದಿದ್ದೀರಿ. ನಿಮ್ಮ ವಿಚಾರ ವಿಶ್ಲೇಷಣೆಗಳಲ್ಲಿ ಹಾಸುಹೊಕ್ಕಾಗಿರುವ ನವಿರಾದ ಹಾಸ್ಯ, ವ್ಯಂಗ್ಯ, ಸ್ವವಿಮರ್ಶೆಯನ್ನು ಇತರ ಭಯಂಕರ ವಿಚಾರವಾದಿಗಳ ಬರಹಗಳಲ್ಲಿ ಕಂಡಿಲ್ಲ. ಮುಂದಿನ ನಿಮ್ಮ ಲೇಖನ–ಪುಸ್ತಕಗಳಲ್ಲಿ ನಿಮ್ಮ ಇಂತಹ ವಿಚಾರಗಳನ್ನು ಓದುವ ಅವಕಾಶಗಳು ನಮಗೆ ಸಿಗಲಿ ಎಂದು ಹಾರೈಸುತ್ತೇನೆ.

**–ಗಿರೀಶ್ ವಿ. ವಾಘ್,** ಬೆಂಗಳೂರು

ವಿಪರೀತ ಪರಿಸ್ಥಿತಿಯಲ್ಲಿ ನಿಮ್ಮ ಅಕ್ಕಪಕ್ಕದವರಿಗೆ ಆಮ್ಲಜನಕದ ಕವಚ ತೊಡಿಸುವ ಮುನ್ನ ನೀವು ಹಾಕಿಕೊಳ್ಳಿ ಎಂದು ವಿಮಾನದಲ್ಲಿ ಹೇಳುತ್ತಾರೆ. ನಿಮ್ಮ ನಿರ್ಧಾರ ಸರಿಯಾಗಿದೆ. ಈವರೆಗೆ ಪತ್ರಿಕೆಯನ್ನು ಕಾಪಾಡಿಕೊಂಡು ಬಂದುದಕ್ಕಾಗಿ ನಿಮಗೆ ಅಭಿನಂದನೆಗಳು.

ಯಾರ ಪಿಟೀಲಿಗೂ, ಯಾರ ಆಶ್ವಾಸನೆಗಳಿಗೂ ಕರಗಬಾರದಾಗಿ ಕನ್ನಡಾಂಬೆಯ ಪರವಾಗಿ ಬೇಡಿಕೊಳ್ಳುತ್ತೇನೆ. ಕಳೆದ ಒಂದು ವಾರದಿಂದ ನಿಮಗೆ ಸಿಕ್ಕಿರಬಹುದಾದ ಕಿಂಚಿತ್ ಬಿಡುಗಡೆಯ ಸುಖದಿಂದ ವಂಚಿತರಾಗುತ್ತೀರಿ... ಎಚ್ಚರ... ನಿಲ್ಲಿಸಿದ್ದರೆ ಚೆನ್ನಿತ್ತು ಎಂದು ನಂತರ ಪರಿತಪಿಸುತ್ತೀರಿ...

**–ಜಯಂತ ಕಾಯ್ಕಿಣಿ,** ಬೆಂಗಳೂರು

ನೀವು ಪತ್ರಿಕೆಯನ್ನು ನಿಲ್ಲಿಸುತ್ತಿರುವುದು ಬಹಳ ಸಂತೋಷ. ಬೇಸರಿಸಬೇಡಿ. ನಿತ್ಯ ಶಿವಮೊಗ್ಗದ ಗ್ರಂಥಾಲಯಗಳಿಗೆ ಭೇಟಿ ಕೊಡುವ ನಾನು ನಿಮ್ಮ ಪತ್ರಿಕೆಯನ್ನು ('ಸಂಕ್ರಮಣ' ಹಾಗೂ 'ಸಂವಾದ'ಗಳಂತೆಯೇ) ಯಾರೂ ಮುಟ್ಟಿ ಕೂಡ ನೋಡದಿರುವುದನ್ನು ಗಮನಿಸಿದ್ದೇನೆ. ನೀವು ಪ್ರಕಟಿಸುವ ಬುದ್ಧ–ಬಸವ–ಅಂಬೇಡ್ಕರ್ ಎಂಬ ಹಳಸಲನ್ನು ಈಗ ಯಾರು ಓದುತ್ತಾರೆ? ಇಷ್ಟು ಕಾಲ ಸಂಘ ಪರಿವಾರವನ್ನು ನಿಂದಿಸುವುದರಲ್ಲೇ ನಿಮ್ಮ ಶಕ್ತಿಯನ್ನು ವ್ಯಯಿಸಿಕೊಂಡಿರುವ ನೀವು ಇನ್ನಾದರೂ ಸಮಾಜಕ್ಕೆ ಪೂರಕವಾದ ಕಾರ್ಯಗಳನ್ನು ಕೈಗೆತ್ತಿಕೊಳ್ಳಿರಿ.

**–ಎಚ್.ಎನ್. ಗಣಪತಿ ಭಟ್,** ಶಿವಮೊಗ್ಗ

ನಿಮ್ಮ ಕಷ್ಟ ಅರ್ಥವಾಗುತ್ತದೆ. ಆದರೆ ಪತ್ರಿಕೆ ಇಂದಿನ ಸಂದರ್ಭದ ಒಂದು ಕೊರತೆಯನ್ನು ತುಂಬಿದೆ. ಹಾಗೂ ಅದರ ಅವಶ್ಯಕತೆ ಈಗ ಇದೆ. ಯೋಚಿಸಿ. ಯಾವುದೇ ಸಹಾಯಕ್ಕೂ ನಮ್ಮ ಮಿತಿಯಲ್ಲಿ ತಯಾರು.

**–ಟಿ.ಎಸ್. ವೇಣುಗೋಪಾಲ್,** ಮೈಸೂರು

ಆಘಾತಕರ ಸುದ್ದಿ ನೀಡಿದ್ದೀರಿ. ಇಲ್ಲ, ನಿಮಗೆ ಅಪಾರ ಶಕ್ತಿ ಇದೆ, ನಡೆಸಬಹುದು. ಯೋಚಿಸಿ. ಆರೋಗ್ಯದ ಕಡೆಯೂ ಗಮನವಿರಲಿ.

**–ಪ್ರೊ. ಜಿ.ಕೆ. ಗೋವಿಂದರಾವ್,** ಬೆಂಗಳೂರು

ಪತ್ರಿಕೆ ನಿಲ್ಲಿಸುವ ಬಗ್ಗೆ ಓದಿ ಬಹಳ ಬೇಸರವಾಯ್ತು. ಅದಕ್ಕೆ ನಿಮ್ಮ ಆರೋಗ್ಯವೇ ಕಾರಣವಾದರೆ, ನೀವು ತೆಗೆದುಕೊಂಡ ನಿರ್ಧಾರ ಸರಿಯಾಗಿಯೇ ಇದೆ.

**–ವೈದೇಹಿ,** ಮಣಿಪಾಲ

ಪತ್ರಿಕೆಯನ್ನು ನಿಲ್ಲಿಸುವುದು ಬೇಡ. ನಿಮ್ಮ ಸಂಪಾದಕೀಯ ಬರಹಗಳು ಇಂದಿಗೆ ಅಗತ್ಯವಾಗಿವೆ. ನಿಮ್ಮ ಸಂಪಾದಕತ್ವದಲ್ಲಿ ಬೇರೆಯವರು ಇತರೆಲ್ಲ ಕೆಲಸಗಳನ್ನು ನೋಡಿಕೊಳ್ಳುವ ವ್ಯವಸ್ಥೆ ಸಾಧ್ಯವೇ ನೋಡಿ.

**–ಲಕ್ಷ್ಮೀಶ ತೋಳ್ಪಾಡಿ,** ಶಾಂತಿಗೋಡು(ಪುತ್ತೂರು)

ಪ್ರತಿ ವರ್ಷ ಇನ್ನೂರು ಚಂದಾದಾರರನ್ನು ಮಾಡಿಸಿಕೊಡುವುದು ನನ್ನ ಜವಾಬ್ದಾರಿ. ದಯವಿಟ್ಟು ಪತ್ರಿಕೆ ನಿಲ್ಲಿಸಬೇಡಿ. ಇಂತಹ ಪತ್ರಿಕೆ ಇಂದು ಅತ್ಯವಶ್ಯ.

**–ಪ್ರೊ. ಜಿ.ಬಿ. ಶಿವರಾಜು,** ಬೆಂಗಳೂರು

ಪತ್ರಿಕೆ ನಿಲ್ಲಿಸುವ ಪ್ರಕಟಣೆ ಕಂಡು ದುಃಖವಾಯಿತು. ಇದೊಂದು ಕೆಟ್ಟ ಸುದ್ದಿ. ನನ್ನ ಜೀವನದಲ್ಲಿ ಇಂತಹ ಸುದ್ದಿಗಳನ್ನೇ ಕಾಣಬೇಕಿದೆ. ಏಕೆ ಹೀಗೆ?

**–ಡಾ. ವಿಜಯಾ,** ಬೆಂಗಳೂರು

ಪತ್ರಿಕೆ ನಿಲ್ಲಿಸುವ ಕುರಿತು ಬರೆದಿದ್ದೀರಿ. ಓದಿ ಅನಾಥ ಭಾವ ಮೂಡಿತು.... ನಿಮ್ಮ ಸಂಪಾದಕೀಯಗಳನ್ನು ಓದಿ ಹೀಗೂ ಯೋಚಿಸಬಹುದು ಎಂದು ಕಲಿತಿದ್ದೇನೆ. ದಯವಿಟ್ಟು ಪತ್ರಿಕೆ ನಿಲ್ಲಿಸಬೇಡಿ ಸರ್.

**–ಸುಜಾತಾ ತಳವಾರ್,** ಹಾಸನ

ಕಳೆದ ಐದು ವರ್ಷಗಳಿಂದ ಒಂದು ತಿಂಗಳೂ ತಪ್ಪದೆ ತಿಂಗಳ ಕೊನೆಯ ದಿನ ನಮ್ಮನ್ನು ತಲುಪುತ್ತಿದ್ದ ಪತ್ರಿಕೆ ಇನ್ನು ಬರುವುದಿಲ್ಲ ಎಂಬುದು ಬೇಸರದ ಸಂಗತಿ. ಆದರೆ ನಮಗೆ ನಿಮ್ಮ ಆರೋಗ್ಯವೂ ಮುಖ್ಯವಾದುದರಿಂದ ಈ ಬೇಸರವನ್ನು ನುಂಗಿಕೊಳ್ಳಬೇಕಿದೆ.

**–ಶ್ರೀದೇವಿ ಶಾಮಣ್ಣ,** ಭಗವತಿಕೆರೆ

ನನ್ನ ನೆಚ್ಚಿನ ಪತ್ರಿಕೆ ನಿಲ್ಲುತ್ತಿರುವುದು ದುಃಖದ ಸಂಗತಿ. ಆದರೆ ನಮಗೆ ನಿಮ್ಮ ಆರೋಗ್ಯವೂ ಮುಖ್ಯ. ಆದರೂ ಯೋಚಿಸಿ ನಿರ್ಧಾರ ಕೈಗೊಳ್ಳಿ.

**–ಎಚ್.ಎಸ್. ರಾಮನಗೌಡ,** ಕೊಂಡಿಕೊಪ್ಪ (ನವಲಗುಂದ)

ಪತ್ರಿಕೆ ನಿಲ್ಲಿಸುವ ಸುದ್ದಿ ನನ್ನ ಪಾಲಿಗೆ ಕೆಟ್ಟ ಸುದ್ದಿ. ಇದೊಂದು ಕನ್ನಡದ ಅಮೂಲ್ಯ ಪತ್ರಿಕೆ. ನೀವು ಈ ನಿರ್ಧಾರ ಕೈಗೊಳ್ಳಬಾರದಿತ್ತು. ಮತ್ತೆ ಯೋಚಿಸಿ.

**–ಆರ್. ನರಸಿಂಹಮೂರ್ತಿ,** ಮಂಗಳೂರು

ಇನ್ನು ಚಂದಾ ಕಳಿಸ ಬೇಡಿ ಎಂಬ ನಿಮ್ಮ ವಿನಂತಿ ಕಂಡು ಬೇಸರವಾಯಿತು. 'ಹೊಸ ಮನುಷ್ಯ' ಸೀಮಿತ ಓದುಗವರ್ಗವನ್ನು ಹೊಂದಿದ್ದರೂ ತನ್ನ ಮಿತಿಯಲ್ಲಿಯೇ ಓದುಗರನ್ನು ನಿರಂತರ ಎಚ್ಚರದಲ್ಲಿರಿಸಿದೆ. ನಿಮ್ಮ ಶ್ರಮ ವ್ಯರ್ಥವಾಗುತ್ತಿಲ್ಲ ಎಂಬುದು ನನ್ನ ಖಚಿತ ಅಭಿಪ್ರಾಯ. ದಯವಿಟ್ಟು ಪತ್ರಿಕೆಯನ್ನು ನಿಲ್ಲಿಸದಿರಿ.

**–ರೋಹಿತ್, ಕೆ.,** ಆಲೂರು

ದಯವಿಟ್ಟು ಪತ್ರಿಕೆ ನಿಲ್ಲಿಸಬೇಡಿ. ಪ್ರತಿ ತಿಂಗಳ ಕೊನೆಯ ದಿನ ಪತ್ರಿಕೆಗಾಗಿ ಕುತೂಹಲದಿಂದ ಕಾಯುತ್ತಿದ್ದ ನಾನು ಪತ್ರಿಕೆ ಓದಿ ಪುಳಕಿತನಾಗುತ್ತಿದ್ದೆ. ಇತ್ತೀಚಿನ ದಿನಗಳಲ್ಲಿ ನಮ್ಮಂತವರ ಆಲೋಚನಾ ಕ್ರಮವನ್ನು ರೂಪಿಸುತ್ತಿದ್ದ 'ಹೊಸ ಮನುಷ್ಯ' ಯಾವುದೇ ಕಾರಣಕ್ಕೆ ನಿಲ್ಲಬಾರದು.

**–ಜಿ.ಸಿ. ಜಗದೀಶ್,** ಮಾಚೇನಹಳ್ಳಿ

ಜೂನ್ ಸಂಚಿಕೆಯಲ್ಲಿನ ಬರ ಕುರಿತ ನಿಮ್ಮ ಮತ್ತು ಇತರರ ಲೇಖನಗಳು ಮನನೀಯವಾಗಿದ್ದು, ಇದರ ಮಧ್ಯೆ ನೀವು ಪತ್ರಿಕೆ ನಿಲ್ಲಿಸುವ ಪ್ರಕಟಣೆ ಓದಿ ನಿರಾಶೆಯಾಯಿತು. ಇನ್ನೊಮ್ಮೆ ಯೋಚಿಸಿ ಸರ್.

**–ಬಿ.ಶಿವಕುಮಾರ್,** ಹಾಸನ

ಬಾಂಬ್ ಹಾಕೇ ಬಿಟ್ಟಿದ್ದೀರಲ್ಲಾ! ನಿಮ್ಮ ಆರೋಗ್ಯಾನುಸಾರ ಪತ್ರಿಕೆಯನ್ನು ತ್ರೈಮಾಸಿಕವಾಗಿ ಅಥವಾ ಕನಿಷ್ಠ ವಾರ್ಷಿಕ ಸಂಪುಟವಾಗಿಯಾದರೂ ಹೊರತನ್ನಿ.

**–ಸಿ.ಯು. ಬೆಳ್ಳಕ್ಕಿ,** ಧಾರವಾಡ

ನಾನಿನ್ನೂ ನಿಮ್ಮ ಪತ್ರಿಕೆಯ ಸರಿಯಾದ ಓದುಗಳೇ ಆಗಿಲ್ಲ. ಆಗಲೇ ನೀವು ಪತ್ರಿಕೆ ನಿಲ್ಲಿಸಹೊರಟಿರುವುದು ಬೇಸರ ತರಿಸಿತು. ನೀವಂದುಕೊಂಡಂತೆ ಪತ್ರಿಕೆಗೆ ಆಸಕ್ತ ಓದುಗರಿಲ್ಲ ಎಂಬುದು ನಿಜವಲ್ಲ. ನಮ್ಮಂತಹ ಆಸಕ್ತ ಓದುಗರು ಪತ್ರ ಬರೆಯುವಷ್ಟು ಪ್ರಾಜ್ಞರಲ್ಲ, ಅಷ್ಟೆ. ದಯವಿಟ್ಟು ಇನ್ನೊಮ್ಮೆ ಯೋಚಿಸಿ.

**–ಪೂರ್ಣಿಮಾ,** ಲಿಂಗದಹಳ್ಳಿ

ಪತ್ರಿಕೆ ನಿಲ್ಲಿಸುವುದು ನಿಮ್ಮ ಅಂತಿಮ ನಿರ್ಧಾರವಲ್ಲವೆಂದು ಭಾವಿಸುತ್ತೇನೆ. ನಿಮ್ಮ ಸಂಪಾದಕೀಯ ಟಿಪ್ಪಣಿಗಳು ನಮಗೆ ತಿಳುವಳಿಕೆಯ ಹೊಸ ದಾರಿ ತೆರೆಯುತ್ತಿದ್ದವು.

**–ಜ.ನಾ. ತೇಜಶ್ರೀ,** ಹಾಸನ

ನೀವು ಪತ್ರಿಕೆ ನಿಲ್ಲಿಸುವ ನಿರ್ಧಾರ ಕೈಗೊಳ್ಳುವುದು ಬೇಡ. 'ಹೊಸ ಮನುಷ್ಯ' ಇಂದಿನ ಸಂದರ್ಭಕ್ಕೆ ತೀರಾ ಅಗತ್ಯ.. ನಿಮಗೆ ನೆರವಾಗುವಂತಹ ವ್ಯವಸ್ಥೆಯ ಬಗ್ಗೆ ಚರ್ಚಿಸಲು ನಾನು ನನ್ನ ಕೆಲ ಗೆಳೆಯರೊಂದಿಗೆ ನಿಮ್ಮಲ್ಲಿಗೆ ಬರಬಯಸುತ್ತೇನೆ.

**–ಪ್ರೊ. ಎಂ.ಜಿ. ಚಂದ್ರಶೇಖರಯ್ಯ,** ದೊಡ್ಡಬಳ್ಳಾಪುರ

ಯಾವುದೇ ಕಾರಣಕ್ಕೂ ಇಂತಹ ಪತ್ರಿಕೆ ನಿಲ್ಲಬಾರದು. ನಮಗೆ ಬೇಸರವಾಗಿದೆ. ಗೆಳೆಯರೊಂದಿಗೆ ಮಾತಾಡುವೆ. ಅಂತಿಮ ತೀರ್ಮಾನ ಸದ್ಯಕ್ಕೆ ಬೇಡ ಸರ್.

**–ಬಸವರಾಜ ಕುಂಬಾರ,** ಬಾಗಲಕೋಟೆ

ನಿಮ್ಮ ಪತ್ರಿಕೆ ನಿಲ್ಲುತ್ತದೆಂಬ ಸುದ್ದಿಯನ್ನು ವಾಟ್ಸಾಪ್‌ನಲ್ಲಿ ನೋಡಿದೆ. ಸಮಾಜವಾದಿ ಪತ್ರಿಕೆ ಈಗ ನಿಲ್ಲಬಾರದು. ನಾನು ಖಂಡಿತ ಚಂದಾ ಮಾಡಿಸುವೆ.

**–ಶ್ರೀಧರ ಭಟ್,** ಉಡುಪಿ

ಕರ್ನಾಟಕ ಈ ವರ್ಷ ಭೀಕರ ಬರಗಾಲವನ್ನು ಕಂಡಿತು. ಕರ್ನಾಟಕದಲ್ಲಿ ಎಷ್ಟೊಂದು ಪ್ರತಿಷ್ಠಿತ ಪತ್ರಿಕೆಗಳಿವೆ. ಆದರೆ ಬರದ ಬಗ್ಗೆ 'ಹೊಸ ಮನುಷ್ಯ'ದಷ್ಟು ಮಾಹಿತಿಪೂರ್ಣವಾದ ಮತ್ತು ಪರಿಣಾಮಕಾರಿಯಾದ ಲೇಖನಗಳನ್ನು ಇವಾವುವೂ ಪ್ರಕಟಿಸಲಿಲ್ಲ. ಜೊತೆಗೆ ಬಸ್ತರ್‌ನ ಆದಿವಾಸಿಗಳ ಸಂಕಷ್ಟಗಳನ್ನು ಕುರಿತ ಲೇಖನ ಕೂಡ ನಮಗೆ ನಿಮ್ಮ ಪತ್ರಿಕೆಯ ಮೂಲಕವೇ ತಿಳಿದದ್ದು. ನಿಮಗೆ ಅಭಿನಂದನೆಗಳು

**–ಎಂ.ಎಸ್. ನಾರಾಯಣಮೂರ್ತಿ,** ದಾವಣಗೆರೆ

ಜೂನ್ ಸಂಚಿಕೆಯ 'ನಿಮ್ಮ ಪತ್ರ' ಅಂಕಣದಲ್ಲಿ ಪ್ರಕಟವಾಗಿರುವ ಧಾರವಾಡದ ವೆಂಕಟೇಶ ಮಾಚಕನೂರ ಅವರ ಪತ್ರ ಹಿಂದೂ–ಮುಸ್ಲಿಂ ಸಮಸ್ಯೆಗಳ ಬಗ್ಗೆ ಕರಾರುವಾಕ್ಕಾದ ಸತ್ಯಗಳನ್ನೇ ಹೇಳುತ್ತದೆ. ಈ ದೇಶಕ್ಕೆ ಎಷ್ಟೋ ಜನಾಂಗಗಳು, ಧರ್ಮಗಳು ಬಂದು ಸೇರಿದವು. ಆದರೆ ಇಸ್ಲಾಂ ಮಾತ್ರ 'ನಾನೇ ಬೇರೆ' ಎಂಬಂತೆ ಉಳಿದುಹೋಗಿದೆ. ಮುಖ್ಯವಾಗಿ ಮುಸ್ಲಿಮರ ವೇಷಭೂಷಣ ಮತ್ತು ಭಾಷೆ ಅವರನ್ನು ಜನಸಮೂಹದ ಮುಖ್ಯ ಪ್ರವಾಹದಿಂದ ದೂರವಿಟ್ಟಿದೆ. ತಾವು ಆಳಿದ ಸಮುದಾಯಕ್ಕೆ ಸೇರಿದವರು ಎಂಬ ಸುಪ್ತ ನಂಬಿಕೆಯೂ ಇಲ್ಲಿ ಕೆಲಸ ಮಾಡುತ್ತಿರಬಹುದು. ಅದೇನೇ ಇದ್ದರೂ, ಈ ಸಮುದಾಯದ ಚಿಂತಕ ವರ್ಗ ಹಿಂದೂ ಕೋಮುವಾದವನ್ನು ಹಳಿಯುವುದನ್ನು ಬಿಟ್ಟು ತಮ್ಮ ಸಮುದಾಯವನ್ನು ಸ್ವವಿಮರ್ಶೆಗೆ ತೊಡಗಿಸುವಂತಹ ರಚನಾತ್ಮಕ ಕೆಲಸಗಳನ್ನು ಈಗ ಕೈಗೆತ್ತಿಕೊಳ್ಳಬೇಕಿದೆ. ಆಗ ಈ ಹಿಂದೂ ಕೋಮುವಾದಿಗಳನ್ನು ಮಾಚಕನೂರು ಅವರು ಹೇಳಿದಂತೆ 'ಕ್ಯಾರೇ' ಅನ್ನುವವರೇ ಇಲ್ಲವಾಗುತ್ತಾರೆ.

**–ಆರ್.ಸಿ. ವಾಸುದೇವಮೂರ್ತಿ,** ತುಮಕೂರು

# ಕ್ಷಮಿಸಿ, ಮಿ. ದಾಸ್...!

## ಅರ್ಹತೆ ಮತ್ತು ಮೀಸಲಾತಿ : ಇಬ್ಬರು ಐ.ಎ.ಎಸ್ ಅಭ್ಯರ್ಥಿಗಳ ಕಥನ

ಮೂಲ: ಎ.ಕೆ. ಬಿಸ್ವಾಸ್
ಕನ್ನಡಕ್ಕೆ: ಬಿ.ಎಸ್. ದಿವಾಕರ್



**ಟೀ**ನಾ ಡಾಬಿ, ದೆಹಲಿಯ ಪರಿಶಿಷ್ಟ ಜಾತಿಯ ಹುಡುಗಿ. ಈಕೆ ೨೦೧೫-೧೬ರ ಸಾಲಿನ ನಾಗರೀಕ ಸೇವಾ ಪರೀಕ್ಷೆಗಳ ಯಶಸ್ವಿ ಅಭ್ಯರ್ಥಿಗಳ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ. ಈಕೆಯ ಈ ಸಾಧನೆಗೆ ಅಭಿನಂದನೆಗಳು ಹರಿದು ಬರುತ್ತಿರುವಾಗಲೇ, ಲೋಕಸೇವಾ ಆಯೋಗವು ಆಕೆ ಗಳಿಸಿದ್ದು ಕೇವಲ ಶೇ. ೫೨ ಅಂಕಗಳು ಎಂದು ತಿಳಿಯಪಡಿಸಿದೆ. ಈ ಸುದ್ದಿಯು ಕೆಲವು ಕುಹಕಿಗಳು, ಹೀಗಳೆಯುವವರಿಗೆ ಕುಮ್ಮಕ್ಕು ನೀಡಿದರೂ, ಅದೇನೂ ಗಂಭೀರವಾಗಿ ಪರಿಗಣಿಸಬೇಕಾದ ವಿಷಯವಲ್ಲ. ಏಕೆಂದರೆ ಉಳಿದವರು ಗಳಿಸಿದ ಅಂಕಗಳು ಇನ್ನೂ ಕಡಿಮೆಯೇ. ೬೫ ವರ್ಷಗಳಲ್ಲಿ ಪ್ರಥಮ ಸ್ಥಾನಗಳಿಸಿದ ಪರಿಶಿಷ್ಟ ಜಾತಿಯ ಮೊದಲ ಅಭ್ಯರ್ಥಿಯಾಗಿ ಇತಿಹಾಸ ಸೃಷ್ಟಿಸಿದ್ದಾರೆ ಟೀನಾ.

ಆದರೆ ಇದರಿಂದ ಉಬ್ಬಿಹೋದ ಬಿ.ಜೆ.ಪಿ.ಯ ದಲಿತ ಸಂಸದ ಉದಿತ್‌ರಾಜ್– '೪೦–೫೦ ವರ್ಷಗಳ ಹಿಂದೆ ಈ ಸಾಧನೆ ಸಾಧ್ಯವಾಗುತ್ತಿರಲಿಲ್ಲ' ಎಂದು ಉದ್ಗರಿಸಿದ್ದು ಮಾತ್ರ ಪೂರ್ತಿಯಾಗಿ ಸರಿಯಲ್ಲ. ೧೯೫೦ರಷ್ಟು ಹಿಂದೆಯೇ, ಸ್ವತಂತ್ರ ಭಾರತದ ಮೊದಲ ನಾಗರಿಕ ಸೇವಾ ಪರೀಕ್ಷೆಯಲ್ಲಿಯೇ ಪರಿಶಿಷ್ಟ ಜಾತಿಯ ಇನ್ನೋರ್ವ ಅಭ್ಯರ್ಥಿ ಅಚ್ಯುತಾನಂದ ದಾಸ್ ಯಶಸ್ವಿಯಾಗಿ ಐ.ಎ.ಎಸ್.ಗೆ ಪ್ರವೇಶ ಪಡೆದಿದ್ದರು. ಆದರೆ ಟೀನಾರಂತಲ್ಲದೇ ಅಚ್ಯುತಾನಂದ ದಾಸ್ ಆಯ್ಕೆ ಪಟ್ಟಿಯಲ್ಲಿ ಕೊನೆಯ ಸ್ಥಾನದ ಮೂಲಕವಷ್ಟೇ ಈ ಪ್ರತಿಷ್ಠಿತರ ಪಟ್ಟಿಗೆ ತಮ್ಮ ಪ್ರವೇಶ ಪಡೆದಿದ್ದರು. ಮತ್ತು ಅವರ ಈ ಸಾಧನೆಯೂ ಕಡಿಮೆ ಮಹತ್ವದ್ದೇನಾಗಿರಲಿಲ್ಲ.

ನನಗೆ ಕೆಲಸದ ಒತ್ತಡ ಅಷ್ಟೇನೂ ಇರದ ಸಮಯದಲ್ಲಿ ನಾನು ದಲಿತ ಮತ್ತು ಆದಿವಾಸಿ ಸಮುದಾಯಗಳಿಂದ ಆಯ್ಕೆಯಾದ ಪ್ರಥಮ ಐ.ಎ.ಎಸ್ ಅಭ್ಯರ್ಥಿಗಳ ಬಗೆಗೆ ಶೋಧನೆಗೆ ತೊಡಗಿದೆ. ೧೯೯೦ರಲ್ಲಿ ಕಲ್ಕತ್ತಾಗೆ ಸೇವಾನಿಯೋಜನೆಗೊಂಡ ಬಳಿಕ ನ್ಯಾಷನಲ್ ಲೈಬ್ರರಿಗೆ ಪದೇ ಪದೇ ಹೋಗುವಂತಾಯಿತು. ಕೊನೆಗೂ ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದ ದಾಖಲೆಗಳು ದೊರೆತವು. ಅಚ್ಯುತಾನಂದ ದಾಸ್ ಎಂಬ ಬಂಗಾಳಿ ಹಾಗೂ ಕಲ್ಕತ್ತಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಐ.ಎ.ಎಸ್.ಗೆ ಅರ್ಹತೆ ಪಡೆದ ಮೊದಲ ಪರಿಶಿಷ್ಟ ಜಾತಿಯ ಅಭ್ಯರ್ಥಿ. ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಪ್ರತಿಭೆ ಹಾಗೂ ಯೋಗ್ಯತೆಯನ್ನೇ ಹೊಂದಿಲ್ಲ ಎಂಬ ಭಾವನೆ ಇಡೀ ದೇಶದ ಉದ್ದಗಲಕ್ಕೂ ಹಬ್ಬಿದ್ದಾಗ, ದಾಸ್ ಅವರ ಈ ಸಾಧನೆ ಬಹಳಷ್ಟು ಜನರನ್ನು ಆಶ್ಚರ್ಯ ಹಾಗೂ ದಿಗ್ಭ್ರಮೆಗೊಳಿಸಿದ ಸಾಧ್ಯತೆ ಇದೆ. ಅವರ ಅಂಕಪಟ್ಟಿ ನನಗೆ ಇನ್ನಷ್ಟು ಉಪಯುಕ್ತ ಒಳನೋಟಗಳನ್ನು ಒದಗಿಸಿತು. ಒಟ್ಟು ೧೦೫೦ ಅಂಕಗಳ ಲಿಖಿತ ಪರೀಕ್ಷೆಗಳು – ೩ ಕಡ್ಡಾಯ – ೩ ಐಚ್ಚಿಕ ವಿಷಯಗಳು– ಇದರಲ್ಲಿ ದಾಸ್ ೬೧೯ ಅಂಕ ಗಳಿಸಿದ್ದು ಶೇ ೫೮ ರಷ್ಟಾಗಿತ್ತು. ಪ್ರತಿಯಾಗಿ ಅಂತಿಮ ಹಂತದಲ್ಲಿ ಪ್ರಥಮ ಸ್ಥಾನಗಳಿಸಿದ ಎನ್. ಕೃಷ್ಣನ್ ೬೦೨ ಅಂಕಗಳೊಂದಿಗೆ ೫೭.೩ ಪ್ರತಿಶತ ಗಳಿಸಿದ್ದರು. ಲಿಖಿತ ಪರೀಕ್ಷೆಗಳಲ್ಲಿ ಅಚ್ಯುತಾನಂದ ದಾಸ್ ಹಾಗೂ ಕೃಷ್ಣನ್ ಅನುಕ್ರಮವಾಗಿ ಮೊದಲೆರೆಡು ಸ್ಥಾನಗಳಿಸಿದ್ದರು. ಆದರೆ ಇವೆಲ್ಲವನ್ನು ಬುಡಮೇಲಾಗಿಸಿದ್ದು ಮೌಖಿಕ ಪರೀಕ್ಷೆ ಅಥವಾ ಸಂದರ್ಶನ. ಇದು ಕೃಷ್ಣನ್‌ರನ್ನು ಪ್ರಥಮ ಸ್ಥಾನದಲ್ಲಿ ಭದ್ರಗೊಳಿಸಿ ದಾಸ್‌ರನ್ನು ಕಟ್ಟ ಕಡೆಯ ಸ್ಥಾನಕ್ಕೆ ತಳ್ಳಿತ್ತು. ಸಂದರ್ಶನದಲ್ಲಿ ಒಟ್ಟು ೩೦೦ ಅಂಕಗಳ ಪೈಕಿ ಕೃಷ್ಣನ್ ೨೬೦ (ಶೇ ೮೬.೬) ಗಳಿಸಿದರೆ, ದಾಸ್ ಕೇವಲ ೧೧೦ (ಶೇ. ೩೩) ಗಳಿಸಿದ್ದರು. ಅಂದರೆ, ಒಟ್ಟು ಅಂಕಗಳಲ್ಲಿ ಕೃಷ್ಣನ್ ೧೫೦ ಅಂಕಗಳಷ್ಟು ಅಂತರದಲ್ಲಿ ದಾಸ್‌ರನ್ನು ಹಿಂದಿಕ್ಕಿದ್ದರು. ಮದ್ರಾಸ್ ವಿಶ್ವವಿದ್ಯಾಲಯದ ಕೃಷ್ಣನ್ ಐ.ಎ.ಎಸ್‌ನಲ್ಲಿ ಅಗ್ರಪಟ್ಟಗಳಿಸಿದ ಪ್ರಥಮ ಅಭ್ಯರ್ಥಿ ಎಂದೇ ಸ್ಮರಿಸಲ್ಪಡುತ್ತಿದ್ದಾರೆ. ದಾಸ್ ಮಾತ್ರ ಯಾರ ನೆನಪಿನಲ್ಲೂ ಉಳಿದಿಲ್ಲ.

ಕೃಷ್ಣನ್ ಮತ್ತು ದಾಸ್‌ರ ಸಹಸ್ಪರ್ಧಿಯಾಗಿದ್ದ ಅನಿರುದ್ಧ ದಾಸ್‌ಗುಪ್ತ ಎಂಬಾತನ ಅಂಕಪಟ್ಟಿ ಇನ್ನಷ್ಟು ಕುತೂಹಲಕಾರಿಯಾಗಿದೆ. ಲಿಖಿತ ಪರೀಕ್ಷೆಯಲ್ಲಿ ಆತ ಗಳಿಸಿದ್ದು. ಕೇವಲ ೪೯೫ (ಶೇ. ೪೭.೧) ಮಾತ್ರ. ಆ ಪರೀಕ್ಷೆಯಲ್ಲಿ ಅತ್ಯಂತ ಕಡಿಮೆ ಅಂಕಗಳಿಸಿದವರಲ್ಲಿ ಒಬ್ಬನಾಗಿದ್ದರೂ ಆತನನ್ನು ಸಂದರ್ಶನಕ್ಕೆ ಶಿಫಾರಸ್ಸು ಮಾಡಲಾಯಿತು. ಆದರೆ ದಾಸ್‌ಗುಪ್ತ ಸಂದರ್ಶಕ ಮಂಡಳಿಯನ್ನು ತನ್ನ ಮಾತಿನಿಂದ ಅದೆಷ್ಟು ಮೆಚ್ಚಿಸಿ ಪ್ರಭಾವಿಸಿದನೆಂದರೆ, ಲಿಖಿತ ಪರೀಕ್ಷೆಯಲ್ಲಿ ಅತ್ಯುನ್ನತ ಸ್ಥಾನಗಳಿಸಿದವರಿಗಿಂತ ಹೆಚ್ಚಿನ ಅಂಕಗಳನ್ನು ಮೌಖಿಕ ಸಂದರ್ಶನದಲ್ಲಿ ಪಡೆದ. ಒಟ್ಟು ೩೦೦ರಲ್ಲಿ ೨೬೫ ಅಥವಾ ಶೇ೮೩.೩ ಅಂಕಗಳು! ಇದರಿಂದಾಗಿ ತಾನು ಪಡೆದ ಅಂಕಗಳ ಒಟ್ಟು ಮೊತ್ತವನ್ನು ದುಪ್ಪಟ್ಟು ಮಾಡಿಕೊಂಡು ಯಶಸ್ವಿ ಅಭ್ಯರ್ಥಿಗಳ ಪಟ್ಟಿಯಲ್ಲಿ ಪ್ರವೇಶ ಪಡೆದು, ಅರ್ಹತಾ ಪಟ್ಟಿಯಲ್ಲಿ ೨೪ನೇ ಸ್ಥಾನಗಳಿಸಿದ. ಮತ್ತೊಂದೆಡೆ ದಾಸ್ ಪಟ್ಟಿಯಲ್ಲಿ ಕೊನೆಯವನಾಗಿ ೪೮ನೇ ಸ್ಥಾನ ಪಡೆದುಕೊಂಡ.

ಯು.ಪಿ.ಎಸ್.ಸಿ.ಯ ಮಾಜಿ ಅಧ್ಯಕ್ಷರಾದ ಎ.ಆರ್. ಕಿದ್ವಾಯಿಯವರು ೧೯೮೦–೯೦ರ ದಶಕಗಳಲ್ಲಿ ಹಾಗೂ ೯೦ರ ಮೊದಲ ಭಾಗದಲ್ಲಿ ಬಿಹಾರದ ರಾಜ್ಯಪಾಲರಾಗಿದ್ದಾಗ ಅವರನ್ನು ಭೇಟಿಯಾದೆ. ಲೋಕಸೇವಾ ಆಯೋಗದ ಸಂದರ್ಶನಗಳ ಮಾದರಿ, ಉದ್ದೇಶ, ವಿಧಾನ, ಹಾಗೂ ಪದ್ಧತಿಗಳ ಬಗ್ಗೆ ಅವರೊಡನೆ ಚರ್ಚಿಸಿದೆ. ಕಿದ್ವಾಯಿಯವರ ಪ್ರಕಾರ, ಅಭ್ಯರ್ಥಿಗೆ ಪರಿಚಿತವಾದ ಹಾಗೂ ಆತ ಅರಿತಿರುವ ವಿಷಯಗಳ ಬಗ್ಗೆ ಪ್ರಶ್ನಿಸುವ ಮೂಲಕ ಅವನ ಮನದ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಟ್ಟು, ಆತನ ವ್ಯಕ್ತಿತ್ವ, ಮೌಲ್ಯಗಳು, ಮನಸ್ಸಿನ ಚುರುಕುತನ, ನಿರ್ಣಯ ಸಾಮರ್ಥ್ಯ ಮುಂತಾದವುಗಳ ಬಗ್ಗೆ ಸಂದರ್ಶಕರ ಮಂಡಳಿಯು ನಿಷ್ಪಕ್ಷಪಾತ ಅಭಿಪ್ರಾಯ ರೂಪಿಸುವಂತಾಗಬೇಕು. ಇದರ ಬದಲು ಅಭ್ಯರ್ಥಿಯನ್ನು ತಬ್ಬಿಬ್ಬಾಗಿಸುವ ಒಗಟಿನಂತಹ ಪ್ರಶ್ನೆ ಕೇಳುವುದು ಅನ್ಯಾಯ ಎಂದು ಅಭಿಪ್ರಾಯಪಟ್ಟರು. ಕೇಳಲೇಬೇಕಾದ ಒಂದು ಪ್ರಶ್ನೆಯೆಂದರೆ; ತನ್ನ ಬುದ್ಧಿವಂತಿಕೆಯಿಂದ, ಬರಹದ ಕೌಶಲ್ಯದಿಂದ ತಾನು ಓದಿದ ವಿಷಯಗಳ ಮೇಲಿನ ಪರಿಣಿತಿಯನ್ನು ಸಾಬೀತು ಮಾಡಿದ ದಾಸ್‌ರನ್ನು ಸಂದರ್ಶಕ ಮಂಡಳಿ ನ್ಯಾಯಸಮ್ಮತವಾಗಿ ನಡೆಸಿಕೊಂಡಿತೆ? ಇಲ್ಲದಿದ್ದಲ್ಲಿ ಅಭ್ಯರ್ಥಿಯೊಬ್ಬ ಲಿಖಿತ ಪರೀಕ್ಷೆಗಳಲ್ಲಿ ತನ್ನ ಸಾಮರ್ಥ್ಯ ನಿರೂಪಿಸಲು ವಿಫಲನಾದರೂ ಆತನ ಮಾತುಗಳು ಸಂದರ್ಶಕರನ್ನು ಮೋಡಿ ಮಾಡಿದ್ದರ ಮರ್ಮವನ್ನು ಅರ್ಥ ಮಾಡಿಕೊಳ್ಳುವುದಾದರೂ ಹೇಗೆ?

ಅದೇನೇ ಇರಲಿ, ಕಳೆದ ೨೦ ವರ್ಷಗಳಲ್ಲಿ ನಾವು ಬಹುದೂರ ಸಾಗಿ ಬಂದಂತಿದೆ. ಆದರೂ ೧೯೯೪ರ ಜನವರಿ ೨೩ರ *ಟೈಮ್ಸ್ ಆಫ್ ಇಂಡಿಯಾ* ಉಲ್ಲೇಖಿಸಿರುವ ನಿವೃತ್ತ ವಿದೇಶಾಂಗ ಕಾರ್ಯದರ್ಶಿ ಎಸ್.ಕೆ ಸಿಂಗ್ ಅವರ 'ಮೀಸಲಾತಿ ವರ್ಗದಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಗಳ ಗುಣಮಟ್ಟ ಭಯಾನಕವಾಗಿದೆ. ನಾನು ಲೋಕಸೇವಾ ಆಯೋಗದ ಸದಸ್ಯನಾಗಿದ್ದು, ಈ ಅಭ್ಯರ್ಥಿಗಳಿಗೆ ನೈತಿಕ ಮೌಲ್ಯಗಳಾಗಲೀ, ಸತ್ವ ಸಾಮರ್ಥ್ಯಗಳಾಗಲೀ ಇಲ್ಲವೇ ಇಲ್ಲ ಎಂಬುದನ್ನು ಗಮನಿಸಿದ್ದೇನೆ. ಅವರು ಸೇವೆಗೆ ಸೇರಬಯಸುವುದು ಕೇವಲ ಲಂಚದ ಹಣಕ್ಕಾಗಿ ಮಾತ್ರ.....' ಎಂಬ ಮಾತುಗಳಿಗೇನೂ ನಮ್ಮಲ್ಲಿ ಬರವಿಲ್ಲ....!



**(ಲೇಖಕರು ನಿವೃತ್ತ ಐ.ಎ.ಎಸ್. ಅಧಿಕಾರಿ ಹಾಗೂ ಬಿಹಾರದ ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು)**

(ಕೃಪೆ: ***ಔಟ್‌ಲುಕ್,*** ಮೇ ೩೦, ೨೦೧೬)

ಯುವ ಸಮಾಜವಾದಿ ಚಿಂತನ ವೇದಿಕೆ

# ಪರಿಸರ ಮಲಿನವಾದ ಹಾಗೇ ಮನಸ್ಸುಗಳೂ ಮಲಿನಗೊಳ್ಳುತ್ತಿವೆ...

–ಮಂಜುಳಾ ರಾಜು



**ಸ**ದಾ ತುಂಬಿ ಹರಿಯುವ ತುಂಗೆ. ರಾಶಿ ರಾಶಿ ಸಕ್ಕರೆ ಮರಳು. ಹಲಸು, ಮಾವು, ರಂಜ, ನೇರಳೆ, ಸಂಪಿಗೆ ಮರಗಳು. ಚಿಕ್ಕದಾದ ಬೆಟ್ಟದ ಕೆಳಭಾಗಕ್ಕೆ ಅರ್ಧಚಂದ್ರಾಕೃತಿ ಕೊರೆದಂತೆ ಪುಟ್ಟ ರಸ್ತೆ. ರಸ್ತೆಯ ಎಡ ಬಲದಲ್ಲಿ ಸುಮಾರು ೨೦–೨೫ ಸಾಲು ಮನೆಗಳು. ಇದು ಅಗ್ರಹಾರವೆನಿಸಿಕೊಂಡ ನನ್ನೂರು. ನನ್ನಂತೆ ಬಾಲ್ಯ ಕಳೆದ ಅನೇಕ ಗೆಳೆಯ ಗೆಳತಿಯರ ಖಾಲಿಯಾಗದ ನೆನಪುಗಳ ಭಂಡಾರ. ಒಂದು ಸಾಲಿನ ಮನೆಗಳ ಹಿಂಬದಿಯಲ್ಲಿ ನದಿ ಉದ್ದಕ್ಕೂ ಹರಿಯುತ್ತದೆ. ಶೃಂಗೇರಿ ಕಡೆಯಿಂದ ಬಂದು ಸಮೀಪದ ಮಾಲತಿ ನದಿಯೊಂದಿಗೆ ಸಂಗಮವಾಗಿ ತುಂಬಿ ಹರಿಯುತ್ತಾಳೆ ತುಂಗೆ.

ತುಂಗಾ ಅಗ್ರಹಾರದ ಅವಿಭಾಜ್ಯ ಅಂಗ. ಜನರ ಮನೆಮನದಲ್ಲಿ ನದಿಗೆ ಬಹುಮುಖ್ಯ ಸ್ಥಾನ. ಅವಳನ್ನು ವ್ಯಕ್ತಿಯಾಗಿ ಮಾತನಾಡಿಸುವುದೂ ಆರೋಪ ಹೊರಿಸುವುದೂ ಸೇರಿದಂತೆ ಜನರ ಮಾತಿನ ಮಧ್ಯೆ ತುಂಗೆ ಬಂದು ಹೋಗುತ್ತಾಳೆ. ಮನೆಯ ಹಿಂಬದಿಯಲ್ಲಿ ಹೊಳೆಗೆ ಹೋಗಲು ಕಲ್ಲಿನ ಸೋಪಾನ. ಸುಮಾರು ವರ್ಷದ ನಾಲ್ಕೈದು ತಿಂಗಳು, ಅನೇಕ ಕೆಲಸಗಳು, ಅಂದರೆ ಸ್ನಾನ, ಪಾತ್ರೆ ತೊಳೆಯುವುದು, ಮುಂತಾದ ಕೆಲಸಗಳು ಅಲ್ಲೇ ನಡೆಯುವುದರಿಂದ ನದಿಯು ಮನೆಯ ಒಂದು ಭಾಗವೇ ಸರಿ. ಆಗೆಲ್ಲ ಪ್ಲಾಸ್ಟಿಕ್, ಡಿಟರ್ಜೆಂಟ್ ಬಳಕೆ ಇರಲಿಲ್ಲವಾದ್ದರಿಂದ ನದೀ ತೀರ ಸ್ವಚ್ಛ ಭಾರತ ಅಭಿಯಾನವೇ!

ಇನ್ನು ಜನರು ತಮ್ಮ ಅತೀ ಕಡಿಮೆ ಅವಶ್ಯಕತೆಗಳಿಂದ, ಮುಗ್ಧತೆಯಿಂದ ಶ್ರದ್ಧೆ, ನಂಬಿಕೆ, ಪೂಜೆ, ಜಾತ್ರೆ, ವ್ರತ, ಉತ್ಸವ, ಹಬ್ಬಗಳಲ್ಲಿ ಮಗ್ನರು. 'ಸಂಸ್ಕಾರ' ಕಾದಂಬರಿಯ ಪರಿಸರ, ಅಲ್ಲಿ ಬರುವ ಚಂದ್ರಿ, ನಾರಣಪ್ಪ, ಮುಂತಾದ ಪಾತ್ರಗಳನ್ನು ಕಂಡವರೂ ಇದ್ದರು. ಅನಂತಮೂರ್ತಿಯವರ ತಂದೆ ಈ ಊರಿನಲ್ಲಿ ಸ್ವಲ್ಪ ದಿನ ನೆಲೆಸಿದ್ದರು ಎಂಬ ಅಭಿಮಾನ, ಹೆಮ್ಮೆ ಈ ಊರಿನವರಿಗಿದೆ. ಸತ್ಯಜಿತ್‌ರೇ ಅವರ ಗ್ರಾಮೀಣ ಚಿತ್ರಗಳಲ್ಲಿ ಕಂಡುಬರುವಂತಹ ಪರಿಸರ, ಮನೆಗಳು, ಕಡುಬಡತನ, ವರ್ಷದ ಆರು ತಿಂಗಳು ಸುರಿಯುವ ಜಡಿಮಳೆಗೆ ಜನ ಒಗ್ಗಿಕೊಂಡಿದ್ದರು. ಊರ ಗುಡ್ಡದ ಮೇಲಿರುವ ಒಂದೇ ಸರ್ಕಾರೀ ಕನ್ನಡ ಶಾಲೆಗೆ ಬಡವ, ಶ್ರೀಮಂತರೆನ್ನದೆ ಮಕ್ಕಳು ಅದೇ ಶಾಲೆಗೆ ಹೋಗುತ್ತಿದ್ದರು. ಅಲ್ಲಿಯೇ ಓದಿದ ಹಲವರು ಉನ್ನತ ಸ್ಥಾನ ಪಡೆದು ದೇಶವಿದೇಶಗಳಲ್ಲಿ ಇದ್ದಾರೆ.

ನಮಗೆ ಕಾಲೇಜಿನಲ್ಲಿ ಸಮಾಜಶಾಸ್ತ್ರದ ಉಪನ್ಯಾಸಕರು ವರ್ಣಾಶ್ರಮ ಧರ್ಮ, ಜಾತಿ ವ್ಯವಸ್ಥೆ ಕುರಿತು ವಿವರಿಸುತ್ತಿದ್ದರೆ, ಜೀವಂತ ಉದಾಹರಣೆಗಳು ನಮ್ಮ ಕಣ್ಣೆದುರು ಢಾಳಾಗಿ ಸಿಗುತ್ತಿದ್ದವು. ನಾವು ಹಿಂದಿನ ಪ್ರಾಚೀನ ಕಾಲದಲ್ಲೇ ಇದ್ದೇವೇನೋ ಅನ್ನುವಂತಹ ಸನ್ನಿವೇಶ ಅಲ್ಲಿತ್ತು.

ಮೇಲ್ವರ್ಗದ ಬ್ರಾಹ್ಮಣರು ಅಗ್ರಹಾರದಲ್ಲಿ ವಾಸಿಸುತ್ತಿದ್ದು ಯಾವುದೇ ಅನ್ಯ ಜಾತಿಯವರು ಇರಲಿಲ್ಲ. ಗುಡ್ಡದ ಒಂದು ಬದಿಯಲ್ಲಿ ಬೆತ್ತ ಹೆಣೆಯುವ ಕೊರಗರೂ ಕಿಳ್ಳೆ ಕ್ಯಾತರೂ ಹರಿಜನರೂ ಪ್ರತ್ಯೇಕವಾಗಿ ನೆಲೆಸಿದ್ದರು. ಚಿಕ್ಕದಾದ ಪೇಟೆಯಲ್ಲಿ ಬ್ಯಾರಿ ಮುಸ್ಲಿಮರು, ಕೊಂಕಣಿಗರು, ಘಟ್ಟದ ಕೆಳಗಿನ ಶೆಟ್ಟರೂ ಇರುತ್ತಿದ್ದರು. ಕ್ರಿಶ್ಚಿಯನ್ ಧರ್ಮದ ಒಬ್ಬರನ್ನೂ ನಾವು ಕಂಡಿರಲಿಲ್ಲ. ಹೀಗೆ ಜಾತಿ ಆಧಾರಿತ ವಾಸಿಸುವ ಸ್ಥಳದ ವಿಂಗಡಣೆ ಸ್ಪಷ್ಟವಾಗಿ ಕಾಣುತ್ತಿತ್ತು. ಜನ ಇದನ್ನೆಲ್ಲ ಸಹಜವಾಗಿ ಜೀವನ ಪದ್ಧತಿಯಂತೆ ರೂಢಿಸಿಕೊಂಡಿದ್ದರು. ಅಲ್ಲಿ ಯಾರಿಗೂ ಇದು ಏಕೆ ಹೀಗೆ ಎಂಬ ಪ್ರಶ್ನೆ ಇದ್ದಂತಿರಲಿಲ್ಲ. ನಮ್ಮದೇ ಓರಗೆಯ ಕೆಳಜಾತಿಗಳ ಮಕ್ಕಳು ದನ ಕಾಯುತ್ತಲೋ, ಕೊಟ್ಟಿಗೆ ಕೆಲಸ ಮಾಡುತ್ತಲೋ ಶಾಲೆಯಿಂದ ದೂರವೇ ಉಳಿದಿದ್ದರು. ಬ್ಯಾರಿಗಳು ಅಂಗಡಿಯನ್ನಿಟ್ಟು ವ್ಯಾಪಾರ ಶುರುವಿಟ್ಟುಕೊಂಡರೆ ಕೊಂಕಣಿಗರು ಅಂಗಡಿ ತೆರೆದು ಅವರಿಗೆ ಸ್ಪರ್ಧಿಗಳಾದರೂ ಸಂಘರ್ಷ ವೈಷಮ್ಯಗಳು ಕಾಣಿಸುತ್ತಿರಲಿಲ್ಲ.

ಇಷ್ಟೆಲ್ಲದರ ಮಧ್ಯೆ ತಣ್ಣಗಿನ ಪರಿಸರದಲ್ಲಿ ಸರಳವಾಗಿ ಸಹಜವಾಗಿ ಬದುಕನ್ನು ನಡೆಸುವ ಮಂದಿ ನೆಮ್ಮದಿಯಿಂದಿದ್ದರು. ಹಬ್ಬ, ಹರಿದಿನ, ಜಾತ್ರೆಗಳನ್ನು ಸಂಭ್ರಮಿಸುತ್ತಿದ್ದರು. ಕೊಲೆ, ಆತ್ಮಹತ್ಯೆಯಂತಹ ಸಂಗತಿಗಳನ್ನು ನಾವು ಕಂಡಿರಲಿಲ್ಲ. ನೆಂಟರು ಬಂದರೆ ಉಪಚರಿಸುತ್ತಾ ಲೋಕಾಭಿರಾಮವಾಗಿ ಧಾವಂತವಿಲ್ಲದೇ ಬದುಕುತ್ತಿದ್ದ ಸಮಾಜವನ್ನು ನಾನು ಕಂಡಿದ್ದೆ.

ಆದರೆ, ಕಳೆದ ಎರಡೂವರೆ ದಶಕಗಳಲ್ಲಿ ಬದಲಾವಣೆಯ ಬಿರುಗಾಳಿ ಎಲ್ಲೆಡೆಯೂ ಹಬ್ಬಿದಂತೆ ಇಲ್ಲಿಗೂ ಬೀಸಿದೆ. ತುಂಗೆಯ ಒಡಲು ಮರಳು ಗಣಿಗಾರಿಕೆಯಿಂದ ಬರಿದಾಗಿದೆ. ತುಂಗೆ ಸೊರಗಿದ್ದಾಳೆ. ಇಕ್ಕೆಲಗಳಲ್ಲಿ ಹಳೇ ಕಾಲದ ಹೆಂಚಿನ ಮನೆಗಳು ಮಾಯವಾಗಿ ಕಾಂಕ್ರೀಟ್ ಕಟ್ಟಡಗಳು ಎದ್ದಿವೆ. ಕೆಲವು ಮನೆಯ ಮಕ್ಕಳು ಬೆಂಗಳೂರು, ಡೆಲ್ಲಿ, ಮುಂಬೈ, ಅಮೆರಿಕಾಗಳಲ್ಲಿ ನೆಲೆಸಿದ್ದಾರೆ. ಕೆಲವು ಮನೆಗಳು ವಾರಸುದಾರರಿಲ್ಲದೇ ಹಾಳು ಬಿದ್ದಿವೆ. ಹಾಗೆಯೇ ಯಾಂತ್ರಿಕ ಬದುಕಿಗೆ ಬೇಸತ್ತು ಇಲ್ಲಿ ಬಂದು ತಮ್ಮ ಮೂಲ ಬೇರು ಹುಡುಕುವ ಕುಟುಂಬಗಳೂ ಒಂದೆರಡು ಇವೆ. ಈಗ ಮಕ್ಕಳು ಇಲ್ಲಿನ ಗುಡ್ಡದ ಮೇಲಿನ ಕನ್ನಡ ಶಾಲೆಗೆ ಬೆನ್ನು ಮಾಡಿ ಹತ್ತಿರದ ಪಟ್ಟಣದ ಶಾಲೆಯಿಂದ ಬರುವ ಹಳದಿ ಬಸ್ ಹತ್ತುತ್ತವೆ. ಮನೆಗಳಲ್ಲಿ ವೃದ್ಧ ದಂಪತಿಗಳು ನೆಲೆಸಿರುವ ವೃದ್ಧಾಶ್ರಮವೆಂದು ಕರೆಯಲಾಗದ ಆದರೂ ಹಾಗೇ ಇರುವ ಮನೆಗಳಲ್ಲಿ ಇದ್ದಾರೆ. ನೆಂಟರು ಬಂದರೆ ಸಂಭ್ರಮಿಸುತ್ತಿದ್ದ ಅವರಿಗೆ ಎಣ್ಣೆ ಸೀಗೆ ಹಾಕಿ ಅಭ್ಯಂಗ ಮಾಡಿಸಿ ರುಚಿಕಟ್ಟಾದ ಪತ್ರೊಡೆ, ಪಯಸ, ಹುರುಳಿ ಸಾರು ಮಾಡಿ ಬಡಿಸಿ ಹೊಗಳಿಸಿಕೊಂಡು ಖುಷಿಪಡುತ್ತಿದ್ದ ಕನಕತ್ತೆ ಈಗ ವೆಬ್‌ಸೈಟ್‌ನಲ್ಲಿ ಬುಕ್ ಮಾಡಿದ ಅಪರಿಚಿತ ನೆಂಟರಿಗೆ ಇದೇ ತಿಂಡಿಗಳನ್ನು ಮಾಡಿ ಹೀಗೇ ಉಪಚರಿಸುತ್ತಾ ತನ್ನ ಹೊಂಸ್ಟೇನಲ್ಲಿ ಹಣ ಗಳಿಸುತ್ತಾ ಸಂಸ್ಕೃತಿಯನ್ನೇ ಸರಕಾಗಿಸಿದ್ದಾಳೆ.

ಮನೆಮನೆಗೆ ಆಧುನಿಕ ಎಲೆಕ್ಟ್ರಾನಿಕ್ ಉಪಕರಣಗಳು ಬಂದು ತಮ್ಮಷ್ಟಕ್ಕೇ ಬದುಕುತ್ತಾ ಸಮುದಾಯದ ಬದುಕಿನಿಂದ ದೂರವಾಗಿದ್ದಾರೆ. ಈ ಕುರಿತು ಅಲ್ಲಿ ಬದುಕುತ್ತಿರುವ ನಮ್ಮ ಆತ್ಮೀಯರೊಬ್ಬರನ್ನು ಕೇಳಿದೆ. ಅದಕ್ಕೆ ಅವರು, "ಆಧುನಿಕತೆ, ಅಭಿವೃದ್ಧಿಯಿಂದ ಬದಲಾವಣೆ ಸಾಕಷ್ಟಾಗಿದೆ. ಒಳ್ಳೆದು ಖಂಡಿತ ಆಗಿದೆ. ಆದರೆ ಕೆಟ್ಟದು ಜಾಸ್ತಿಯಾಗಿದೆ. ಹಿಂದೆ ಒಂದೇ ಕೆಲಸವನ್ನು ಅದೆಷ್ಟೇ ಶ್ರಮದಾಯಕವಾಗಿದ್ದರೂ ಸಹ ತುಂಬಾ ಸಮಯ ತೆಗೆದುಕೊಂಡು ಧಾವಂತವಿಲ್ಲದೇ ಮಾಡುತ್ತಿದ್ದೆವು. ಅಲ್ಲಿ ಸಮಾಧಾನವಿತ್ತು, ನೆಮ್ಮದಿಯಿತ್ತು. ಆದರೆ ಇವತ್ತು ಒಂದೇ ಸಮಯದಲ್ಲಿ ಹತ್ತಾರು ಕೆಲಸ ಮಾಡುವ ತರಾತುರಿಯಲ್ಲಿ ನೆಮ್ಮದಿ ಕಾಣುತ್ತಿಲ್ಲ" ಎಂದರು. ಜಾತಿ ವ್ಯವಸ್ಥೆ ಈಗ ಹೇಗಿದೆ ಎಂಬ ನನ್ನ ಪ್ರಶ್ನೆಗೆ, "ಜಾತಿ ವ್ಯವಸ್ಥೆಯು ಕೂಡ ಹಿಂದಿನಂತೆ ಕಟ್ಟುನಿಟ್ಟಾಗಿ ಕಾಣುತ್ತಿಲ್ಲ. ಒಂದೆರಡು ಅಂತರಜಾತಿ, ಅಂತರ್ಧರ್ಮೀಯ ಮದುವೆಗಳು ನಡೆದಿವೆ. ಜನ ಈಗ ಅದಕ್ಕೆ ಹೊಂದಿಕೊಂಡಿದ್ದಾರೆ; ಅಷ್ಟು ತಲೆ ಕೆಡಿಸಿಕೊಳ್ಳುತ್ತಿಲ್ಲ. 'ರಾಜಕೀಯ'ವೊಂದು ತಲೆ ಹಾಕದಿದ್ದರೆ ಜನರನ್ನು ಅವರ ಪಾಡಿಗೆ ಬಿಟ್ಟರೆ ಯಾವುದೂ ಸಮಸ್ಯೆಯಾಗುವುದಿಲ್ಲ. ನಿನಗೆ ಗೊತ್ತಲ್ಲ" ಎಂದರು.

ಇಂದು ಪರಿಸರ ಮಲಿನವಾದ ಹಾಗೇ ಮನಸ್ಸುಗಳೂ ಮಲಿನಗೊಳ್ಳುತ್ತಿವೆ. ಮೇಲು ಕೀಳೆಂಬ ಬಾಹ್ಯ ಆಚರಣೆಗಳು ಕಾಣಿಸದೇ ಹೋದರೂ ಒಳಗಿನ ನಂಬಿಕೆಯ ಗೋಡೆ ಬಿರುಕುಬಿಟ್ಟಿದೆ. ತೋರಿಕೆಯ ಧರ್ಮದ ಚಾದರವನ್ನು ಹೊದ್ದು ಮಲಗಿದಂತಿದೆ. ಸ್ಥಳೀಯ ಪಂಚಾಯಿತಿ ಚುನಾವಣೆಯಲ್ಲಿ ವ್ಯಕ್ತಿಗಿಂತ ರಾಷ್ಟ್ರೀಯ ಪಕ್ಷಗಳ ಹಣ ಮುಖ್ಯವಾಗಿವೆ. ಬೆಟ್ಟ, ಗುಡ್ಡ, ಮರಗಳ ಮೇಲೆಲ್ಲ ಹಸಿರು, ಕೇಸರಿ ಬಾವುಟಗಳೇ ಹಾರಾಡುತ್ತಿರುತ್ತವೆ.

ಹೌದು ನನ್ನೂರು ಬದಲಾಗಿದೆ, ತುಂಬ ಬದಲಾಗಿದೆ. ಒಳ್ಳೆಯದಕ್ಕೆ ಅಂತ ಸದ್ಯಕ್ಕೆ ಹೇಳಲಾರೆ.



**(ಶಿವಮೊಗ್ಗದ ಪಿಯು ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕಿ ಆಗಿರುವ ಮಂಜುಳಾ, ಲೇಖಕಿಯೂ ಹೌದು.)**

# ಸಮಕಾಲೀನ

## ಮೋದಿ ಸರ್ಕಾರದ ಎರಡು ವರ್ಷ: ನಿಮಗೇನೆನ್ನಿಸುತ್ತಿದೆ?



ನರೇಂದ್ರ ಮೋದಿಯವರು ಎರಡು ವರ್ಷಗಳ ಹಿಂದೆ ಈ ದೇಶದ ಪ್ರಧಾನ ಮಂತ್ರಿಯಾಗುವ ಸೂಚನೆಗಳು ರಾಷ್ಟ್ರ ರಾಜಕಾರಣದಲ್ಲಿ ವ್ಯಕ್ತವಾಗತೊಡಗಿದಂತೆ ಒಂದು ಕಡೆ ಅಮಿತವಾದ ಉತ್ಸಾಹ ಕಂಡು ಬಂದರೆ ಮತ್ತೊಂದು ಕಡೆ ಅಷ್ಟೇ ಆತಂಕ ಕಂಡುಬಂದಿತು. ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾಗಿ ಆ ರಾಜ್ಯವನ್ನು 'ಅಭಿವೃದ್ಧಿ'ಪಡಿಸಿದ ರೀತಿ, ಅದರ ಹಿಂದಿನ ಅವರ ದಕ್ಷತೆ ಉತ್ಸಾಹಗಳಿಗೆ ಕಾರಣರಾದರೆ, ಅವರು ಅಲ್ಲಿ ಮುಖ್ಯಮಂತ್ರಿ ಆಗಿದ್ದಾಗಲೆ ನಡೆದ ಮುಸ್ಲಿಮರ ಸಾಮೂಹಿಕ ಹತ್ಯೆ ಮತ್ತು ಅವರ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಅಂತರ್ಗತವಾಗಿದ್ದ ಆಡಳಿತ ಶೈಲಿ ಹಲವರಲ್ಲಿ ಆತಂಕಗಳಿಗೆ ಕಾರಣವಾಗಿತ್ತು. ಆಗ ಬದುಕಿದ್ದ ಲೇಖಕ ಯು.ಆರ್. ಅನಂತಮೂರ್ತಿಯವರು 'ಮೋದಿ ಪ್ರಧಾನಿಯಾದರೆ ನಾನು ಈ ದೇಶದಲ್ಲಿ ಇರಲಾರೆ' ಎಂದು ಹೇಳುವಷ್ಟು ಆ ಆತಂಕ ಹೆಪ್ಪುಗಟ್ಟಿತ್ತು.

ಈ ಹಿನ್ನೆಲೆಯಲ್ಲಿ ನಮ್ಮ ಪತ್ರಿಕೆ ೨೦೧೪ರ ಏಪ್ರಿಲ್ ಸಂಚಿಕೆಯ ಸಮಕಾಲೀನ ಪುಟಗಳನ್ನು 'ಮೋದಿ ಏಕೆ ಪ್ರಧಾನಿಯಾಗಬಾರದು? ಎಂಬ ಪ್ರಶ್ನೆಗೆ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳಿಂದ ಬಂದ ಉತ್ತರಗಳಿಗೆ ಮೀಸಲಿರಿಸಿತ್ತು. ಆಶ್ಚರ್ಯವೆಂದರೆ, ಇವರೆಲ್ಲರೂ ಒಂದೇ ರಾಜಕೀಯ ಅಭಿಪ್ರಾಯದ ಬಣಕ್ಕೆ ಸೇರಿರದಿದ್ದರೂ, ಎಲ್ಲರೂ ತಮ್ಮದೇ ಒಂದೊಂದು ಕಾರಣ ನೀಡಿ, ಮೋದಿ ಪ್ರಧಾನಿ ಆಗುವುದು ಆತಂಕಕಾರಿಯೇ ಹೌದು ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಇವರೆಲ್ಲರ ಆತಂಕವನ್ನು ಮತದಾರ ಲೆಕ್ಕಕ್ಕೇ ತೆಗೆದುಕೊಳ್ಳದಂತೆ ಮೋದಿಯವರನ್ನು ಪ್ರಧಾನ ಮಂತ್ರಿ ಸ್ಥಾನಕ್ಕೆ ಭಾರಿ ಬಹುಮತದಿಂದ ಏರಿಸಿಯೇಬಿಟ್ಟರು. ಈ ದಿಗ್ವಿಜಯದ ಹಿಂದೆ ಆಗ ಅಧಿಕಾರಾರೂಢವಾಗಿದ್ದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರದ ಜಡತೆ ಮತ್ತು ಭ್ರಷ್ಟಾಚಾರದ ಹಗರಣಗಳಿದ್ದವು, ನಿಜ. ಆದರೆ ಇದಕ್ಕಿಂತ ಮುಖ್ಯವಾಗಿ ಮೋದಿಯವರ ವಿಜಯಕ್ಕೆ ಅವರು ಹುಟ್ಟಿಸಿದ್ದ ನಿರೀಕ್ಷೆಗಳು ಮತ್ತು ನೀಡಿದ ಆಶ್ವಾಸನೆಗಳು ಕಾರಣವಾಗಿದ್ದವು.

ಈಗ ಮೋದಿ ಸರ್ಕಾರದ ಎರಡು ವರ್ಷಗಳ ಅಧಿಕಾರಾವಧಿ ಪೂರ್ಣಗೊಂಡಿದೆ. ಮೋದಿ ಈಗತಾನೇ ಅಮೆರಿಕಾದ ಕಾಂಗ್ರೆಸ್‌ನ ಮನ ಗೆದ್ದು ಬಂದು ಭಾರತ ಒಂದು ಜಾಗತಿಕ ಶಕ್ತಿಯಾಗಿ ಹೊರಹೊಮ್ಮುವ ಬಾಗಿಲನ್ನು ತೆರೆದು ಬಂದಿದ್ದಾರೆ ಎಂದೂ ಸಂಭ್ರಮಿಸಲಾಗುತ್ತಿದೆ. ಇರಲಿ, ಮೋದಿಯವರ ಬಗ್ಗೆ ವ್ಯಕ್ತವಾಗಿದ್ದ ಆತಂಕಗಳು ನಿಜವಾಗಿವೆಯೇ? ಅವರು ಹುಟ್ಟಿಸಿದ ಸಾಧನೆಯ ನಿರೀಕ್ಷೆಗಳು ಈಡೇರುವ ಲಕ್ಷಣಗಳು ಕಾಣುತ್ತಿವೆಯೇ? ಅವರ ರಾಜಕಾರಣ ಸರಿಯಾದ ದಾರಿಯಲ್ಲಿ ಸಾಗಿದೆಯೇ? ಎಂಬುದರ ಬಗ್ಗೆ ನಮ್ಮದೇ ಮಿತಿಗಳಲ್ಲಿ ಒಂದು ಸಮೀಕ್ಷೆಯ ಪ್ರಯತ್ನವಾಗಿ ಈಗ ನಾವು ಮೂರು ಪ್ರಶ್ನೆಗಳನ್ನು ನಮ್ಮ ಆಯ್ದ ಕೆಲವು ಓದುಗರಿಗೆ ಕೇಳಿದೆವು. ಅವರು ಕೊಟ್ಟ ಉತ್ತರಗಳನ್ನು ಮುಂದೆ ಕೊಡಲಾಗಿದೆ. ನಾವು ಕೇಳಿದ ಪ್ರಶ್ನೆಗಳು ಹೀಗಿದ್ದವು:

೧. ಮೋದಿಯವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ನಿಮಗಿದ್ದ ಆತಂಕಗಳು ಯಾವುವು? ಅವು ಈಗ ಏನಾದರೂ ದೂರವಾಗಿವೆಯಾ?

೨. ಮೋದಿ ಸರ್ಕಾರದ ಈ ಎರಡು ವರ್ಷಗಳ ಸಾಧನೆಗಳೇನೆಂದು ನೀವು ಗುರುತಿಸುತ್ತೀರಿ?

೩. ಮೋದಿ ಸರ್ಕಾರದ 'ಕಾಂಗ್ರೆಸ್‌ಮುಕ್ತ ಭಾರತ' ಎಂಬ ರಾಜಕೀಯ ಘೋಷಣೆಯನ್ನು ನೀವು ಹೇಗೆ ಅರ್ಥ ಮಾಡಿಕೊಳ್ಳುತ್ತೀರಿ??(ಅದರ ಉದ್ದೇಶ, ಪರಿಣಾಮಗಳಾದರೂ ಏನೆಂದು ನೀವು ಭಾವಿಸುವಿರಿ?)

ಓದಿ, ಬರೆಯಿರಿ–ಸಂಪಾದಕ

### ಪ್ರಜೆಗಳ ಖಾಸಗಿ ಆಯ್ಕೆಗಳಲ್ಲಿ ಹಸ್ತಕ್ಷೇಪ, ತಾಕೀತು...

ನರೇಂದ್ರ ಮೋದಿ ಭಾರತದ ಪ್ರಧಾನಿಯಾಗುವುದಕ್ಕೆ ಮೊದಲು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ದಿನಗಳಲ್ಲಿ ಅವರು ನಡೆದುಕೊಂಡ ರೀತಿ ಭರವಸೆ ಹುಟ್ಟಿಸುವಂತಹದ್ದಾಗಿರಲಿಲ್ಲ. ಅವರ ಅಧಿಕಾರಾವಧಿಯಲ್ಲೇ ೨೦೦೨ರ ಗುಜರಾತ್ ಹತ್ಯಾಕಾಂಡ ನಡೆಯಿತು. ಮೋದಿ ಈ ಹಿಂಸೆಗೆ ಮೂಕ ಪ್ರೇಕ್ಷಕರಾಗಿದ್ದರು. ರಾಜ್ಯದ ಮುಖ್ಯಮಂತ್ರಿಯಾಗಿ ಅವರು ರೂಪಿಸಿದ ಆರ್ಥಿಕ ಅಭಿವೃದ್ಧಿಯ 'ಗುಜರಾತ್ ಮಾದರಿ' ಕೂಡ ಅಷ್ಟೇ ಪ್ರಶ್ನಾರ್ಹವಾಗಿದೆ. ಅದು ಬಡವರನ್ನು ಹೊರಗಿಟ್ಟು ಶ್ರೀಮಂತರನ್ನು ಮಾತ್ರ ಇನ್ನಷ್ಟು 'ಅಭಿವೃದ್ಧಿ' ಪಡಿಸುವ ಮಾದರಿ. ಅದು ಪರಿಸರಕ್ಕೆ ವಿನಾಶಕಾರಿಯೂ ಹೌದು. ಈಗ ಅವರು ಸಿದ್ಧ ಪಡಿಸಿರುವ 'ಸ್ಮಾರ್ಟ್‌ಸಿಟಿ' ಯೋಜನೆಯೂ, ಇದೇ ಅಭಿವೃದ್ಧಿ ಮಾದರಿಯ ಕೂಸು. ಬಡವರು ಮತ್ತು ಅಕುಶಲಿಗಳು ಈ ಸ್ಮಾರ್ಟ್ ಸಿಟಿಗಳಲ್ಲಿ ಖಾಯಂ ದಿನಗೂಲಿಗಳಾಗಿರಬೇಕಾಗುತ್ತದೆ.

ಮೋದಿ, ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ವಿಜೃಂಭಿಸಿದ ಮತೀಯ ದ್ವೇಷದ ಬಿ.ಜೆ.ಪಿ. ರಾಜಕೀಯ ಈಗ ಇನ್ನಷ್ಟು ಜನಪ್ರಿಯವಾಗಿದೆ. ದೇಶದ ಎಲ್ಲ ರಾಜ್ಯಗಳಲ್ಲೂ ಅದು ತನ್ನ ಇರಸ್ತಿಕೆಯನ್ನು ಸಾಬೀತು ಪಡಿಸಿದೆ. ಬಿ.ಜೆ.ಪಿಯ ಜನಪ್ರಿಯತೆಯ ಜೊತೆ ಜೊತೆಗೆ, ದೇಶದ ಬಹುಸಂಖ್ಯಾತ ಹಿಂದು ಪ್ರಜೆಗಳಲ್ಲಿ ಹಿಂದುಯೇತರರು ಮುಖ್ಯವಾಗಿ ಮುಸ್ಲಿಮರ ವಿರುದ್ಧ ದ್ವೇಷವೂ ಹೆಚ್ಚುತ್ತಿದೆ. ಮೋದಿ ನೇತೃತ್ವದ ಸರಕಾರ ಈ ದ್ವೇಷವನ್ನು ಇನ್ನಷ್ಟು ಪ್ರಚೋದಿಸುತ್ತಿದೆ. ಇದು ಯಾವುದೂ ಒಳ್ಳೆಯದಕ್ಕಲ್ಲ.

ನರೇಂದ್ರಮೋದಿ ಆರ್.ಎಸ್.ಎಸ್. ಬಗೆಗಿನ ತನ್ನ ಕಠೋರ ನಿಷ್ಠೆಗೆ ಹೆಸರಾದವರು. ಆದರೆ ಪ್ರಜಾಪ್ರಭುತ್ವ ಎಂತಹ ಕಠೋರ ನಿಷ್ಠೆಯನ್ನೂ ಮೃದುಗೊಳಿಸಬಲ್ಲದು. ಯಾವುದರ ಬಗ್ಗೆಯೇ ಆಗಲಿ, ಹೆಚ್ಚು ಹಠ ಸಾಧಿಸದೆ ಹೊಂದಾಣಿಕೆ ಮಾಡಿಕೊಳ್ಳುವುದೇ ಪ್ರಜಾಪ್ರಭುತ್ವದ ಮುಖ್ಯ ಲಕ್ಷಣ. ಹಾಗಾಗಿ ಮೋದಿಯವರು ಭಾರತದಂತಹ ಹಲವು ಧರ್ಮ, ಭಾಷೆ ಮತ್ತು ಜೀವನ ವಿಧಾನಗಳ ವಿಶಾಲ ದೇಶದ ಪ್ರಧಾನಿಯಾಗಿ ತನ್ನ ಕಠೋರತೆಯಿಂದ ಕಳಚಿಕೊಂಡು ಮೆತ್ತಗಾಗುತ್ತಾರೆ ಎಂದು ಜನ ನಿರೀಕ್ಷಿಸಿದ್ದರು. ಅದು ಈಗ ಸುಳ್ಳಾಗಿದೆ. ಆಳುವ ಪಕ್ಷದ ಪ್ರಮುಖರು, ಒಮ್ಮೊಮ್ಮೆ ಅವರ ಮಂತ್ರಿ ಮಂಡಲದ ಸದಸ್ಯರು ಕೂಡ ಮುಸ್ಲಿಮ್ ಸಮುದಾಯವನ್ನು ಸಾರಾಸಗಟಾಗಿ ಹೀಗಳೆಯುತ್ತ, ಗೋಮಾಂಸ ನಿಷೇಧ, ಘರ್ ವಾಪಸಿ, ಲವ್ ಜೆಹಾದ್ ನಿಯಂತ್ರಣ ಮುಂತಾದವುಗಳ ಹೆಸರಿನಲ್ಲಿ ಆ ಸಮುದಾಯದ ಮೇಲೆ ಹಿಂಸೆಯನ್ನು ಪ್ರಚೋದಿಸುವಾಗ ಮೋದಿಯವರು ಮೌನವಾಗಿರುತ್ತಾರೆ. ಅದು ಜಾಣಮೌನವೂ ಹೌದು; ತನ್ನ ಅನುಯಾಯಿಗಳ ಅಕೃತ್ಯಗಳಿಗೆ ಅವರು ನೀಡುವ ಮೌನ ಸಮ್ಮತಿಯೂ ಹೌದು.

ಮೋದಿಯವರ ಅಧಿಕಾರಾವಧಿಯ ಈ ಎರಡು ವರ್ಷಗಳಲ್ಲೇ ದೇಶದ ಅಪರಾಧ ತನಿಖಾ ಸಂಸ್ಥೆಗಳು ಆಳುವ ಪಕ್ಷದ ಕೈಗೊಂಬೆಗಳಂತೆ ವರ್ತಿಸತೊಡಗಿವೆ. ೨೦೦೬ರ ಮಾಲೇಗಾಂವ್ ಬಾಂಬ್‌ಸ್ಫೋಟ ಮತ್ತು ೨೦೦೭ರಲ್ಲಿ ಸಂಭವಿಸಿದ ಸಮ್ಝೋತಾ ಎಕ್ಸ್‌ಪ್ರೆಸ್ ಬಾಂಬ್‌ಸ್ಫೋಟ ಹಾಗೂ ಹೈದರಾಬಾದ್‌ನ ಮಕ್ಕಾ ಮಸೀದಿ ಬಾಂಬ್ ಸ್ಫೋಟಗಳಲ್ಲಿ ಆರೋಪಿಗಳಾಗಿರುವ ಹಿಂದುತ್ವದ ಭಯೋತ್ಪಾದಕರ ವಿರುದ್ಧ ಹಾಕಲಾಗಿರುವ ಕೇಸುಗಳನ್ನು ಈಗ ಹಗುರಗೊಳಿಸಲಾಗಿದ್ದು, ಆರೋಪಿಗಳು ಒಬ್ಬೊಬ್ಬರಾಗಿ ಜೈಲಿನಿಂದ ಹೊರ ಬರುತ್ತಿದ್ದಾರೆ. ಗುಜರಾತ್‌ನಲ್ಲಿ ೨೦೦೪ರಲ್ಲಿ ನಡೆದ ಇಶ್ರತ್ ಜಹಾನ್ ಮತ್ತಿತರ 'ಎನ್‌ಕೌಂಟರ್ ಕೊಲೆಗಳು ಮತ್ತು ಆ ನಂತರ ನಡೆದ ಸರಣಿ ಎನ್‌ಕೌಂಟರ್‌ಗಳ

ಆರೋಪಿಗಳೂ ಈಗ ಆರೋಪ ಮುಕ್ತರಾಗಿದ್ದಾರೆ. ಆಗಿನ ಗುಜರಾತ್ ಗೃಹ ಮಂತ್ರಿ ಮತ್ತು ಈಗ ಬಿಜೆಪಿ ಅಧ್ಯಕ್ಷ ಅಮಿತ್ ಷಾ ಕೂಡಾ ಈ ಎನ್‌ಕೌಂಟರ್ ಕೊಲೆ ಕೇಸಿನಲ್ಲಿ ಒಬ್ಬ ಪ್ರಮುಖ ಆರೋಪಿಯಾಗಿ ಜೈಲಿನಲ್ಲಿದ್ದರು. ಆದರೆ ಕಳೆದ ಡಿಸೆಂಬರ್‌ನಲ್ಲಿ ವಿವರಣೆಗೆ ನಿಲುಕದ ರೀತಿಯಲ್ಲಿ ನ್ಯಾಯಾಲಯ ಅವರನ್ನು ಖುಲಾಸೆಗೊಳಿಸಿತು. ತನಿಖಾ ಸಂಸ್ಥೆ ಮತ್ತು ಪೋಲಿಸು ಸ್ಟೇಷನ್ನುಗಳು ಮಾತ್ರವಲ್ಲ ದೇಶದ ವಿಶ್ವವಿದ್ಯಾಲಯಗಳು ಕೂಡ ಈಗ ಆರ್.ಎಸ್.ಎಸ್. ಶಾಖೆಗಳಾಗಿ ಮಾರ್ಪಟ್ಟಿವೆ. ಅದು ಹಾಗಲ್ಲವಾದರೆ, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ರೋಹಿತ್ ವೇಮುಲ ಅವರ ಆತ್ಮಹತ್ಯೆ ಹಾಗೂ ದೆಹಲಿಯ ಜೆ.ಎನ್.ಯು.ನ ವಿದ್ಯಾಮಾನಗಳನ್ನು ಹೇಗೆ ವಿವರಿಸುತ್ತೀರಿ?

ನರೇಂದ್ರ ಮೋದಿ ನಾಯಕತ್ವದ ಕೇಂದ್ರ ಸರಕಾರ, ಹಿಂದಿನ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಒಕ್ಕೂಟ ಸರಕಾರದ ಎಲ್ಲಾ ಜನವಿರೋಧಿ ಆರ್ಥಿಕ ಧೋರಣೆಗಳನ್ನು ಯಥಾವತ್ತಾಗಿ ಮುಂದುವರಿಸಿದೆ. ಆದರೆ ಹಿಂದಿನ ಸರಕಾರದ ಮಹಾತ್ಮಾ ಗಾಂಧಿ ಕನಿಷ್ಠ ಕಡ್ಡಾಯ ಕೂಲಿ ಯೋಜನೆಯಂತಹ ಜನ ಸ್ನೇಹಿ ಕಾರ್ಯಕ್ರಮಕ್ಕೆ ವಿನಿಯೋಗಿಸುವ ಮೊತ್ತವನ್ನು ಕಡಿತಗೊಳಿಸಿದೆ. ಬಹಳ ಹಿಂದೆಯೇ ಕಾಂಗ್ರೆಸ್ ಸರಕಾರ, ಕಾಶ್ಮೀರ, ಮಣಿಪುರ ಮುಂತಾದ ಗಡಿ ರಾಜ್ಯಗಳಲ್ಲಿ ಜಾರಿಗೆ ತಂದಿದ್ದ ಸೈನ್ಯದ ವಿಶೇಷಾಧಿಕಾರ ಕಾಯ್ದೆ(೧೯೫೮) ಈಗಲೂ ಮುಂದುವರಿದಿದೆ. ಮತ್ತು ಈ ಶಾಸನವನ್ನು ಪ್ರತಿಭಟಿಸಿ ೨೦೦೦ದ ನವೆಂಬರ್ ೨ರಂದು ತನ್ನ ಅಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ ಮಣಿಪುರದ ಯುವತಿ ಇರೋಮ್ ಶರ್ಮಿಳಾ ಈ ದಿನದವರೆಗೂ ಅದನ್ನು ಮುಂದುವರಿಸಿದ್ದಾರೆ. ದೇಶದ ಪ್ರಭುತ್ವ, ಮಾಧ್ಯಮಗಳು ಮತ್ತು ನಾಗರಿಕ ಸಮಾಜ ಎಂದಿನಂತೆ ಇರೋಮ್ ಶರ್ಮಿಳಾರನ್ನು ಈಗಲೂ ಉಪೇಕ್ಷಿಸಿದೆ. ಆಂತರಿಕ ವಿದ್ರೋಹ ಪ್ರತಿಬಂಧಕ ಕಾಯ್ದೆ, ಸಲಿಂಗ ಕಾಮ ನಿಷೇಧದ ಕಾಯ್ದೆ ಮುಂತಾದ ಪ್ರಜಾಪ್ರಭುತ್ವ ವಿರೋಧಿ ಕಾಯ್ದೆಗಳನ್ನು ಸಹ ಮೋದಿ ಸರಕಾರ ಉಳಿಸಿಕೊಂಡಿದೆ.

ಮೋದಿಯವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಆರ್.ಎಸ್.ಎಸ್. ತನ್ನ ದೇಶ ಪ್ರೇಮದಿಂದ ಇಡೀ ದೇಶವನ್ನು ಬೆಚ್ಚಿ ಬೀಳಿಸುತ್ತಿದೆ. ಹಾಗೆಂದು ಕಾಂಗ್ರೆಸ್ ಆಳ್ವಿಕೆಯಲ್ಲಿ ಅಭಯ ವಾತಾವರಣವಿತ್ತು ಎಂದೇನೂ ಅಲ್ಲ. ಜಾರ್ಖಂಡ್, ಚತ್ತೀಸ್‌ಗಡ, ಒರಿಸ್ಸ ಮುಂತಾದ ರಾಜ್ಯಗಳ ಅದಿರು ಶ್ರೀಮಂತ ಅರಣ್ಯದ ಮೂಲ ನಿವಾಸಿಗಳನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸಿ, ಅವರ ಜಮೀನನ್ನು, ಗಣಿಗಾರಿಕೆಗಾಗಿ ಖಾಸಗಿ ಉದ್ಯಮಿಗಳಿಗೆ ಒಪ್ಪಿಸುವ ಕಾಂಗ್ರೆಸ್ ಧೋರಣೆಯನ್ನು ಮೋದಿ ಸರಕಾರ ಇನ್ನಷ್ಟು ಹುರುಪಿನಿಂದ ಮುಂದುವರಿಸಿದೆ. ೧೯೯೧ರಲ್ಲಿ ಪ್ರಧಾನಮಂತ್ರಿ ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರಕಾರ ಜಾರಿಗೆ ತಂದ 'ಹೊಸ ಆರ್ಥಿಕ ಧೋರಣೆ'ಯ ಪ್ರಕಾರ ಶಿಕ್ಷಣ, ವೈದ್ಯಕೀಯ ಶುಶ್ರೂಷೆ, ಸಾರಿಗೆ ಸಂಪರ್ಕ ಮುಂತಾದ ಮೂಲಭೂತ ಸೇವಾ ಸೌಲಭ್ಯಗಳ ನಿರ್ವಹಣೆಯನ್ನು ಸಹ ಖಾಸಗೀ ಕ್ಷೇತ್ರಕ್ಕೆ ಬಿಟ್ಟುಕೊಡುವ ಪ್ರಕ್ರಿಯೆ ಪ್ರಾರಂಭವಾಯಿತು. ಮೋದಿ ಸರಕಾರದ ಉಸ್ತುವಾರಿಯಲ್ಲಿ ಈ ಕಾರ್ಯಕ್ರಮ ಇನ್ನಷ್ಟು ಬಿರುಸಿನಿಂದ ಸಾಗಿದೆ.

ಆದರೆ ಇದೇ ವೇಳೆಗೆ ಯಾವ ಮಾನವಂತ ಪ್ರಜಾಪ್ರಭುತ್ವ ಸರಕಾರವೂ ತಲೆ ಹಾಕದ ಪ್ರಜೆಗಳ ಖಾಸಗಿ ಆಯ್ಕೆಗಳು – ಅವರ ಓದು, ಅವರ ಯೋಚನೆ, ಅವರು ನೋಡುವ ಚಲನಚಿತ್ರ, ನಾಟಕ ಕೊನೆಗೆ ಅವರು ಉಣ್ಣುವ ಆಹಾರ ಕೂಡಾ ಹೇಗಿರಬೇಕು ಎಂದು ಈಗ ಸರಕಾರವೇ ಜನರಿಗೆ ತಾಕೀತು ಮಾಡುತ್ತಿದೆ. ಕಾಂಗ್ರೆಸ್ ಸರಕಾರ ತನ್ನ ಆಳ್ವಿಕೆಯ ಕಾಲಾವಧಿಯಲ್ಲಿ (೧೯೭೫–೭೭ರ ತುರ್ತು ಪರಿಸ್ಥಿತಿ ಹೊರತು ಪಡಿಸಿ) ಎಂದೂ ಪ್ರಜೆಗಳ ಬದುಕಿನೊಳಗೆ ಹೀಗೆ ಅತಿಕ್ರಮಿಸಿರಲಿಲ್ಲ. 'ಸಸ್ಯಾಹಾರ' ಸಾತ್ವಿಕ, ಮಾಂಸಾಹಾರ ತಾಮಸ, ಗೋಮಾಂಸ ತಿನ್ನುವುದಂತೂ ಮಹಾ ಪಾತಕ ಎಂದು ಕಾಂಗ್ರೆಸ್ ಸರಕಾರ ಯಾವತ್ತೂ ಬೋಧಿಸಲಿಲ್ಲ. ಹಾಗೆಯೇ ಪ್ರಜೆಗಳಿಗೆ "ಭಾರತ ಮಾತಾಕಿ ಜೈ" ಎಂದು ಘೋಷಿಸಲು ಒತ್ತಾಯಿಸುವ ಮೂರ್ಖತನವನ್ನು ಕಾಂಗ್ರೆಸ್ ಯಾವತ್ತೂ ಪ್ರದರ್ಶಿಸಲಿಲ್ಲ. ಈ ದೃಷ್ಟಿಯಿಂದ ನೋಡಿದರೆ ಮೋದಿಯವರು ಪ್ರಧಾನಿಯಾಗಿ ಅಧಿಕಾರವಹಿಸಿಕೊಂಡ ನಂತರ ಭಾರತ ಕಾಂಗ್ರೆಸ್ ಮುಕ್ತವಾಗಿರುವುದು ನಿಜ.



**–ಜಿ. ರಾಜಶೇಖರ,** ಹಿರಿಯ ಸಾಹಿತ್ಯ ವಿಮರ್ಶಕ ಹಾಗೂ ರಾಜಕೀಯ ಚಿಂತಕರು, **ಉಡುಪಿ**

# ನೆಹರೂ ಮೋದಿಯ ರೋಲ್ ಮಾಡೆಲ್ ಆಗಿರುವಂತಿದೆ

೧. ನರೇಂದ್ರ ಮೋದಿ ಆಡಳಿತ ಸುರುವಾಗಿ ಎರಡು ವರ್ಷ ಸರಿದಿವೆ. ಆಳುವವರು ಈ ಹಂತದಲ್ಲಿ ಸಾಗಿ ಬಂದ ದಾರಿಯ ಕುರಿತು ಹೊರಳು ನೋಟ ಬೀರುವುದು, ಮುಂದಿನ ಹೆಜ್ಜೆಗಳ ಲೆಕ್ಕಾಚಾರ ಹಾಕುವುದು ಒಂದು ರೀತಿ: ಆಳಿಸಿಕೊಳ್ಳುವ ನಾವು ನೀವು ನಮ್ಮ ನಮ್ಮ ಮೌಲ್ಯಗಳ ಹಿನ್ನೆಲೆಯಲ್ಲಿ ಅವರ 'ಮೌಲ್ಯ'ಮಾಪನ ಮಾಡುವುದು ಇನ್ನೊಂದು ರೀತಿ. ಮೋದಿ ಸಿದ್ಧಾಂತವನ್ನು ಮೊದಲಿನಿಂದಲೂ ವಿರೋಧಿಸುತ್ತಲೇ ಬಂದಿರುವ ನಮ್ಮಂಥವರು 'ವಸ್ತು ನಿಷ್ಠತೆ' ಎಂಬ ಪದವನ್ನು ಪ್ರಾಮಾಣಿಕವಾಗಿ ಬಳಸಲು ಸಾಧ್ಯವಾಗುವುದಿಲ್ಲ.

ಸ್ಪಷ್ಟವಾದ ಬಲಪಂಥೀಯ ನಿಲುವಿನ ಬಿಜೆಪಿಯ 'ಶಿಸ್ತಿನ ಸಿಪಾಯಿ'ಯಾಗಿ ಮೋದಿ ಸಾಗುತ್ತಿಲ್ಲ ಎಂಬುದು ಸ್ಪಷ್ಟ. ಇಂಡಿಯಾದ ರಾಜಕೀಯ ಇತಿಹಾಸದಲ್ಲಿ ತನಗೊಂದು ಅನನ್ಯ ಸ್ಥಾನ ಸಿಗಬೇಕು ಎಂಬ ಸಹಜ ಮಹತ್ವಾಕಾಂಕ್ಷೆ ಅವರದು. ಅಂಥ ಆಂತರಿಕ ಬಲವೂ ಅವರಿಗಿದೆ ಎಂಬುದನ್ನು ಸಾಬೀತು ಮಾಡಿದ್ದಾರೆ. ಗುಜರಾತಿನ ಮುಖ್ಯಮಂತ್ರಿಗಿರಿಯ ಅವಧಿಯಲ್ಲಿ ಆರ್.ಎಸ್.ಎಸ್ ಮುಂತಾದವನ್ನು ಹದ್ದುಬಸ್ತಿನಲ್ಲಿ ಇಟ್ಟಿದ್ದರು. ಪ್ರಧಾನಿಯಾದ ನಂತರವೂ ಆರೆಸ್ಸೆಸ್‌ನ ನುಡಿಗಟ್ಟು–ವ್ಯಾಕರಣದ ಆಚೆಯೇ ಮಾತಾಡುತ್ತಿದ್ದಾರೆ. 'ಹಿಂದೂ ರಾಷ್ಟ್ರ', ಅಯೋಧ್ಯೆ, ರಾಮಮಂದಿರ ನಿರ್ಮಾಣ ಇವುಗಳ ಬಗ್ಗೆ ಮಾತೇ ಇಲ್ಲ. ಭಾರತೀಯರೆದುರು ಅವರು ತೆರೆಯುವುದು ತಮ್ಮ ಮನಸ್ಸನ್ನು ಮಾತ್ರ–'ಮನಕೀ ಬಾತ್' ಮೂಲಕ. ಬಾಯಿ ತೆರೆಯುವುದು ಭಾರತದ ಹೊರಗೆ ಮಾತ್ರ. ಗುಜರಾತ್ ಹತ್ಯಾಕಾಂಡದ ದೆಸೆಯಿಂದ ಕೆಟ್ಟುಹೋಗಿದ್ದ ತಮ್ಮ ಬಿಂಬವನ್ನು ರಿಪೇರಿ ಮಾಡಿಕೊಳ್ಳಲು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಅವರು ನೆನೆಯುವುದು ಬುದ್ಧ, ಗಾಂಧಿ, ಬಸವ, ಮಾರ್ಟಿನ್ ಲೂಥರ್ ಕಿಂಗ್ ಹೆಸರುಗಳನ್ನು ಮತ್ತು ಜಪಿಸುವುದು ಆಧುನಿಕ ಜಗತ್ತಿನ 'ಅಭಿವೃದ್ಧಿ' ಮಂತ್ರವನ್ನು. ಈ ನಿಟ್ಟಿನಲ್ಲಿ ನೆಹರೂ ಅವರು ಮೋದಿ ಅವರ ರೋಲ್ ಮಾಡೆಲ್ ಆಗಿರುವ ಹಾಗಿದೆ.

ಇದೆಲ್ಲವೂ ದೂರಗಾಮಿ ಕ್ರಿಯಾಯೋಜನೆಗಳನ್ನು ಇಟ್ಟುಕೊಂಡ ಬಲಪಂಥೀಯ ಶಕ್ತಿಗಳ ಹುನ್ನಾರದ ಒಂದು ಭಾಗವೇ ಆಗಿರಬಹುದು.

೨. ದೇಶದ ಅನೇಕ ಆಂತರಿಕ ಸಮಸ್ಯೆಗಳ ಪರಿಹಾರದ ದಿಕ್ಕಿನಲ್ಲಿ ಮೋದಿ ಸರಕಾರದ ಸಾಧನೆ ಹೇಳಿಕೊಳ್ಳುವಂಥದಲ್ಲ. ಒಂದು 'ರಾಷ್ಟ್ರೀಯ' ಪಕ್ಷಕ್ಕೆ ನಮ್ಮ ಸಂವಿಧಾನದ ಮೌಲ್ಯಗಳ ಚೌಕಟ್ಟಿನಲ್ಲಿ ಇರಬೇಕಾದ ಸಮಗ್ರ ವ್ಯಕ್ತಿತ್ವವನ್ನು ಒದಗಿಸುವಲ್ಲಿ ಮೋದಿ ಸಫಲರಾಗಿಲ್ಲ; ಆ ನಿಟ್ಟಿನಲ್ಲಿ ಪ್ರಯತ್ನವನ್ನೂ ಮಾಡುತ್ತಿಲ್ಲ. ಬಂಡವಾಳಶಾಹಿ ಮತ್ತು ಕೋಮುವಾದಿ ಶಕ್ತಿಗಳ 'ಸಹಜ' ಮೈತ್ರಿ ಏನೇನು ಅನಾಹುತ ಮಾಡಬಹುದೋ ಅಂಥದೆಲ್ಲ ಆಗುತ್ತಲೇ ಇವೆ. ದೊಡ್ಡ ಹೊಡೆತ ಬೀಳುತ್ತಿರುವುದು ನಮ್ಮ ಸೆಕ್ಯುಲರ್ ಮೌಲ್ಯಕ್ಕೆ. ಈ ಆಘಾತವನ್ನು ಎದುರಿಸಲು ಪ್ರಗತಿಪರ, ಎಡಪಂಥೀಯ ಶಕ್ತಿಗಳೂ ತಯಾರಾಗುತ್ತಿವೆ. ದೇಶದ ರಾಜಧಾನಿಯಲ್ಲಿಯೇ 'ಆಮ್ ಆದಮಿ ಪಾರ್ಟಿ' – ತನ್ನ ಧ್ಯೇಯ ಹಾಗೂ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ ಪ್ರತಿಗಾಮಿ ಶಕ್ತಿಗಳಿಗೆ ಸವಾಲಾಗಿ ನಿಂತಿರುವುದು ಸ್ಪಷ್ಟ.

೩. 'ಕಾಂಗ್ರೆಸ್–ಮುಕ್ತ' ಭಾರತ; ಇದು ಭಾರತೀಯ ಜನತಾ ಪಕ್ಷದ ಘೋಷಣೆ. ಪಕ್ಷ ರಾಜಕೀಯವೇ ಬುನಾದಿಯಾಗಿರುವ ನಮ್ಮ ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ಇಂಥ ಬಾಲಿಶ/ಅಪ್ರಬುದ್ಧ ನಿಲುವನ್ನು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ. ಒಂದು ನೆಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಸೆಕ್ಯುಲರ್ ಮತ್ತು ಕೋಮುವಾದಿ ಶಕ್ತಿಗಳ ಸಂಕೇತಗಳು. ಇಂಡಿಯಾದ ಚರಿತ್ರೆ ಎಂದರೆ ಈ ಎರಡು ಶಕ್ತಿಗಳ ಸೆಣಸಾಟ–ಸಂಘರ್ಷಗಳ ಚರಿತ್ರೆಯೇ. ನಮಗೆ ಬೇಕಾಗಿರುವುದು 'ಸಂಘರ್ಷ ಮುಕ್ತ' ಭಾರತ. ಇಂದಿನ ಜಾಗತಿಕ ವಿದ್ಯಮಾನಗಳ 'ಗತಿ' ನೋಡಿದರೆ ಇಂಥದೊಂದು 'ಆದರ್ಶ' ದೂರವಿದ್ದಂತೆ ಅನ್ನಿಸಿದರೂ ಅದು ಹತ್ತಿರ ಹತ್ತಿರ ಬರುತ್ತಿದೆ.



**–ಚಂಪಾ** (ಪ್ರೊ. ಚಂದ್ರಶೇಖರ ಪಾಟೀಲ), ಹಿರಿಯ ಲೇಖಕರು ಮತ್ತು ಚಿಂತಕರು, **ಬೆಂಗಳೂರು**

## ‘ಗುಜರಾತ್ ಮಾದರಿ’ ನಡುಕ ಹುಟ್ಟಿಸುತ್ತದೆ...

೧. ಮೋದಿ ಅಧಿಕಾರಕ್ಕೆ ಬಂದಾಗ ಸಹಜವಾಗಿಯೇ ಇದ್ದ ಆತಂಕವೆಂದರೆ ಅವರ ಗುಜರಾತ್ ಮಾದರಿ ಇಡೀ ದೇಶಕ್ಕೆ ಹಬ್ಬುತ್ತದೆ ಎನ್ನುವ ಭಯ; ಕೇಸರೀಕರಣ ‘ಸಂಪೂರ್ಣ ಕೇಸರೀಕರಣ’ ವಾಗುತ್ತದೆ ಎಂಬ ದಿಗಿಲು; ಪ್ರಜಾಪ್ರಭುತ್ವದ ಮೂಲಮಂತ್ರವಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಾತಾಳಕ್ಕೆ ತುಳಿದು ಹಾಕಲಾಗುವುದು ಎಂಬ ಆತಂಕ. ಈ ಭಯ, ಆತಂಕ, ತಲ್ಲಣಗಳು ದೂರವಾಗುವ ಸನ್ನಿವೇಶವೇ ಕಾಣುತ್ತಿಲ್ಲ; ಬದಲು ಇಡೀ ದೇಶವನ್ನೇ ನುಂಗುತ್ತಿವೆ.

೨. ಗುಜರಾತ್ ಮಾದರಿ ಎಂದರೆ ವ್ಯಾಪಾರಿಗಳಿಗೆ, ಬೃಹತ್ ಕೈಗಾರಿಕೋದ್ಯಮಿಗಳಿಗೆ ಮತ್ತು ಕಾರ್ಪೋರೇಟ್ ಸಂಸ್ಥೆಗಳಿಗೆ ದೇಶವನ್ನು ಹಾಸಿ ಕೊಡುವುದು. ಭಾರೀ ಬಂಡವಾಳಗಾರರಿಗೆ ಹೆಬ್ಬಾಗಿಲು ತೆರೆಯುವುದು. ಇದರಿಂದ ಯಾರು ನರಳುತ್ತಾರೆ, ಯಾರು ನಲುಗುತ್ತಾರೆ, ಯಾರು ನಗುತ್ತಾರೆ ಎಂಬ ವಸ್ತುಸ್ಥಿತಿಯನ್ನು ಮುಚ್ಚಿ, ಪ್ರಗತಿಭ್ರಮೆಯ ಗ್ರಾಫನ್ನು ತೋರಿಸುವುದು. ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹಿರಾತು ಪ್ರಕಟಿಸಿ ‘ಸಾಧನೆ’ಯ ಡಂಗೂರ ಬಾರಿಸುವುದು. ದೇಶದ ಹಸಿವು, ಬಡತನ, ಅಪೌಷ್ಟಿಕತೆ, ಅನಕ್ಷರತೆ, ಮೌಢ್ಯ ಇತ್ಯಾದಿ ಯಾವುದರ ಬಗೆಗೂ ಚಕಾರ ಎತ್ತದಿರುವುದು. ಮೋದಿ ಅವರು ಅಧಿಕಾರ ನಡೆಸಿದ ಗುಜರಾತ್‌ನಲ್ಲಿ ಇವತ್ತು ಯಾವ ಸ್ಥಿತಿ ಇದೆ ಎಂಬ ವಸ್ತುನಿಷ್ಠ ವರದಿಗಳನ್ನು ಗಮನಿಸಿದರೆ, ‘ಗುಜರಾತ್ ಮಾದರಿ’ ನಡುಕ ಹುಟ್ಟಿಸುತ್ತದೆ. ಈಗ ಪ್ರಧಾನಿಯಾಗಿ ಮೋದಿ ಇಡೀ ರಾಷ್ಟ್ರಕ್ಕೆ ಇದನ್ನು ವಿಸ್ತರಿಸುತ್ತಿದ್ದಾರೆ. ಈಗ ದೇಶದ ಸ್ಥಿತಿ ಹೇಗಿರಬಹುದು ಎಂಬುದಕ್ಕೆ ಯಾವ ಅಂಕಿ ಅಂಶಗಳೂ ಬೇಡ.

ಮೋದಿ ಸರ್ಕಾರದ ಇನ್ನೊಂದು ಸಾಧನೆಯನ್ನು ನೋಡೋಣ: ವೇಮುಲ, ಕನ್ನಯ್ಯ, ಕಲ್ಬುರ್ಗಿ, ಪನ್ಸಾರೆ, ಧಾಬೋಲ್ಕರ್, ಪೆರುಮಾಳು ಮುರುಗನ್ ಮೊದಲಾದವರ ಗಂಟಲನ್ನು ಸದ್ದಿಲ್ಲದೆ ಸೀಳಿದ್ದು; ಫ್ಯಾಸಿಸ್ಟ್ ಶಕ್ತಿಗಳಿಗೆ ನೀರು ಗೊಬ್ಬರ ಹಾಕಿ ಸಮೃದ್ಧ ಫಸಲು ತೆಗೆದದ್ದು. ಇದು ಕಾಣುವ ಬೆಳವಣಿಗೆಯಾದರೆ, ಕಾಣದ ಬೆಳವಣಿಗೆ: ಎಲ್ಲ ಮುಖ್ಯ ಸ್ವಾಯತ್ತ ಸಂಸ್ಥೆಗಳನ್ನೂ ಸರ್ಕಾರದ ಹಿಡಿತಕ್ಕೆ ತಂದು ಅಲ್ಲಿ ಪರಿವಾರದ ಮಂದಿಯನ್ನು ಕೂರಿಸಿದ್ದು. ಈ ಸಂಸ್ಥೆಗಳ ಮುಖ್ಯಸ್ಥರು ಹಿಂದುತ್ವದಲ್ಲಿ ನಂಬಿಕೆ ಇಟ್ಟಿರಬೇಕು, ಇಲ್ಲವೇ ಬಿಜೆಪಿ ಅಥವಾ ಸಂಘ ಪರಿವಾರದವರು ಹೇಳುವುದನ್ನು ಮಾತಿಲ್ಲದೆ ಒಪ್ಪಿಕೊಂಡು ಜಾರಿಮಾಡುವ ‘ಹೌದಪ್ಪ’ಗಳಾಗಬೇಕು. ಎರಡು ವರ್ಷಗಳ ಅವಧಿಯಲ್ಲಿ ಈ ಸಾಧನೆ ಎಷ್ಟು ರಭಸದಿಂದ ನಡೆದಿದೆ ಎನ್ನುವುದಕ್ಕೆ ಈ ಸಂಸ್ಥೆಗಳನ್ನು ಗಮನಿಸಿ: ಪುಣೆಯ ಫಿಲಂ ಇನ್ಸ್‌ಟಿಟ್ಯೂಟ್ (ಎಫ್‌ಟಿಐಐ), ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಸಿಮ್ಲಾ; ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಮುಂಬೈ; ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ; ವಿಶ್ವೇಶ್ವರಯ್ಯ ನ್ಯಾಷನಲ್ ಇನ್ಸ್‌ಟಿಟ್ಯೂಟ್, ನಾಗಪುರ; ಸೆನ್ಸಾರ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್ (ಸಿಬಿಎಫ್‌ಐ); ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ (ಐಸಿಸಿಆರ್), ಎನ್‌ಸಿಇಆರ್‌ಟಿ, ವಿಶ್ವಭಾರತಿ, ಪ್ರಸಾರ ಭಾರತಿ, ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ ಇತ್ಯಾದಿ. ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಸ್ವಾಯತ್ತತೆಯನ್ನು ಕಿತ್ತೆಸೆದದ್ದು ಮೋದಿಯವರ ‘ಹಿಟ್ಲರ್’ ಸಾಧನೆ. ಈ ಸ್ವಾಯತ್ತ ಸಂಸ್ಥೆಗಳಿಗೆ ನೇಮಕಗೊಂಡಿರುವ ಮುಖ್ಯಸ್ಥರನ್ನು ನೋಡಿ; ಇತರ ಸದಸ್ಯರನ್ನೂ ಗಮನಿಸಿ. ಇವರೆಲ್ಲ ಪರಿವಾರದ ಮಂದಿಯೇ. ನಮ್ಮ ಆಕಾಶವಾಣಿ ಮತ್ತು ದೂರದರ್ಶನಗಳು ಈಗ ಯಾವ ಅವಸ್ಥೆಯನ್ನು ಪಡೆದುಕೊಂಡಿವೆ ಗಮನಿಸಿ.

೩. ‘ಕಾಂಗ್ರೆಸ್ ಮುಕ್ತ ಭಾರತ’ ಎಂದರೆ ‘ವಿರೋಧ ಪಕ್ಷ’ವಿಲ್ಲದ ‘ಪ್ರಜಾಪ್ರಭುತ್ವ.’ ಹಿಂದೂ ರಾಷ್ಟ್ರಕ್ಕೆ ವಿರೋಧ ಪಕ್ಷ ಬೇಡ; ಹಿಂದೂಗಳಲ್ಲದ ಅನ್ಯ ಧರ್ಮೀಯರೂ ಬೇಡ. ಇಂಥ ಸ್ಥಿತಿಯಲ್ಲಿ ಅಲ್ಪಸಂಖ್ಯಾತರಾಗಿರುವ ಅನ್ಯಧರ್ಮೀಯರ ಸ್ಥಿತಿ ಹೇಗಿರಬೇಡ! ಇನ್ನೂ ಮೂರು ವರ್ಷಗಳಿವೆಯಲ್ಲಾ!



**–ಜಿ.ಪಿ. ಬಸವರಾಜು, ಹಿರಿಯ** ಲೇಖಕರು ಮತ್ತು ಪತ್ರಕರ್ತರು, **ಮೈಸೂರು**

## ಭಾಜಪ ಕೂಡ ಭಾರತದ ಸ್ವಧರ್ಮ ಅರ್ಥ ಮಾಡಿಕೊಂಡಿಲ್ಲ

೧. ನರೇಂದ್ರ ಮೋದಿಯವರು ರಾಜ್ಯವೊಂದರ ಮುಖ್ಯಮಂತ್ರಿಯಾಗಿದ್ದವರು. ಅವರು ಇಡೀ ದೇಶದ ಚುಕ್ಕಾಣಿ ಹಿಡಿದಾಗ ಹೇಗೆ ಆಡಳಿತ ಮಾಡುತ್ತಾರೋ ಎಂದು ಸಹಜವಾಗಿಯೇ ಆತಂಕವಿತ್ತು. ಮುಖ್ಯವಾಗಿ ಅವರು ಅವರ ಪಕ್ಷದ ಹಿಂದಿನ ಚಿಂತಕರಾದ ದೀನದಯಾಳು ಉಪಾಧ್ಯಾಯ, ಜೆ.ಸಿ.ಕುಮಾರಪ್ಪ ಮುಂತಾದವರ ಚಿಂತನೆ ಆಧರಿಸಿ ಹೇಳಿದ್ದ ಏಕಾತ್ಮಮಾನವ ದರ್ಶನ ಕುರಿತು ಕೆಲಸ ಮಾಡಬಹುದು, ಆ ನಿಟ್ಟಿನಲ್ಲಿ ನಗರ ಮತ್ತು ಹಳ್ಳಿಗಳ ಅಭಿವೃದ್ಧಿಗೆ ಏನಾದರೂ ಕ್ರಮ ಕೈಗೊಳ್ಳಬಹುದು ಅಂತ ಭರವಸೆ ಇತ್ತು. ಆದರೆ ಅವರೂ ಕೂಡ ಮನಮೋಹನಸಿಂಗರ ಉದಾರೀಕರಣದ ದಾರಿ ಹಿಡಿದಿದ್ದರಿಂದ ಅಂಥ ಆತಂಕಗಳು ದೂರವಾದವು. ಎರಡನೆಯದು ಸ್ವತಃ ಡಾ. ಹೆಡಗೇವಾರ್ ಮತ್ತು ಗುರೂಜಿ ಗೋಳ್ವಾಲ್ಕರ್ ಮಾರ್ಗದರ್ಶನದಲ್ಲಿ ಜನಸಂಘ ಕಟ್ಟಿ, ಫರೂಕ್ ಅಬ್ದುಲ್ಲನ ಸೆರೆಯಲ್ಲಿ ಸಂಶಯಾಸ್ಪದವಾದ ಸಾವನ್ನು ಅಪ್ಪಿದ್ದ ಡಾ. ಶ್ಯಾಂ ಪ್ರಸಾದ್ ಮುಖರ್ಜಿಯವರು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಉಸಿರಿರುವ ತನಕ ಹೋರಾಡಿದ್ದರು. ಆದರೆ ಹುರಿಯತ್ ಜೊತೆ ಸಂಬಂಧವಿರುವ ಮೆಹಬೂಬಾ ಮುಫ್ತಿಯವರ ಪಕ್ಷದೊಂದಿಗೆ ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿ ಸರ್ಕಾರ ರಚನೆ ಮಾಡಿದ ಮೇಲೆ ಇದು ಹಿಂದಿನ ಕಾಂಗ್ರೆಸ್‌ಗಿಂತ ಯಾವ ರೀತಿಯಲ್ಲೂ ಬೇರೆಯಲ್ಲ ಎಂದು ಮನವರಿಕೆಯಾಯಿತು. ಈ ಎರಡೂ ಆತಂಕಗಳೂ ಮೋದಿಯವರ ಕಾಲದಲ್ಲಿ ನಿವಾರಣೆಯಾದವು.

೨. ಮೋದಿ ಸರ್ಕಾರ ಎಂಬ ಶಬ್ದ ಸರಿಯಲ್ಲ. ಅದು ಜನರಿಂದ ಚುನಾಯಿತವಾದ ಕೇಂದ್ರ ಸರ್ಕಾರ. ವಿದೇಶಿ ಬಂಡವಾಳ ಆಕರ್ಷಿಸಿದ್ದು ಪ್ರಮುಖ ಸಾಧನೆ, ಗಡಿಯಲ್ಲಿ ಲೇಸರ್ ಬೇಲಿ ಹಾಕುವ ಕೆಲಸ ಪೂರ್ಣಗೊಂಡರೆ ಗಡಿಸುರಕ್ಷತೆ ದೃಷ್ಟಿಯಿಂದ ಸ್ವಲ್ಪ ಸುಧಾರಣೆ ಆಯಿತು ಅಂದುಕೊಳ್ಳಬಹುದು. ಈ ಎರಡನ್ನು ಸಾಧನೆ ಎನ್ನಬಹುದು.

೩. ಜನರಿಗೆ ಉಪನಿಷತ್ತು ಹೇಳಿರುವ ಪಂಚಕೋಶಗಳಿವೆ (ಅನ್ನ–ಪ್ರಾಣ–ಮನಸ್ಸು–ವಿಜ್ಞಾನ–ಆನಂದಮಯ ಕೋಶ) ಎಂಬುದೇ ಈ ರಾಜಕಾರಣಿಗಳಿಗೆ ಮರೆತುಹೋಗಿದೆ. ಕಾಂಗ್ರೆಸ್ ಮುಕ್ತ ಭಾರತ ಎನ್ನುವುದು ಇನ್ನು ಮುಂದೆ ಕಾಂಗ್ರೆಸ್ ಪಕ್ಷ ಹೆಚ್ಚಿನ ಅಧಿಕಾರ ಗಳಿಸದು, ಮತ್ತೆ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯದು ಎಂದರೆ ಅದು ಒಪ್ಪದ ಮಾತು. ಆದರೆ ಧರಂಪಾಲ್ ಮುಂತಾದ ಸ್ವತಂತ್ರ ಚಿಂತಕರು ಭಾರತ ತನ್ನ ಸ್ವಧರ್ಮ, ಸ್ವಭಾವದ ಮೇಲೆ ನಿಲ್ಲಬೇಕು ಎಂದು ಹಲವು ಸಂಪುಟಗಳಲ್ಲಿ (ಇಂಗ್ಲಿಷ್ ೫, ಹಿಂದಿ ೧೧) ದಾಖಲೆ ಸಮೇತ ಬರೆದಿದ್ದಾರೆ. ಆದರೆ ಕಾಂಗ್ರೆಸ್ ಹೇಗೋ ಭಾಜಪ ಕೂಡ ಭಾರತದ ಸ್ವಧರ್ಮ ಅರ್ಥಮಾಡಿಕೊಂಡಿಲ್ಲ. ಹೀಗಾಗಿ ಇಂದು ಎನ್‌ಡಿಎ, ನಾಳೆ ಯುಪಿಎ. ಇದ್ದದ್ದರಲ್ಲಿ ಸ್ವಚ್ಛ ಕೈಯಿ ಬಾಯಿ ಇದ್ದ ಆ ನಿತೀಶ್‌ಕುಮಾರ್, ಮೇವು ತಿನ್ನುವ ಆ ಲಾಲೂ ಜೊತೆ ಕೈಜೋಡಿಸಿದ ಅಂದ ಮೇಲೆ ಸಮಾಜವಾದಿಗಳು ಎಂಥ ಅಧೋಗತಿಗೆ ಬಂದಿದ್ದಾರೆ ಅಂತ ಬಿಡಿಸಿ ಹೇಳಬೇಕಿಲ್ಲ. ಹೀಗಾಗಿ ತೃತೀಯ ರಂಗದ ಬಗ್ಗೆ ಹೇಳಲು ಏನೂ ಉಳಿದಿಲ್ಲ. ಆದರೆ ಜನರಿಗೆ ತಲೆ ಎತ್ತಿ ಬಾಳುವ ದಿನ ಎಂದು ಬರುವುದೋ, ಮಹಾತ್ಮ ಗಾಂಧೀಜಿ, ಯೋಗಿ ಅರವಿಂದರು ಕಂಡ ಭಾರತದ ಕನಸು ಯಾವಾಗ ಈಡೇರುತ್ತದೋ ತಿಳಿಯದು. ಕಾಂಗ್ರೆಸ್ ಅಥವಾ ಬಿಜೆಪಿ ಮುಕ್ತ ಭಾರತದಿಂದ ಕಡಿಯುವುದು ಏನನ್ನು ಎಂಬುದೇ ಪ್ರಶ್ನೆ. ಹೀಗಾಗಿ ನಾಳೆ ಬಿಜೆಪಿ ಮುಂದುವರೆದರೂ ಅದು ವಿದೇಶಿ ಮಾನಸಿಕತೆಗೆ ಪಕ್ಕಾಗಿರುವುದರಿಂದ ನೀತಿನಿರ್ಣಯ(ಪಾಲಿಸಿ)ದ ವಿಷಯದಲ್ಲಿ ಅದು ಕಾಂಗ್ರೆಸ್‌ಗಿಂತ ಬೇರೆ ಏನೂ ಅಲ್ಲ. ಹೀಗಾಗಿ ಈಗಿನ ಬಿಜೆಪಿ ಕಾಂಗ್ರೆಸ್ ಮುಕ್ತ ಭಾರತ ಮಾಡುವುದೆಂದರೆ ತನ್ನ ವಿದೇಶಿ ಮನೋಭಾವದ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವುದೇ ಆಗಿದೆ. ಅದಕ್ಕೆ ನಾನು ಅನೇಕ ಕಡೆ ಇದು ಯುಪಿಎ– ೩ ಅಥವಾ ಎನ್‌ಡಿಎ– ೨ ಅಂತ ಹೇಳ್ತಾ ಇರೋದು.



**–ಡಾ. ಜಿ.ಬಿ. ಹರೀಶ್,** ಸಾಹಿತ್ಯ ವಿಮರ್ಶಕ ಹಾಗೂ ರಾಜಕೀಯ ಚಿಂತಕ, **ಬೆಂಗಳೂರು**

## ಅವರ ಭರವಸೆಗಳ ಭಾರಕ್ಕೇ ಅದು ಕುಸಿದಿದೆ!

೧. ಪ್ರಮುಖವಾಗಿ ಇದ್ದ ಆತಂಕಗಳು: ಸಂಸದೀಯ ಪ್ರಜಾಪ್ರಭುತ್ವವನ್ನು ಗೌಣವಾಗಿಸುವ ಕೃತ್ಯಗಳು, ಉಲ್ಬಣಗೊಳ್ಳುವ ಕೋಮು ಗಲಭೆಗಳು, ಉದ್ಯಮಿ ಮತ್ತು ಶ್ರೀಮಂತವರ್ಗಕ್ಕೆ ಹೆಚ್ಚುವ ಅಕ್ರಮ ನೆರವುಗಳು, ಸಾಮಾಜಿಕ ನ್ಯಾಯದ ಕಡೆಗಣನೆ, ಸದೃಢ ಮತ್ತು ಸುಸ್ಥಿರ ದೇಶಕ್ಕಿಂತ ಮಿಲಿಟರಿ ವಿಚಾರವಾಗಿ ಮಾತ್ರ ಬಲಾಢ್ಯವಾಗಿರುವ ಯುದ್ಧದಾಹಿ ದೇಶ, ಇತ್ಯಾದಿ. ಆದರೆ ಈ ದೇಶದ ಸೌಂದರ್ಯ ಮತ್ತು ಅದೃಷ್ಟವೆಂಬಂತೆ ಪ್ರತಿ ಆರೇಳು ತಿಂಗಳಿಗೆ ಅಥವ ವರ್ಷಕ್ಕೊಮ್ಮೆಯಾದರೂ ಬರುವ ಬೇರೆ ಬೇರೆ ರಾಜ್ಯಗಳ ಚುನಾವಣೆಗಳಿಂದಾಗಿ ಮತ್ತು ರಾಜ್ಯಸಭೆಯಲ್ಲಿ ಅವರ ಪಕ್ಷಕ್ಕೆ ಬಹುಮತ ಇಲ್ಲದ ಕಾರಣಕ್ಕೆ ಮೋದಿಗೆ ಬಹಳ ಇಷ್ಟವಿದ್ದರೂ ಅವರಿಂದ ಸಾಂಸ್ಥಿಕವಾಗಿ ಈ ದೇಶದ ಪ್ರಜಾಸತ್ತೆಯ ಚೌಕಟ್ಟನ್ನು ನಾಶ ಮಾಡಲು ಸಾಧ್ಯವಾಗುತ್ತಿಲ್ಲ. ಬಲಿಷ್ಠವಾದ ಸಂವಿಧಾನ ಮತ್ತು ರಾಜ್ಯಗಳ ಸಾರ್ವಭೌಮತೆಯಿಂದಾಗಿ ಮತ್ತು ಈಗಲೂ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬಲಗೊಳ್ಳುತ್ತಲೇ ಇರುವ ಪ್ರಾದೇಶಿಕ ಪಕ್ಷಗಳಿಂದಾಗಿ ಮೋದಿ ಮತ್ತವರ ಪರಿವಾರದ ಹಲವು ಅಭೀಪ್ಸೆಗಳು ಈಡೇರುತ್ತಿಲ್ಲ. ಮೋದಿ ಈ ದೇಶಕ್ಕೆ ಉತ್ತಮ ಮತ್ತು ಹೆಮ್ಮೆಯ ಪರಿಹಾರ ಎನ್ನುವ ಮೂಢಭಕ್ತಿಯನ್ನು ಸಾರಾಸಗಟಾಗಿ ನಿರಾಕರಿಸುತ್ತಲೇ, ಮೋದಿಯನ್ನೂ ಸಹ ಈ ದೇಶ ಬಗ್ಗಿಸುತ್ತದೆ ಮತ್ತು ಬದಲಾಯಿಸುತ್ತದೆ ಎನ್ನುವ ಆಶಾವಾದ ನನ್ನಲ್ಲಿ ಇತ್ತೀಚೆಗೆ ಹೆಚ್ಚಾಗಿದೆ.

೨. ಅಂತಾರಾಷ್ಟ್ರೀಯವಾಗಿ ದೇಶದ ವರ್ಚಸ್ಸು ಹೆಚ್ಚಿದೆ ಎನ್ನಿಸುತ್ತದೆ. ಹಿಂದಿನ ಸರ್ಕಾರಕ್ಕೆ ಹೋಲಿಸಿದರೆ, ಒಬ್ಬ ವ್ಯಕ್ತಿ ಅಥವ ಪಕ್ಷವನ್ನು ಸರಿತಪ್ಪುಗಳಿಗೆ ಹೊಣೆ ಮಾಡುವ ಉತ್ತರದಾಯಿತ್ವ ಈಗ ಇದೆ. ಜನಸಾಮಾನ್ಯರ ಜೀವನದಲ್ಲಿ ಕೇಂದ್ರ ಸರ್ಕಾರದ ಅಸ್ತಿತ್ವ ಹಿಂದಿನ ಸರ್ಕಾರಗಳಿಗೆ ಹೋಲಿಸಿದರೆ ಹೆಚ್ಚು ಕಾಣಿಸಿಕೊಳ್ಳುತ್ತಿದೆ. ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರದ ಪ್ರಕರಣಗಳು ಆಗಾಗ ವರದಿಯಾದರೂ, ದೊಡ್ಡ ಮಟ್ಟದ ಹಗರಣಗಳು ಇಲ್ಲಿಯವರೆಗೂ ಆಗದಿರುವುದರಿಂದ ಅಥವ ಬಯಲಾಗದೇ ಇರುವುದರಿಂದ ಭ್ರಷ್ಟಾಚಾರ ಹತೋಟಿಯಲ್ಲಿದೆ ಎಂಬ ಭಾವನೆ ಜನರಿಗಿದೆ. ಮೋದಿ ಒಬ್ಬ ಭಾಷಣ ಪ್ರವೀಣ ಎಂದು ಜನರಿಗೆ ಅನ್ನಿಸಿದರೂ ಅವರೊಬ್ಬ ಕ್ರಿಯಾಶೀಲ ವ್ಯಕ್ತಿ ಎಂಬ ಭಾವನೆಯೂ ಬಹುಸಂಖ್ಯಾತರಲ್ಲಿದೆ. ಆದರೆ ಇದೇ ಮಾತನ್ನು ಸರ್ಕಾರದ ಎಲ್ಲಾ ಮಂತ್ರಿಗಳಿಗೂ ಹೇಳಲಾಗುವುದಿಲ್ಲ. ಒಟ್ಟಾರೆಯಾಗಿ ತಾನು ಚುನಾವಣಾಪೂರ್ವದಲ್ಲಿ ಹುಟ್ಟಿಸಿದ್ದ ಭರವಸೆಗಳನ್ನು ಆ ವೇಗದಲ್ಲಿ ಈಡೇರಿಸಲಾಗುತ್ತಿಲ್ಲವಾದ್ದರಿಂದ ಅವರ ಭರವಸೆಗಳ ಭಾರಕ್ಕೇ ಅದು ಕುಸಿದಿದೆ ಎಂದು ಹೇಳಬಹುದು.

೩. ಆ ಘೋಷಣೆ ಒಂದು ಪಕ್ಷದ ನಾಯಕ ತನ್ನ ಪಕ್ಷವನ್ನು ಬೆಳೆಸುವ ನಿಟ್ಟಿನಲ್ಲಿ ಉತ್ತಮ ತಂತ್ರಗಾರಿಕೆಯ ಮತ್ತು ಮಹತ್ವಾಕಾಂಕ್ಷೆಯೆಂದು ಹೇಳಬಹುದಾದ ಘೋಷಣೆ ಎನ್ನಬೇಕಾಗುತ್ತದೆ. ಬಿಜೆಪಿಯೇ ಆಗಲಿ ಅಥವ ಇನ್ಯಾವುದೇ ಕಾಂಗ್ರೆಸ್ ವಿರೋಧಿ ಪಕ್ಷವಾಗಲಿ ಅಂತಹ ಘೋಷಣೆ ಮಾಡುವುದು ಮತ್ತು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದನ್ನು ಅವರ ಜವಾಬ್ದಾರಿ ಮತ್ತು ಕರ್ತವ್ಯದ ದೃಷ್ಟಿಯಿಂದ ಹೇಳುವುದಾದರೆ ತಪ್ಪು ಎನ್ನಲಾಗದು. ದೀರ್ಘಕಾಲ ಕೇಂದ್ರದಲ್ಲಿ ಸರ್ಕಾರ ನಡೆಸುವ ಬಿಜೆಪಿಯ ಆಕಾಂಕ್ಷೆಗೆ ಪೂರಕವಾಗಿ ಆ ಘೋಷಣೆ ಇದೆ. ಆದರೆ ಅದನ್ನು ಬಿಜೆಪಿಯಿಂದ ಮಾಡಲು ಸಾಧ್ಯವಾಗುತ್ತದೆ ಅಥವ ಇಲ್ಲ ಎನ್ನುವುದು ಆ ಪಕ್ಷಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಮೇಲೆಯೇ ಅವಲಂಬಿತವಾಗಿದೆ. ಕಾಂಗ್ರೆಸ್ ಪಕ್ಷವೇ ಒಂದು ರೀತಿಯಲ್ಲಿ ಆ ಘೋಷಣೆಯ ಸಾಕಾರಕ್ಕೆ ಬೆಂಬಲ ನೀಡುತ್ತಿದೆ ಎನ್ನುವಂತಿದೆ ಅದರ ಕಳೆದ ಎರಡು-ಮೂರು ವರ್ಷಗಳ ಆತ್ಮಹತ್ಯಾತ್ಮಕ ನಡವಳಿಕೆಗಳು. ಆದರೆ ಈ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಪ್ರಬಲವಾಗುತ್ತಿರುವ ಪ್ರಾದೇಶಿಕ ಪಕ್ಷಗಳು ಕಾಂಗ್ರೆಸ್ ಸ್ಥಾನವನ್ನು ಕಾಲಕ್ರಮೇಣ ತುಂಬುತ್ತವೆ ಅಥವ ಕಾಂಗ್ರೆಸ್‌ನಲ್ಲಿಯೂ ಕೆಲವು ಪವಾಡಗಳು ನಡೆದು ಅದೂ ಮತ್ತೆ ಪ್ರಚಲಿತವೂ ಆಗಬಹುದು. ಆದರೆ ಇಡೀ ದೇಶವೆಂದರೆ ಬಿಜೆಪಿ ಎನ್ನುವ ವಾತಾವರಣ ನಮ್ಮಲ್ಲಿಯ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಾ ವೈವಿಧ್ಯತೆಯಿಂದಾಗಿ ಎಂದೂ ಸೃಷ್ಟಿಯಾಗುವ ಸಾಧ್ಯತೆಗಳಿಲ್ಲ.



**-ರವಿ ಕೃಷ್ಣಾರೆಡ್ಡಿ,** *ಆಮ್ ಆದ್ಮಿ ಪಕ್ಷದ* ಮುಖಂಡರು, **ಬೆಂಗಳೂರು**

## ಅಲ್ಲ ಅನ್ನುವರು ದೇಶ ವಿರೋಧಿಗಳಾಗಿ ಬಿಡುತ್ತಾರೆ!

೧. ಮೋದಿ ಅಥವಾ ಬಿಜೆಪಿಯ ಜನರ ಬಗ್ಗೆ ನನಗೆ ಯಾವಾಗಲೂ ಇರುವ ಗಾಬರಿ ಎಂದರೆ ಚುನಾವಣೆ ಹತ್ತಿರ ಬಂದಾಗ ಅವರು ಗಲಾಟೆಗೆ ಹಚ್ಚಿ ಬಿಡುತ್ತಾರೆ. ಅದು ಜನರನ್ನು ಪರಸ್ಪರ ದೂರ ಮಾಡುತ್ತಾ ಹೋಗುತ್ತದೆ. ಸಂಬಂಧಗಳೇ ಬದಲಾಗಿಬಿಡುತ್ತದೆ. ಗುಜರಾತಿನಲ್ಲಿ ಎರಡೇ ತಿಂಗಳಿನಲ್ಲಿ ಹಿಂದು ಮುಸ್ಲಿಂರ ನಡುವಿನ ಕಂದರ ಜಾಸ್ತಿಯಾಗಿಬಿಟ್ಟಿತು. ಅಲ್ಪಸಂಖ್ಯಾತರು ಹೆದರಿಕೆಯಿಂದ ತಗ್ಗಿ ಬಗ್ಗಿ ನಡೆಯಬೇಕಾದ ಪರಿಸ್ಥಿತಿ. ಎರಡನೆಯದು ಅವರು ಸಾಮಾನ್ಯ ಜನರ ಕಷ್ಟಸುಖಗಳ ಬಗ್ಗೆ ಯೋಚಿಸುವ ಜನ ಅಲ್ಲ. ಅಂಬೇಡ್ಕರ್, ದಲಿತರ ಬಗ್ಗೆ ಅವರು ಆಡುವ ಮಾತುಗಳಿಗೆ ಬೆಲೆ ಕೊಡಬೇಕಾಗಿಲ್ಲ. ಸ್ಮೃತಿ ಇರಾನಿಯಂತಹವರು ಇಡೀ ಸದನವನ್ನೇ ಕುಬ್ಜಗೊಳಿಸಿದ್ದಾರೆ. ಇವರು ಕೊಡುವವರು ಅವರು ಪಡೆದುಕೊಳ್ಳುವರು ಆಗಿಬಿಡುತ್ತಾರೆ. ಹಾಗಾಗಿ 'ಅಂತ್ಯಜರಿಗೆ' ನಿಜವಾಗಿ ಸಲ್ಲಬೇಕಾದ ಬೆಂಬಲವೂ ಹೊರೆಯಾಗಿ ಕಾಣಿಸತೊಡಗುತ್ತದೆ. ಶಿಕ್ಷಣ, ಆರೋಗ್ಯ ಇವಕ್ಕೆ ನೀಡುವ ನೆರವು ಅಥವಾ ಇತರ ಸಬ್ಸಿಡಿಗಳು ಇವೆಲ್ಲಾ ಅರ್ಥಿಕತೆಗೆ ಸಂಬಂಧಿಸಿದ ಅಪರಾಧವಾಗಿ ಕಾಣಿಸತೊಡಗುತ್ತವೆ. ಸೈದ್ಧಾಂತಿಕ ಹಸ್ತಕ್ಷೇಪದಿಂದ ಎಲ್ಲಾ ಸಂಸ್ಥೆಗಳು ಸ್ವಾಯತ್ತತೆಯನ್ನು ಕಳೆದುಕೊಂಡುಬಿಡುತ್ತವೆ. ಜೊತೆಗೆ ಧರ್ಮ, ರಾಷ್ಟ್ರೀಯತೆ ಇತ್ಯಾದಿ ಪರಿಕಲ್ಪನೆಗಳೆಲ್ಲಾ ಭಾವನಾತ್ಮಕ ನೆಲೆಯಲ್ಲಿ ಚರ್ಚೆಯಾಗಿ ಸಂವಾದಕ್ಕೆ ಅವಕಾಶವೇ ಇಲ್ಲವಾಗಿಬಿಡುತ್ತದೆ. ಅಲ್ಲ ಅನ್ನುವರು ದೇಶ ವಿರೋಧಿಗಳಾಗಿ ಬಿಡುತ್ತಾರೆ. ಇದನ್ನು ವಿರೋಧಿಸಿ ನಿಲ್ಲಬಲ್ಲ ಪ್ರಬಲ ಪರ್ಯಾಯ ಸಂಘಟನೆ ಇಲ್ಲದೇ ಹೋದಾಗ ಸಮಸ್ಯೆ ಬೃಹತ್ತಾಗಿ ಕಾಣುತ್ತದೆ. ಮೋದಿ ಬಣ ಮುಂಚೂಣಿಗೆ ಬಂದಿರುವುದೇ ಇಂತಹ ಶಕ್ತಿ ಸ್ರೋತು ದುರ್ಬಲವಾಗಿರುವುದರಿಂದ. ಮೋದಿಯವರಿಗೆ ಯಾರ ಬಗ್ಗೆಯೂ ಗೌರವವಿದೆ ಅನ್ನಿಸುವುದೇ ಇಲ್ಲ. ಉಳಿದವರೆಲ್ಲಾ ಅವರ ಪಕ್ಷದಲ್ಲೇ ನಗಣ್ಯರಾಗಿಬಿಡುತ್ತಾರೆ. ಈ ಎಲ್ಲಾ ನನ್ನ ಅನುಮಾನಗಳು ಕಾಲ ಕಳೆದಂತೆ ಸತ್ಯ ಅನ್ನಿಸತೊಡಗಿವೆ.

೨. ಮೋದಿಯವರು ಅದರಲ್ಲೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಏನಾದರೂ ಸಾಧಿಸಿದ್ದಾರೆ ಅನ್ನಿಸುವುದಿಲ್ಲ. ಹಲವು ರಂಗಗಳಲ್ಲಿ ಇಂದಿನ ಬಿಜೆಪಿ ಕಾಂಗ್ರೆಸ್ಸಿಗಿಂತ ಭಿನ್ನವಾಗಿಲ್ಲ. ಅದು ಕಾಂಗ್ರೆಸ್ + ಹಸು ಅನ್ನುವುದು ಬಹುಮಟ್ಟಿಗೆ ನಿಜ. ಹಿಂದೆ ವಿರೋಧ ಪಕ್ಷದಲ್ಲಿ ಇದ್ದಾಗ ಖಂಡಿಸಿದ್ದನ್ನು ಈಗ ಇವರೇ ಹೆಚ್ಚಿನ ಉತ್ಸಾಹದಿಂದ, ಹೆಚ್ಚು ಬಲವಂತವಾಗಿ ಜಾರಿಗೆ ತರುತ್ತಿದ್ದಾರೆ. ಸಣ್ಣ ಉದಾಹರಣೆ ಅಂದರೆ ಆಧಾರ್ ಕಾರ್ಡ್ ಬಗ್ಗೆ ಅವರು ಆಗ ಮಾಡಿದ ಮತ್ತು ಈಗ ಮಾಡುತ್ತಿರುವ ಗದ್ದಲ.

೩. ಕಾಂಗ್ರೆಸ್ ಮುಕ್ತ ಭಾರತ ಒಂದು ಸೊಗಸಾದ ರಾಜಕೀಯ ಸ್ಲೋಗನ್. ಆದರೆ ಈಗಾಗಲೇ ಕಾಂಗ್ರೆಸ್ ಮಹತ್ವ ಕಳೆದುಕೊಂಡು ಬಿಟ್ಟಿದೆಯಲ್ಲಾ?



**-ಟಿ.ಎಸ್.ವೇಣುಗೋಪಾಲ್,** ನಿವೃತ್ತ ಅಧ್ಯಾಪಕ ಹಾಗೂ ಲೇಖಕ, **ಮೈಸೂರು**

## ಅದೇನು, ಇದೇನು ಎಲ್ಲವು ಒಂದೇ!

ನಿರಾಶೆಯಿಂದಲೇ ಉತ್ತರಿಸಬೇಕಾದ ಪ್ರಶ್ನೆಗಳಿವು. ನಿರಾಶೆಯ ವಾತಾವರಣದಲ್ಲಿ ನಿರಾಶೆಯನ್ನೇ ಮತ್ತೆ ಮತ್ತೆ ನೆನೆಯುವುದು ಬೇಡ ಅನಿಸುತ್ತಿದೆ.

ಪ್ರಜೆಗಳು ಲೆಕ್ಕಕ್ಕೆ ಇಲ್ಲದ, ಪಕ್ಷ ಮೋಹದ ಹಣದಾಹದ ರಾಜಕೀಯವೇ ಸುತ್ತ ಕಾಣುತ್ತಿರುವಾಗ. ಅದೇನು ಇದೇನು ಎಲ್ಲವು ಒಂದೇ ಪಕ್ಷಗಳು ಅನಿಸುತ್ತಿದೆ. ಯಾವ ಹುಸಿ ಘೋಷಣೆಯ ಅಬ್ಬರವಿಲ್ಲದೇ ಒಂದಲ್ಲ ಒಂದು ದಿನ ಒಳ್ಳೆಯ ಕಾಲ ಬಂದೀತು ಎಂಬ ನಿರಂತರ ಪ್ರತೀಕ್ಷೆ ಮಾತ್ರ ಮನಸ್ಸಿಗೆ ಒಂಚೂರು ಧೈರ್ಯ ಕೊಡುತ್ತದೆ.



**-ವೈದೇಹಿ,** ಹಿರಿಯ ಲೇಖಕಿ ಮತ್ತು ಚಿಂತಕಿ, **ಮಣಿಪಾಲ**

## ಸಾಧನೆ ಎಂದರೆ ವಿದೇಶಾಂಗ ವ್ಯವಹಾರದ ಕಣ್ಕಟ್ಟು!

೧. ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷ ಇನ್ನೂ ಇನ್ನೂ ದುರ್ಬಲಗೊಳ್ಳುತ್ತ ಹೋಗುತ್ತದೆ, ಬಿಜೆಪಿಯ ಬಲ ಹೆಚ್ಚುತ್ತ ಹೋಗುತ್ತದೆ ಅನ್ನುವ ಆತಂಕವೇನೂ ಕಮ್ಮಿಯಾಗಿಲ್ಲ. ಒಂದು ವೇಳೆ, ಆ ಮಟ್ಟದಲ್ಲಿ, ಬಿಜೆಪಿಗೆ ಸವಾಲೊಡ್ಡಬಲ್ಲ ತೃತೀಯರಂಗವೊಂದು ಮೈದಾಳಿದರೂ, ಅದು, ಎಂದಿನಂತೆಯೆ, ಒಗ್ಗಟ್ಟಾಗಿ ನಿಲ್ಲುತ್ತದೆ ಅನ್ನುವ ಭರವಸೆ ಇಲ್ಲ. ಇನ್ನೊಂದೆಡೆ, ನಮ್ಮ ಎಡಪಕ್ಷಗಳು ಚೇತರಿಸಿಕೊಳ್ಳಬೇಕಾದರೆ, ಅವುಗಳ ಮುಂದಾಳುಗಳಲ್ಲಿ ಅಗಾಧವಾದ ಕೆಚ್ಚು, ಚೈತನ್ಯ ಮತ್ತು ಮುನ್ನೋಟ ಇರಬೇಕಾಗುತ್ತದೆ. ಈ ಸದ್ಯಕ್ಕಂತೂ, ಅವರಲ್ಲಿ ಅಂಥದು ಯಾವುದೂ ಇರುವಂತೆ ಕಾಣುತ್ತಿಲ್ಲ. ಇನ್ನು, ಒಬ್ಬ ವ್ಯಕ್ತಿಯಾಗಿ, ನರೇಂದ್ರ ಮೋದಿ ಹೇರಳ ಚೈತನ್ಯ, ಚಟುವಟಿಕೆ ಹಾಗೂ ಸಂಕಲ್ಪಬಲವುಳ್ಳ ಮನುಷ್ಯ; ಆಕಾಶಕ್ಕೆ ನಿಚ್ಚಣಿಕೆ ಹಾಕುತ್ತೇನೆ ಎಂದು ಎಲ್ಲೆಯಿಲ್ಲದ ಆತ್ಮವಿಶ್ವಾಸದ ಅಭಿನಯವಿರುವ ದೊಡ್ಡಗಂಟಲಲ್ಲಿ ಹೇಳುತ್ತಾ, ಹಾಗೆ ಹೇಳಿದ್ದರ ಬಹುಪಾಲನ್ನು ಸಾಧಿಸದೇ ಹೋದರೂ, ತನ್ನೊಳಮನಸ್ಸಿನಲ್ಲಿ ತಾನಂದುಕೊಂಡಿರುವಂಥದನ್ನಂತೂ ಸಾಕಷ್ಟು ಮಟ್ಟಿಗೆ ಸಾಧಿಸಬಲ್ಲವರು. ನಮ್ಮ ಮಧ್ಯಮ ಮತ್ತು ಮೇಲುವರ್ಗಗಳ ಹಲವು ಸ್ತರದ ಬಹುಪಾಲು ಜನರು ಮಾರುಹೋಗುವುದು ಆತನ ಆ ದೊಡ್ಡಗಂಟಲಿಗೆ, ಆತ ಸೂಸುವ ಆ ಆತ್ಮವಿಶ್ವಾಸಕ್ಕೆ. ಆತ ಮಾಡುತ್ತಿರುವ ಯಾವುದೇ ಕೆಲಸದಿಂದ ಆ ವರ್ಗಗಳವರಿಗಂತೂ (ಮತ್ತು ಸದ್ಯಕ್ಕಂತೂ) ಹೆಚ್ಚಿನ ಆಪತ್ತೇನೂ ಇಲ್ಲ; ಬದಲಿಗೆ, ಲಾಭವೇ ಹೆಚ್ಚು. ಹಾಗಾಗಿ, ಇನ್ನು ಹಲಕೆಲವು ವರ್ಷಗಳ ಕಾಲ ಬಿಜೆಪಿ ಬಲಗೊಳ್ಳುತ್ತಲೇಹೋಗುತ್ತದೆ.

೨. ಮೋದಿ ಸರಕಾರದ ಸಾಧನೆ ಅನ್ನಬಹುದಾದ್ದೇನಾದರೂ ಇದ್ದರೆ, ಅದು ವಿದೇಶಾಂಗ ವ್ಯವಹಾರದ ಕಣ್ಕಟ್ಟು ಎಂಬಲ್ಲಿ, ಅಷ್ಟೆ. ಒಂದು ಕಡೆ ಸೌದಿ ಅರೇಬಿಯಾ, ಮತ್ತೊಂದು ಕಡೆ ಇರಾನ್, ಮಗದೊಂದು ಕಡೆ ಅಮೆರಿಕಾ, ಹಾಗೂ ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ರಷ್ಯಾದಂಥ ಬಲಿಷ್ಠ ದೇಶಗಳು ಹಾಗೂ, ಮತ್ತೂ ಒಂದು ಕಡೆ, ಬಾಂಗ್ಲಾದೇಶ, ಆಫ್ಘಾನಿಸ್ತಾನದಂಥ ನಮ್ಮ ನೆರೆಹೊರೆಯ ದೇಶಗಳು – ಇವೆಲ್ಲವೂ ಈಗ ಇಂಡಿಯಾದತ್ತ ಹೆಚ್ಚು ಮರ್ಯಾದೆಯಿಂದ ನೋಡುತ್ತಿವೆ. ಅಂಥಲ್ಲಿ, ಮೋದಿ, ಮೇಲ್ನೋಟಕ್ಕಾದರೂ, ಒಳ್ಳೆಯ ಗಟ್ಟಿ ನಿಲುವಿನ ಕಾರ್ಕತ್‌ಗಾರರಂತೆ ಕಾಣುತ್ತಾರೆ. ಆದರೆ, ಇದರಿಂದೆಲ್ಲ ನಮ್ಮ ದೇಶಕ್ಕಾಗಲಿ, ಲೋಕಕ್ಕಾಗಲಿ ಒಳ್ಳೆಯದಾಗುತ್ತದೆ ಎಂದು ಹೇಳಲಾಗದು. ಅಮೆರಿಕೆಯಂಥ ದೇಶಗಳು ಮೋದಿಯ ಭಾರತವನ್ನು ಅಪ್ಪಿಕೊಳ್ಳುತ್ತಿರುವುದು ವ್ಯಾಪಾರ–ವ್ಯವಹಾರದಲ್ಲಿ ಲಾಭಗಳಿಸಲು, ಅಷ್ಟೆ. ತಾನೊಬ್ಬ ಜಗನ್ನೇತಾರನಾಗಿ ಕಾಣಿಸಿಕೊಳ್ಳಬೇಕು ಅನ್ನುವ ಹೇರಾಸೆ ಮೋದಿಯವರಿಗೂ ಇದೆ. ಅದಕ್ಕಾಗಿ ಆತ ಇಸ್ರಾಯಿಲನ್ನು ತೆಕ್ಕೈಸಿ, ಪಾಲಿಸ್ತೀನರಂಥವರ ಬವಣೆಗೆ ಕುರುಡಾಗಲು, ನಮ್ಮ ನೆರೆಯ ನೇಪಾಳದ ಜನರ ನಂಬುಗೆಯನ್ನು ಕಳೆದುಕೊಳ್ಳಲು ಹಿಂದೆಗೆಯುವುದಿಲ್ಲ.

೩. ನಮ್ಮ ಮಧ್ಯಮ ವರ್ಗದ ಜನರಲ್ಲಿ ಕಾಂಗ್ರೆಸ್ ವಿರೋಧೀ ಭಾವನೆಯೊಂದು ಹೇರಳವಾಗಿ ಮನೆಮಾಡಿಕೊಂಡಿದೆ; ಹಾಗೂ, ಈ ಸದ್ಯಕ್ಕಾದರೂ, ಸಾಕಷ್ಟು ಮಟ್ಟಿಗೆಯೆ, ನಮ್ಮ ಬಡವರು ಮತ್ತು ಕಾರ್ಮಿಕರಲ್ಲಿ ಕೂಡ ಇದೆ. ಕಾಂಗ್ರೆಸ್ ಮುಕ್ತ ಭಾರತ ಅನ್ನುವ ಕೂಗು ಅಂಥದಕ್ಕೆ ಕುಮ್ಮಕ್ಕು ನೀಡಿ, ಬಿಜೆಪಿಗೆ ಒಂದಷ್ಟಾದರೂ ಇಳುವರಿ ಕೊಡದಿರದು. ಹಾಗಾಗಬಾರದು ಎಂದರೆ ಕಾಂಗ್ರೆಸ್ ಪಕ್ಷವು, ಮೊತ್ತಮೊದಲು, ನೆಹರೂ–ಗಾಂಧಿ ಕುಟುಂಬದಿಂದ ಮುಕ್ತವಾಗಿ, ಮುಡಿಯಿಂದ ಅಡಿವರೆಗೆ ಬದಲಾಗಬೇಕು; ಮತ್ತು, ಎಡಪಕ್ಷಗಳು ಹಾಗೂ ನಿಜವಾದ ಸಮಾಜವಾದೀ ಧಾರೆಗಳ ಜೊತೆ ಹಲವು ರೀತಿಯ, ಪರಸ್ಪರ ಲಾಭದಾಯಕವಾದ, ಕಟ್ಟುನಿಟ್ಟು ಹೊಂದಾಣಿಕೆ ಮಾಡಿಕೊಂಡು, ಅದರಂತೆ ನಡೆಯಬೇಕು – ಅಧಿಕಾರದಲ್ಲಿರುವಾಗಲೂ ಇಲ್ಲದಿರುವಾಗಲೂ. ಅಂದರೆ, ಹೆಸರಿಗಷ್ಟೆ ಮಧ್ಯಸ್ಥ–ಸೆಂಟ್ರಿಸ್ಟ್ ಪಕ್ಷವಾಗಿದ್ದು, ಆರ್ಥಿಕನೀತಿಯಲ್ಲಿ ಮಾತ್ರ ಬಲಕ್ಕೆ ವಾಲುವುದನ್ನು ಬಿಟ್ಟುಕೊಟ್ಟು, ಹೆಚ್ಚುಹೆಚ್ಚಾಗಿ ಎಡಕ್ಕೆ, ಸಮಾಜವಾದದೆಡೆಗೆ ವಾಲಬೇಕು. ಆ ಪಕ್ಷ ಉಳಿದು, ಬೆಳೆಯಲು ಇರುವ ದಾರಿ ಅದೊಂದೇ. ಆದರೆ ಅದು ಆ ದಾರಿಯನ್ನು ಹಿಡಿಯುವುದು ಕನಸಿನ ಮಾತು, ಅಷ್ಟೆ!



–**ರಘುನಂದನ**, ಹಿರಿಯ ರಂಗಕರ್ಮಿ ಮತ್ತು ಸಂಸ್ಕೃತಿ ಚಿಂತಕರು, **ಬೆಂಗಳೂರು**

## ಅಭಿವೃದ್ಧಿಯೆಂಬ ಚಿನ್ನದ ಪಾತ್ರೆಯಲ್ಲಿ...

೧. ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು ಎಂಬುದಕ್ಕಿಂತ ಎನ್‌ಡಿಎ ಪಕ್ಷ ಅಧಿಕಾರ ವಹಿಸಿಕೊಂಡಿತೆಂಬ ಕಾರಣಕ್ಕಾಗಿ ಹೆಚ್ಚು ಆತಂಕಗಳುಂಟಾದವು. ಏಕೆಂದರೆ ವ್ಯಕ್ತಿಗಿಂತ ಪಕ್ಷ ಬಲವತ್ತರವಾಗಿ ಇರುತ್ತದೆಂಬ ಕಾರಣಕ್ಕಾಗಿ ಮೋದಿಯವರು ಆ ಪಕ್ಷದ ನಾಯಕರಾಗಿ ಆಯ್ಕೆಗೊಂಡು ಪ್ರಧಾನಿಯಾದರು. ಅವರು ನಾಯಕರಾಗಿ ಆಯ್ಕೆಗೊಳ್ಳುವುದಕ್ಕೆ ಅವರು ಪಕ್ಷದ ಸಿದ್ಧಾಂತಕ್ಕೆ ಹೆಚ್ಚು ಬದ್ಧರಾಗಿರುವ ವ್ಯಕ್ತಿ ಎಂಬ ಕಾರಣಕ್ಕೆ. ಆದರೆ ಯಾವುದೇ ಪಕ್ಷದ ಒಬ್ಬ ನಾಯಕ ಪ್ರಧಾನಮಂತ್ರಿತ್ವದ ಸ್ಥಾನವನ್ನು ಹೊಂದಿದ ಮೇಲೆ ತನ್ನಲ್ಲಿರುವ ವಿಚಾರಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ದೇಶದಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಪರಿಹಾರ ಮುಖ್ಯವಾದಾಗ ಅವನು ತನ್ನ ಮೂಲ ವಿಚಾರಗಳು ಎಷ್ಟೇ ಪ್ರತಿಗಾಮಿಯಾಗಿದ್ದರೂ ಪರಿಸ್ಥಿತಿಗೆ ತಕ್ಕಂತೆ ತನ್ನ ಆ ಹಳೆಯ ವಿಚಾರಗಳನ್ನು ತ್ಯಜಿಸಿ ಪುರೋಗಾಮಿ ವಿಚಾರಗಳಿಗೆ ಶರಣು ಹೋಗಬೇಕಾಗುತ್ತದೆ. ದೇಶದ ಪ್ರಧಾನಿ ತಾನೊಬ್ಬ ಖಾಸಗಿ ವ್ಯಕ್ತಿಯಾಗಿ ಉಳಿಯದೆ ಸಾರ್ವಜನಿಕ ವ್ಯಕ್ತಿಯಾಗಿ ರೂಪುಗೊಳ್ಳಬೇಕಾಗುತ್ತದೆ. ಪ್ರಧಾನಿಯಾದ ವ್ಯಕ್ತಿ ತನ್ನನ್ನು ಬದಲಾವಣೆಗೆ ತೆರೆದುಕೊಂಡಿರಬೇಕಾಗುತ್ತದೆ. ಇಲ್ಲವಾದರೆ ಅವನು ರಾಜಕೀಯ ಜನಪ್ರಿಯತೆ ಕಳೆದುಕೊಂಡು ತನ್ನ ಪ್ರಧಾನಿ ಸ್ಥಾನವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಆದರೆ ಅಧಿಕಾರದ ರುಚಿ ಕಂಡ ವ್ಯಕ್ತಿ ತನ್ನ ಅಧಿಕಾರ ಸ್ಥಾನವನ್ನು ಸುಲಭವಾಗಿ ಕಳೆದುಕೊಳ್ಳಲು ಇಷ್ಟ ಪಡುವುದಿಲ್ಲ. ಯಾವ ಜನಪ್ರಿಯ ಕಾರ್ಯಕ್ರಮ ಹಾಕಿಕೊಂಡರೆ ಅಧಿಕಾರ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆಂಬುದನ್ನು ಸದಾ ಆಲೋಚಿಸುತ್ತಿರುತ್ತಾನೆ. ಅದಕ್ಕೆ ಅನುಗುಣವಾಗಿ ತನ್ನ ಸರಕಾರದ ಕಾರ್ಯವೈಖರಿಯನ್ನು ರೂಪಿಸುತ್ತಾನೆ.

ಆದರೆ ಇದೇ ರೀತಿಯ ಅಭಿಪ್ರಾಯವನ್ನು ರಾಜಕೀಯ ಪಕ್ಷದ ಬಗ್ಗೆ ಹೇಳಲು ಸಾಧ್ಯವಿಲ್ಲ. ರಾಜಕೀಯ ಪಕ್ಷ ಹೆಚ್ಚಾಗಿ ತಾನು ಪ್ರತಿಪಾದಿಸುವ ಸಿದ್ಧಾಂತಗಳ ಜಾರಿಗೆ ಪ್ರಯತ್ನಿಸುತ್ತದೆಯೇ ಹೊರತು ಜನಸಾಮಾನ್ಯರ ಅನಿಸಿಕೆಗಳನ್ನು ಅಷ್ಟೊಂದಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದಲೇ ಮೋದಿಯವರು ಪ್ರಧಾನಮಂತ್ರಿಯಾದುದ್ದಕ್ಕಿಂತ ಎನ್‌ಡಿಎ ಅಧಿಕಾರಕ್ಕೆ ಬಂದುದ್ದಕ್ಕೆ ಹೆಚ್ಚು ಆತಂಕ, ಅನಿಶ್ಚಿತತೆಗಳು ಕಾಡತೊಡಗಿದವು. ಪ್ರಧಾನಮಂತ್ರಿಯವರ ಮೇಲೆ ಪಕ್ಷ ತನ್ನ ಹಿಡಿತವನ್ನು ಇಟ್ಟುಕೊಂಡಿರುತ್ತದೆ. ಆ ಹಿಡಿತ ಬಿಗಿಯಾಗಿರಬಹುದು, ಅಥವ ಸಡಿಲವಾಗಿರಬಹುದು. ಅಂತೂ ಪ್ರಧಾನಿಯ ಮೇಲೆ ಪಕ್ಷದ ಹಿಡಿತ ಇದ್ದೇ ಇರುತ್ತದೆ. ಪ್ರಧಾನಿಯಾದ ವ್ಯಕ್ತಿ ಎಷ್ಟೇ ಪ್ರಬಲ ವ್ಯಕ್ತಿತ್ವವುಳ್ಳವನಾಗಿದ್ದರೂ ತನ್ನನ್ನು ಎತ್ತಿಕಟ್ಟಿದ ಪಕ್ಷವನ್ನು ಅಸಡ್ಡೆ ಮಾಡುವುದಕ್ಕಾಗುವುದಿಲ್ಲ.

ಎನ್‌ಡಿಎ ಹೆಚ್ಚಾಗಿ ಬಲಪಂಥೀಯ ವಿಚಾರಗಳನ್ನು ಪ್ರತಿಪಾದಿಸುವುದರಿಂದ ದೇಶದಲ್ಲಿ ಈಗಾಗಲೆ ಪ್ರಚಲಿತವಿರುವ ಸಂವಿಧಾನದತ್ತ ಪುರೋಗಾಮಿ ವಿಚಾರಗಳಿಗೆ ಎಲ್ಲಿ ಧಕ್ಕೆ ಬರುತ್ತದೋ ಎಂಬ ಭೀತಿ ಸಹಜವಾಗಿಯೆ ಉಂಟಾಗಿತ್ತು. ಆದರೆ ಕಳೆದ ಎರಡು ವರ್ಷಗಳ ಅವಧಿಯನ್ನು ಪೂರೈಸಿದ ನರೇಂದ್ರಮೋದಿಯವರು ತಮ್ಮ ಕೆಲ ನೀತಿಗಳ ವಿರುದ್ಧ ಉಂಟಾಗುತ್ತಿರುವ ಜನಾಭಿಪ್ರಾಯ ಮತ್ತು ಮುಖ್ಯವಾಗಿ ಇತ್ತೀಚೆಗೆ ಅದಕ್ಕೆ ಪ್ರತಿಸ್ಪರ್ಧಿಯಾಗಿ ಹುಟ್ಟಿಕೊಂಡಿರುವ ಆಮ್ ಆದ್ಮಿ ಪಕ್ಷ ಇವುಗಳನ್ನು ಗಮನಿಸಿ ತಕ್ಕ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಿದ್ದಾರೆಂದು ಅನ್ನಿಸುತ್ತಿದೆ. ಆದರೂ ಆ ಮಾರ್ಪಾಡುಗಳು ಸತ್ಯವೇ, ಅಸತ್ಯವೇ ಎಂಬುದು ಗೊತ್ತಾಗುವುದಕ್ಕೆ ಇನ್ನು ಕೆಲವು ತಿಂಗಳು ಕಾದುನೋಡಬೇಕಿದೆ.

೨. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದರ ಸಾಧನೆಗಳನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಬಹುದಾಗಿದೆ. ೧) ಆಂತರಿಕ ಸಾಧನೆಗಳ ವಿಭಾಗ; ೨)ವಿದೇಶ ನೀತಿ. ಆಂತರಿಕ ಸಾಧನೆಗಳ ವಿಷಯದ ಬಗ್ಗೆ ಹೇಳುವುದಾದರೆ ಜನಧನ ಯೋಜನೆ, ರೈತರ ಬೆಳೆ ಹಾಗೂ ಅಭಯಾ ಜೀವವಿಮೆಗಳ ಯೋಜನೆ, ಮಣ್ಣು ಪರೀಕ್ಷಾ ಯೋಜನೆ, ಸ್ವಚ್ಛ ಭಾರತ ಅಭಿಯಾನ, ಹೆಣ್ಣುಮಗು ಉಳಿಸಿ ಮತ್ತು ಓದಿಸಿ –ಇವು ಮುಖ್ಯವಾದ ಸಾಧನೆಗಳೆಂದು ಅನಿಸುತ್ತಿದೆ. ಸರ್ಕಾರದ ಇತ್ತೀಚಿಗಿನ ಘೋಷಣೆಗಳ ಪ್ರಕಾರ ಈ ಯೋಜನೆಗಳ ಲಾಭಗಳು ಜನರನ್ನು ತಲುಪುತ್ತಿವೆಯೆಂದು ಅನಿಸುತ್ತಿದೆ. ಈ ಬಗ್ಗೆ ಪ್ರತ್ಯೇಕವಾದ ಸರ್ವೇಕ್ಷಣ ಮಾಡಿದರೆ ನಿಜಸಂಗತಿ ಗೊತ್ತಾಗುತ್ತದೆ. ಆದರೆ ಈ ಯೋಜನೆಗಳ ಪೂರ್ಣಲಾಭ

ಜನತೆಗೆ ದೊರೆಯಬೇಕಾದರೆ ಇನ್ನೂ ಬಹು ದೂರದ ದಾರಿ ಕ್ರಮಿಸಬೇಕಿದೆ.

ಇನ್ನು ವಿದೇಶಾಂಗ ನೀತಿ ಬಗ್ಗೆ ಹೇಳುವುದಾದರೆ ಈ ಮೊದಲಿನ ಎಲ್ಲ ಪ್ರಧಾನಮಂತ್ರಿಗಳಿಗಿಂತ ಮೋದಿಯವರು ವಿದೇಶದ ರಾಷ್ಟ್ರಗಳೊಂದಿಗೆ ಸ್ನೇಹ ವರ್ಧಿಸಿಕೊಂಡಿದ್ದಾರೆ. ಆದರೆ ಚೀನ ಮತ್ತು ಪಾಕಿಸ್ತಾನದೊಂದಿಗೆ ಮೈತ್ರಿ ಸಾಧಿಸಲು ವಿಫಲರಾಗಿದ್ದಾರೆ. ಅಮೇರಿಕಾದೊಂದಿಗಿನ ಅತಿ ಸ್ನೇಹ ದುಬಾರಿಯಾಗಬಹುದು.

ಮೋದಿ ಸರ್ಕಾರದ ಸಾಧನೆಗಳಲ್ಲಿ ದೇಶಕ್ಕೆ ಅಪಾಯವೊಡ್ಡುವ ಅನೇಕ ಸಾಧನೆಗಳಿವೆ ಎಂಬುದನ್ನು ಮರೆಯಲಿಕ್ಕಾಗುವುದಿಲ್ಲ. ಇಂಗ್ಲೀಷರು ಅನಧಿಕೃತವಾಗಿ ದೇಶದ ಸಂಪತ್ತನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ. ಇಂದು ನೂರಾರು ಬಹುರಾಷ್ಟ್ರೀಯ ಕಂಪನಿಗಳು ದೇಶದ ಪ್ರಾಕೃತಿಕ ಸಂಪತ್ತನ್ನು ಅಧಿಕೃತವಾಗಿ ಲೂಟಿ ಮಾಡುತ್ತಿವೆ. ಅಭಿವೃದ್ಧಿಯೆಂಬ ಚಿನ್ನದ ಪಾತ್ರೆಯಲ್ಲಿ ವಿನಾಶದ ಸತ್ಯಾಂಶಗಳು ಅಡಗಿವೆ ಎಂಬುದನ್ನು ಮೋದಿಯವರು ಎಷ್ಟು ಬೇಗನೆ ತಿಳಿಯುತ್ತಾರೋ ಅಷ್ಟು ಒಳ್ಳೆಯದು.

೩. 'ಕಾಂಗ್ರೆಸ್ ಮುಕ್ತ ಭಾರತ' ಎಂಬ ರಾಜಕೀಯ ಘೋಷಣೆಯನ್ನು ಸರ್ವಥಾ ಒಪ್ಪಲು ಸಾಧ್ಯವಿಲ್ಲ. ವಿರೋಧ ಪಕ್ಷ ಮುಕ್ತ ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವವೆಂದೆನ್ನಿಸಿಕೊಳ್ಳುವುದಿಲ್ಲ. ಬಲಿಷ್ಠ ಆಡಳಿತ ಪಕ್ಷವು ಬಲಿಷ್ಠ ವಿರೋಧ ಪಕ್ಷವನ್ನು ರೂಪಿಸಲು ಪ್ರಯತ್ನ ಮಾಡುವುದರಲ್ಲಿಯೇ ಪ್ರಜಾಪ್ರಭುತ್ವದ ಹಿರಿಮೆ ಮತ್ತು ಆಡಳಿತ ಪಕ್ಷದ ಗರಿಮೆ ಇವೆ. ಸೀಮಿತ ಶಬ್ದಗಳಲ್ಲಿ ನರೇಂದ್ರ ಮೋದಿ ಸರ್ಕಾರದ ಅಸೀಮಿತ ಅಡ್ಡಪರಿಣಾಮಗಳನ್ನು ಹೇಳುವುದು ಅಸಾಧ್ಯ.



**–ಸುರೇಂದ್ರ ಕೌಲಗಿ,** ಹಿರಿಯ ಗಾಂಧಿವಾದಿ ಮತ್ತು ಸರ್ವೋದಯ ಮುಖಂಡರು, **ಮೇಲುಕೋಟೆ**

## ಆತಂಕಗಳು ಹಿನ್ನೆಲೆಗೆ ಸರಿದಿವೆಯಾದರೂ...

೧. ಮೋದಿಯವರು ಅಧಿಕಾರ ವಹಿಸಿಕೊಂಡಾಗ ಸಹಜವಾಗಿ ಇದ್ದ ಆತಂಕಗಳೆಂದರೆ, ಬಹುದಿನಗಳಿಂದ ಪೋಷಿಸಿ, ಉಳಿಸಿಕೊಂಡು ಬಂದ ಬಹುಸಂಸ್ಕೃತಿಯ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ಬರಬಹುದೆಂಬುದು. ಏಕೆಂದರೆ ಮೋದಿ ಈ ಅಧಿಕಾರದ ಏಣಿ ಏರಲು ಒಂದು ದಶಕದಿಂದ ಮಾಡಿಕೊಂಡ ವ್ಯವಸ್ಥೆ, ಸಾಗಿದ ದಾರಿ ಈ ಗಾಬರಿಗೆ ಕಾರಣವಾಗಿತ್ತು. ಅಲ್ಲದೆ ಮೇಲ್ವರ್ಗಗಳ ಹಾಗೂ ಉದ್ಯಮ ವಲಯದ ನೇರ ಬೆಂಬಲದಿಂದ ಅಧಿಕಾರದ ಚುಕ್ಕಾಣಿ ಹಿಡಿದವರಿಂದ ಶ್ರೀ ಸಾಮಾನ್ಯನ ಹಿತರಕ್ಷಣೆ ಆಗುವುದೇ ಎಂಬ ಆತಂಕ ಮುಖ್ಯವಾಗಿತ್ತು. ಗುಜರಾತ್ ಮಾದರಿ (ಸರ್ವಾಧಿಕಾರಿ ಧೋರಣೆ) ರಾಷ್ಟ್ರಮಟ್ಟಕ್ಕೆ ವ್ಯಾಪಿಸುವ ಗುಮಾನಿ ಇತ್ತು.

ಈ ಆತಂಕಗಳು ಈಗಲೂ ಪೂರ್ಣದೂರವಾಗಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಹಿನ್ನೆಲೆಗೆ ಸರಿದಿವೆಯೆಂದು ಹೇಳಬಹುದು. ಸರ್ಕಾರದ ನೀತಿ ನಿರೂಪಣೆಯಲ್ಲಿ ಮಾತ್ರವಲ್ಲ, ಅಧಿಕಾರ ಕೇಂದ್ರಗಳಿಗೆ ಆರ್.ಎಸ್.ಎಸ್. ತನ್ನ ಸಿದ್ಧಾಂತದಲ್ಲಿ ನಂಬಿಕೆಯುಳ್ಳ ಕಟ್ಟರ್ ವ್ಯಕ್ತಿಗಳನ್ನೇ ನೇಮಿಸುವಂತೆ ನೋಡಿಕೊಳ್ಳುತ್ತದೆ ಎಂಬ ದೂರು ಎದ್ದು ಕಾಣುತ್ತದೆ. ತಮ್ಮ ಪರಿಕಲ್ಪನೆಗಳನ್ನು (ಪ್ರಣಾಳಿಕೆ ಆಚೆ) ಜನರ ಮೇಲೆ ಬಲವಂತವಾಗಿ ಹೇರುತ್ತಾ, ಒಪ್ಪದವರನ್ನು ದೇಶದ್ರೋಹಿಗಳೆಂದು ಬ್ರ್ಯಾಂಡ್ ಮಾಡುತ್ತಾ, ಎಗ್ಗಿಲ್ಲದೆ ಎರಗುವ ಸಹೋದ್ಯೋಗಿಗಳಿಗೆ ಕಡಿವಾಣ ಹಾಕದೇ ಬೇಕೆಂದೇ ಹರಿಬಿಟ್ಟಿದ್ದಾರೆಂಬ ಭಾವನೆ ಜನರಲ್ಲಿ ಆತಂಕ ಮೂಡಿಸಿದೆ. ಪ್ರಜಾಪ್ರಭುತ್ವದ ಮೂಲ ಆಶಯವಾದ ಸಹೋದ್ಯೋಗಿಗಳೊಂದಿಗೆ ಸಾಮೂಹಿಕ ಚರ್ಚೆ ಮೂಲಕ ತೀರ್ಮಾನಗಳನ್ನು ತೆಗೆದುಕೊಳ್ಳದೇ, ಪ್ರಮುಖ ನಿರ್ಧಾರಗಳನ್ನು ಏಕಾಂಗಿಯಾಗಿ ತೆಗೆದುಕೊಳ್ಳುತ್ತಿರುವುದು. ಅತ್ಯಲ್ಪ ಅವಧಿಯಲ್ಲಿ ೩೦ಕ್ಕೂ ಹೆಚ್ಚಿನ ದೇಶಗಳಿಗೆ ಭೇಟಿ ನೀಡಿದ್ದು, ಅದರಿಂದ ನಿರೀಕ್ಷಿತ ಫಲ ಸಿಗದೇ ಇದ್ದರೂ ಪ್ರಚಾರ ಮಾತ್ರ ಸಿಕ್ಕಿದೆ. ಜೊತೆಗೆ ಸಂಪುಟದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವರು ಇದ್ದಾರೋ ಇಲ್ಲವೋ ಎಂಬ ಅನುಮಾನವೂ ಸೃಷ್ಟಿಯಾಗಿದೆ!.

೨. ಸ್ಥಿರ ಸರ್ಕಾರ ಇರುವುದರಿಂದ ಆಡಳಿತದ ಮೇಲೆ ಬಿಗಿ ಹೆಚ್ಚಿ, ಸ್ವಯಂ ಮೋದಿಯವರೇ ಪಾದರಸದಂತೆ, ಕ್ರಿಯಾಶೀಲರಾಗಿ, ದಣಿವರಿಯದೆ ಕಾರ್ಯನಿರ್ವಹಿಸುತ್ತಿರುವುದು ಕೆಲವು ಸಹೋದ್ಯೋಗಿಗಳ ಮೇಲಾದರೂ ಪರಿಣಾಮ ಬೀರಿದೆ.

ಅಟಲ್ ಪಿಂಚಣಿ ಯೋಜನೆ, ಬೇಟಿ ಪಡಾವೋ ಬೇಟಿ ಬಚಾವೋ, ಉಜ್ವಲ್/ಪಹಲ್, ಮುದ್ರಾ ಬ್ಯಾಂಕ್, ಜನಧನ್, ರೈಲ್ವೇ ಇಲಾಖೆಯಲ್ಲಿ ಕೈಗೊಂಡ ಸುಧಾರಣ ಕ್ರಮಗಳು ಹೀಗೆ ಕೆಲವು ಜನೋಪಯೋಗಿ ಯೋಜನೆಗಳು ಪ್ರಾರಂಭವಾಗಿದ್ದು, ಸರಿಯಾದ ದಿಕ್ಕಿನಲ್ಲಿ ಸಾಗಿ ಗುರಿ ಸಾಧಿಸಬೇಕಿದೆ.

ಅರ್ಥವ್ಯವಸ್ಥೆ ಸುಧಾರಣೆಯತ್ತ ಸಾಗಿದ್ದು, ಮುಖ್ಯವಾಗಿ ದೇಶದ ಬೆನ್ನೆಲುಬಾದ ರೈತನ ಸಮಗ್ರ ಕಲ್ಯಾಣಕ್ಕಾಗಿ ನೀರಾವರಿ, ನದಿ ಜೋಡಣೆ, ಇಂಧನ ಉತ್ಪಾದನೆ ಕುರಿತು, ಸರಿಯಾದ ತೀರ್ಮಾನಗಳನ್ನು ತೆಗೆದುಕೊಂಡು ತ್ವರಿತಗತಿಯಲ್ಲಿ ಕಾರ್ಯಗತಗೊಳಿಸಲು ಇದು ಸಕಾಲ.

ಬಹು ಸಂಸ್ಕೃತಿಗಳ ಮೂಲ ಸೆಲೆಯಾದ ದೇಶಿ ಭಾಷೆಗಳ ಉಳಿವಿಗಾಗಿ ಎಲ್ಲರ ಸಹಮತ ಕ್ರೋಢೀಕರಿಸಿ ಸಂವಿಧಾನ ತಿದ್ದುಪಡಿ ತಂದು, ಈಗಿರುವ ಅಡಚಣೆಗಳನ್ನು ತೊಡೆದುಹಾಕಬೇಕು. ಹಾಗಾದರೆ ಮಾತ್ರ ಪ್ರಾಥಮಿಕ ಶಿಕ್ಷಣವನ್ನು ಪ್ರಾದೇಶಿಕ ಭಾಷೆಗಳಲ್ಲಿ ನೀಡಲು ಸಾಧ್ಯವಾಗುತ್ತದೆ.

ಎರಡು ವರ್ಷಗಳಲ್ಲಿ ಸಂಪುಟ ಸಹೋದ್ಯೋಗಿಗಳ ಮೇಲೆ ಗುರುತರವಾದ ಆರೋಪಗಳು/ಹಗರಣಗಳು ಇಲ್ಲದೇ ಇರುವುದು ಸಮಾಧಾನದ ಸಂಗತಿ.

೩. 'ಕಾಂಗ್ರೆಸ್ ಮುಕ್ತ ಭಾರತ' ಒಂದು ಅಪಾಯಕಾರಿ ಘೋಷಣೆ. ಏಕೆಂದರೆ ಪ್ರಜಾಪ್ರಭುತ್ವದ ತಿರುಳೇ ಒಂದು ಸಮರ್ಥ ವಿರೋಧ ಪಕ್ಷದ ಅಸ್ತಿತ್ವ. ಸಮರ್ಥ ವಿರೋಧ ಪಕ್ಷ ಇದ್ದರೇನೇ ಆಡಳಿತ ಎಚ್ಚರದಿಂದ ನಡೆಯುತ್ತದೆ. ಕಾಂಗ್ರೆಸ್ ಮುಗಿಸಲು ಮೋದಿ ಅವಶ್ಯಕತೆ ಇಲ್ಲ. ಕಾಂಗ್ರೆಸ್ ತನ್ನ ಅಸಮರ್ಥತೆ, ವಂಶ ಪಾರಂಪರ್ಯದ ಹಿಡಿತದಿಂದಲೇ ತನ್ನಷ್ಟಕ್ಕೆ ತಾನು ಕುಸಿದಿದೆ. ಆದರೆ ಕಾಂಗ್ರೆಸ್ ಒಂದು ಕುಟುಂಬದ ಮತ್ತು ವಂದಿ ಮಾಗಧರ ಹಿಡಿತದಲ್ಲಿದ್ದರೆ, ಬಿ.ಜೆ.ಪಿ. ಒಬ್ಬಿಬ್ಬರ ತೀರ್ಮಾನಗಳನ್ನು ಅವಲಂಬಿಸಿದೆ. ಸಾಮಾನ್ಯ ಜನರಿಗೆ ಈಗ ಬೇಕಾಗಿರುವುದು ಈ ಜಡ್ಡುಗಟ್ಟಿದ ವ್ಯವಸ್ಥೆಗೆ ಪರ್ಯಾಯ.

ಹಾಗಾಗಿ ಎಪ್ಪತ್ತರ ದಶಕದ ತುರ್ತುಪರಿಸ್ಥಿತಿಯ ನಂತರದ ಜನಾಂದೋಲನ, ಎಂಭತ್ತರ ದಶಕದಲ್ಲಿ ಅಸ್ಸಾಂನಲ್ಲಿ ನಡೆದ ವಿದ್ಯಾರ್ಥಿ ಚಳುವಳಿಯ ಪರಿಣಾಮ, ಇತ್ತೀಚಿನ ಎ.ಎ.ಪಿ. ಪಕ್ಷದ ರಾಜಕೀಯ ಹೊಸ ಪ್ರಯೋಗ ಮತ್ತು ಕಳೆದೊಂದು ದಶಕದಿಂದ ಬಿಹಾರ, ಪಶ್ಚಿಮ ಬಂಗಾಳ, ಒಡಿಸ್ಸಾ ರಾಜ್ಯಗಳಲ್ಲಿನ ವಿವಿಧ ಪಕ್ಷಗಳ ಸಕಾರಾತ್ಮಕ ಆಡಳಿತವನ್ನು ಗಮನದಲ್ಲಿಟ್ಟುಕೊಂಡು ಪರ್ಯಾಯ ವ್ಯವಸ್ಥೆಯನ್ನು ಕಟ್ಟಿಕೊಂಡರೆ ಮಾತ್ರ 'ಕಾಂಗ್ರೆಸ್ ಮುಕ್ತ ಭಾರತ'ವಷ್ಟೇ ಅಲ್ಲ ಬಿ.ಜೆ.ಪಿ. ಮುಕ್ತ ಭಾರತವನ್ನು ಸಾಕಾರಗೊಳಿಸಬಹುದು.



– ಸಿ. **ಚನ್ನಬಸವಣ್ಣ,** ಹಿರಿಯ ಪುಸ್ತಕ ಪ್ರಕಾಶಕರು ಮತ್ತು ಸಮಾಜವಾದಿಗಳು, **ಬಳ್ಳಾರಿ**

## ಯಾವ ಆತಂಕಗಳೂ ದೂರವಾಗಿಲ್ಲ...

೧. ಮೋದಿಯವರ ಗುಜರಾತ್ ಆಡಳಿತ, ಗೋಧ್ರಾ ಹತ್ಯಾಕಾಂಡ ಇತ್ಯಾದಿಗಳನ್ನು ಅರಿತಿದ್ದ ನಮಗೆ ಈ ಎಲ್ಲಾ ಚಟುವಟಿಕೆಗಳಿಗೆ ರಾಷ್ಟ್ರೀಯ ಸ್ವರೂಪ ಬರಬಹುದೆಂದು ಆತಂಕ ಇತ್ತು. ಘರ್ ವಾಪಸಿ, ಲವ್ ಜಿಹಾದ್, ಗೋಮಾಂಸ ಭಕ್ಷಣಾ ವಿರೋಧಿ ಚಟುವಟಿಕೆಗಳನ್ನು ನೋಡಿದ ನಮಗೆ ಯಾವ ಆತಂಕಗಳೂ ದೂರವಾಗಿಲ್ಲ.

೨. ರಾಷ್ಟ್ರದೊಳಗೆ ಯಥಾಸ್ಥಿತಿ ವಾದ– ವಿಶೇಷವಾಗಿ ಉತ್ತರ ಪ್ರದೇಶದಲ್ಲಿ ಬಿಜೆಪಿಯ ಸಾಂಪ್ರದಾಯಿಕ ಚಟುವಟಿಕೆಗಳ ವಿಸ್ತರಣೆ, ಅಂತರರಾಷ್ಟ್ರೀಯ ಸಂಬಂಧದಲ್ಲಿ ಮೋದಿಯವರ ಹೆಜ್ಜೆಗಳನ್ನು ಇನ್ನೂ ಕಾದು ನೋಡಬೇಕು.

೩. 'ಕಾಂಗ್ರೆಸ್ ಮುಕ್ತ ಭಾರತ' ಎನ್ನುವುದು ಪ್ರಜಾಪ್ರಭುತ್ವದ ವಿರೋಧಿ ನಿಲುವು. ಸರ್ವಾಧಿಕಾರಿ ಮನೋಭಾವದ ಮುನ್ಸೂಚನೆ. ಮತದಾರರ ಅವಹೇಳನ. "ಕಾಂಗ್ರೆಸ್ ಮುಕ್ತ ಭಾರತ" ಎಂದು ಹೇಳಲು ಯಾರಿಗೂ ಹಕ್ಕಿಲ್ಲ. "ಬಿಜೆಪಿ ಮುಕ್ತ ಭಾರತ" ಎನ್ನುವವರಿಗೂ ಈ ಮಾತುಗಳು ಅನ್ವಯಿಸುತ್ತವೆ. ಮತದಾರರ ತೀರ್ಮಾನವೇ ಅಂತಿಮ.



**–ಪ್ರೊ. ಬಿ.ಎನ್. ಶ್ರೀರಾಮ,** ನಿವೃತ್ತ ಅಧ್ಯಾಪಕರು, ಪ್ರಕಾಶಕರು ಮತ್ತು ಸಮಾಜವಾದಿ ಚಿಂತಕರು, **ಮೈಸೂರು**

## ಪರಿಣಾಮಗಳು ಗೊತ್ತಾಗಲು ಕಾಲಾವಕಾಶ ಬೇಕಾಗಬಹುದು

೧. ೨೦೦೨ ರಲ್ಲಿ ಗುಜರಾತಿನಲ್ಲಿ ನಡೆದ ಭಯಾನಕ ಕೋಮು ಹಿಂಸಾಚಾರವನ್ನು ತಕ್ಷಣ ನಿಯಂತ್ರಿಸದೆ ಇದ್ದದ್ದು ಮೋದಿಯವರ ಆಡಳಿತದ ದೊಡ್ಡ ವೈಫಲ್ಯ. ಅದು ಅವರಿಗೆ ಅಂಟಿದ ದೊಡ್ಡ ಕಳಂಕವೂ ಹೌದು. ಆದರೆ ನಂತರದ ಹನ್ನೆರಡು ವರ್ಷಗಳಲ್ಲಿ ಅಲ್ಲಿ ಯಾವುದೇ ಕೋಮುಗಲಭೆ ನಡೆಯದಂತೆ ನೋಡಿಕೊಂಡದ್ದು ಕೂಡ ಗಮನಿಸಬೇಕಾದ ಅಂಶ. ಇದನ್ನೆಲ್ಲಾ ಗಮನಿಸಿರುವ ನನಗೆ ಮೋದಿಯವರು ನರಹಂತಕ, ಸರ್ವಾಧಿಕಾರಿ, ಫ್ಯಾಸಿಸ್ಟ್ ಎಂದು ಅನ್ನಿಸಿಲ್ಲ. ಆದ್ದರಿಂದ ಅವರು ದೇಶದ ಪ್ರಧಾನಿಯಾಗಿ ಚುನಾಯಿತರಾದಾಗ ನನ್ನನ್ನು ಯಾವ ಆತಂಕವೂ ಕಾಡಲಿಲ್ಲ.

೨. ಈ ಎರಡು ವರ್ಷಗಳಲ್ಲಿ ಮೋದಿಯವರ ಸರ್ಕಾರ ಹೇಳಿಕೊಳ್ಳುವಂತಹ ಯಾವುದೇ ದೊಡ್ಡ ಸಾಧನೆಯನ್ನು ಮಾಡಿಲ್ಲ. ರೈಲ್ವೆ, ಬಂದರು, ಹೆದ್ದಾರಿಗಳ ನಿರ್ಮಾಣ, ವ್ಯಾಪಾರೋದ್ಯಮ ಸ್ನೇಹಿ ಆಡಳಿತ ವ್ಯವಸ್ಥೆ, ಮುದ್ರಾ ಬ್ಯಾಂಕಿನ ಮೂಲಕ ಸಣ್ಣ ಉದ್ಯಮಗಳಿಗೆ ಬೆಂಬಲ ನೀಡುವುದು ಮುಂತಾದ ಕ್ರಮಗಳ ಪರಿಣಾಮಗಳು ಗೊತ್ತಾಗಲು ಹಲವು ವರ್ಷಗಳ ಕಾಲಾವಕಾಶ ಬೇಕಾಗಬಹುದು. ಅಷ್ಟರಲ್ಲಿ ಅವರ ಅಧಿಕಾರದ ಅವಧಿ ಮುಗಿಯಬಹುದು. ನೆರೆಯ ಬಾಂಗ್ಲಾದೇಶದೊಡನೆ ಆರು ದಶಕಗಳಿಂದ ನಡೆದು ಬಂದಿದ್ದ ಗಡಿವಿವಾದಕ್ಕೆ ಪರಿಹಾರ ಜಾರಿಯಾಗಿ ಎರಡು ದೇಶಗಳ ಬಾಂಧವ್ಯ ಬೆಳೆದು ಇಬ್ಬರಿಗೂ ಹೆಚ್ಚಿನ ಆರ್ಥಿಕ ಲಾಭ ಸಿಗುತ್ತಿರುವುದು ಈ ಸರ್ಕಾರದ ಒಳ್ಳೆಯ ಸಾಧನೆ. ರಿಸರ್ವ್ ಬ್ಯಾಂಕ್‌ನ ಕ್ರಮಗಳ ಸಹಾಯದಿಂದ ಹಣದುಬ್ಬರವನ್ನು ಹತೋಟಿಗೆ ತಂದಿರುವುದನ್ನು ಗಮನಿಸಬಹುದು.

೩. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬಹುಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ, ಹಿಂದೂ ಸಮಾಜಕ್ಕೆ ಹೆಚ್ಚಿನ ಅನ್ಯಾಯ ಮಾಡಿದೆ ಎಂಬುದು ಬಿಜೆಪಿ ಮತ್ತು ಸಂಘ ಪರಿವಾರ ಪ್ರಚುರಪಡಿಸುತ್ತಾ ಬಂದಿರುವ ಒಂದು ಆಪಾದನೆ. ಹಾಗೆಯೇ ಕಾಂಗ್ರೆಸ್‌ನವರು(ಮತ್ತು ಇತರ ಸೆಕ್ಯುಲರ್ ವಾದಿ ಪಕ್ಷಗಳು) ಬಿಜೆಪಿ ಮತ್ತು ಸಂಘ ಪರಿವಾರಗಳು ನಮ್ಮ ಸಂವಿಧಾನದಲ್ಲಿ ನಂಬಿಕೆ ಹೊಂದಿಲ್ಲದ ಸಂಘಟನೆಗಳು, ಅವರು ಅಧಿಕಾರಕ್ಕೆ ಬಂದರೆ ಈಗಿನ ಸಂವಿಧಾನದ ಬದಲು ಮನುಧರ್ಮ ಶಾಸ್ತ್ರದ ನಿಯಮಗಳು ಜಾರಿಗೆ ಬರುತ್ತವೆ ಎಂದು ಪ್ರಚಾರ ಮಾಡುತ್ತಾ ಬಂದಿದ್ದಾರೆ. ೧೯೯೬ರ ಚುನಾವಣೆಯಲ್ಲಿ ಬಿಜೆಪಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದು ಬಂದರೂ, ಅದನ್ನು ಕಾಂಗ್ರೆಸ್ ಮತ್ತು ಇತರ ಸೆಕ್ಯುಲರ್ ಪಕ್ಷಗಳು ಅಸ್ಪೃಶ್ಯ ಎಂದು ಕಂಡದ್ದರಿಂದ, ಅದು ರಚಿಸಿದ ಸರ್ಕಾರ ಹದಿಮೂರು ದಿನಗಳಲ್ಲೆ ಬಿದ್ದು ಹೋದ ವಿದ್ಯಮಾನ ನಡೆಯಿತು. ಹೀಗಾಗಿ ಈಗ ಕಾಂಗ್ರೆಸ್ಸು ಸಂಸತ್ತಿನಲ್ಲಿ ಅತಿ ಕಡಿಮೆ ಸಂಖ್ಯೆಯ ಸದಸ್ಯರನ್ನು ಹೊಂದಿದ್ದು, ವಿಧಾನ ಸಭಾ ಚುನಾವಣೆಗಳಲ್ಲಿ ಜನರ ಬೆಂಬಲ ಪಡೆಯುವಲ್ಲಿ ವಿಫಲವಾಗುತ್ತಿರುವ ಸಂದರ್ಭದಲ್ಲಿ ಬೆಜೆಪಿ 'ಕಾಂಗ್ರೆಸ್ ಮುಕ್ತ ಭಾರತ' ಬಗ್ಗೆ ಪ್ರಚಾರ ನಡೆಸುತ್ತಿರುವುದು ಆಶ್ಚರ್ಯವುಂಟುಮಾಡುವ ವಿದ್ಯಮಾನವಾಗಿ ಕಾಣುತ್ತಿಲ್ಲ. ೨೦೦೯ ರ ಚುನಾವಣೆಯಲ್ಲಿ ಬಿಜೆಪಿ ಎರಡನೆ ಬಾರಿಗೆ ಹೀನಾಯ ಸೋಲನ್ನು ಅನುಭವಿಸಿದಾಗ ಸೆಕ್ಯುಲರ್‌ವಾದಿಗಳು ಬಿಜೆಪಿ ಪರಿಣಾಮಕಾರಿ ನಾಯಕನಿಲ್ಲದೆ ಮೂಲೆಗುಂಪಾಗುತ್ತಿರುವ ಪಕ್ಷ ಎಂದು ಹೇಳುತ್ತಿದ್ದರು. ಈಗ ಕಾಂಗ್ರೆಸ್‌ನ ಸರದಿ. ಇದೆಲ್ಲಾ ಭಾರತದಂತಹ 'ಇನ್ನೂ ಒಂದು ರಾಷ್ಟ್ರವಾಗಿ ಕಟ್ಟುವ ಹಂತದಲ್ಲಿರುವ ( A Nation in the making) ದೇಶದಲ್ಲಿ ಇನ್ನೂ ಅನೇಕ ವರ್ಷಗಳ ಕಾಲ ನಡೆಯುತ್ತಲೇ ಹೋಗುವಂತಹ ವಿದ್ಯಮಾನ ಎಂಬುದು ನನ್ನ ಅನಿಸಿಕೆ.



**–ಗಿರೀಶ್ ವಿ. ವಾಘ್**, ಹಿರಿಯ ಪತ್ರಕರ್ತರು ಮತ್ತು ಸಾಹಿತ್ಯ ಚಿಂತಕರು, **ಬೆಂಗಳೂರು**

## ಸಾಧನೆಗಳ ಯಾವ ಸುಳಿವೂ ಕಾಣುತ್ತಿಲ್ಲ

೧. ಮೋದಿಯವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ನನಗಿದ್ದ ಮುಖ್ಯ ಆತಂಕವೆಂದರೆ, ತನ್ನದೊಂದು ಕುಟುಂಬವನ್ನೇ ಸರಿಯಾಗಿ ನಿರ್ವಹಿಸಲಾಗದ ಈ ಮನುಷ್ಯ ನೂರಾರು ಸಮಸ್ಯೆಗಳಿಂದ ಬಾಧಿತವಾದ ಭಾರತವೆಂಬ ಈ ದೊಡ್ಡ ದೇಶವನ್ನು ಹೇಗೆ ನಿಭಾಯಿಸಿಕೊಂಡು ಹೋದಾರು ಎಂಬುದಕ್ಕೆ ಸಂಬಂಧಿಸಿದ್ದಾಗಿತ್ತು.

ಇದರ ಜೊತೆಗೇ ಒಂದು ಆಶೆಯೂ ಎಲ್ಲೋ ಚಿಗುರಿತ್ತು ಎಂದೂ ಹೇಳಬಹುದು. ಹತ್ತು ವರ್ಷಗಳ ಕಾಲ ಮಾತುಕತೆಯೇ ಇಲ್ಲದೆ ಕಡ್ಡಿ ತರ ಟಕ್ ಟಕ್ ಎಂದು ಓಡಾಡುತ್ತಾ ಪ್ರಧಾನ ಮಂತ್ರಿಯಾಗಿದ್ದ ಮನಮೋಹನ ಸಿಂಗ್ ಎಂಬ ಮಹಾಶಯರಿಗೆ ಹೋಲಿಸಿದರೆ ಹೆಚ್ಚು ಮಾತಾಡುತ್ತಾ ದೇಶದ ತುಂಬ ಹುರುಪಿನಿಂದ ಓಡಾಡಬಲ್ಲವರಾಗಿರುವ ಈ ಮೋದಿ ಎಂಬ ಮನುಷ್ಯ ಬೇಗನೆ ಏನಾದರೂ ಸಾಧಿಸಿ ತೋರಿಸಿಯಾನು ಎಂದು ನಂಬಿದ್ದೆ ಎಂಬುದಂತೂ ನಿಜ!

೨. ನಾವು ನಿರೀಕ್ಷಿಸಿದಂತಹ ಸಾಧನೆಗಳ ಯಾವ ಸುಳಿವೂ ಕಾಣುತ್ತಿಲ್ಲ. ಕೊಟ್ಟ ಯಾವ ಜನಪ್ರಿಯ ಆಶ್ವಾಸನೆಗಳೂ ಈಡೇರಿಲ್ಲ. ಮುಖ್ಯವಾಗಿ ಅಧಿಕಾರಕ್ಕೆ ಬಂದ ನೂರೇ ದಿನಗಳಲ್ಲಿ ವಿದೇಶಗಳಲ್ಲಿರುವ ಕೋಟ್ಯಾಂತರ ರೂಪಾಯಿಗಳ ಭಾರತೀಯರ ಕಪ್ಪು ಹಣವನ್ನು ಹೊತ್ತು ತಂದು ಮನೆ ಮನೆಗೂ ಲಕ್ಷಾಂತರ ರೂಪಾಯಿಗಳನ್ನು ಹಂಚುವುದಾಗಿ ಹೇಳಿದ್ದ ಮಾತು ಏನಾಯಿತು? ಈಗ ಇದು ತಡವಾಗುತ್ತಿದೆ ಎಂದು ಜನರಿಗೆ ಸಮಜಾಯಿಷಿ ನೀಡಲು, ಹೇಳುತ್ತಿರುವ ತಾಂತ್ರಿಕ ಕಾರಣಗಳು ಈ ಹಿಂದಿನ ಸರ್ಕಾರಕ್ಕೂ ಇದ್ದವಲ್ಲವೆ? ಹಾಗಿರುವಾಗ ಆಗ ಆ ಸರ್ಕಾರವನ್ನು ಅಸಮರ್ಥ ಎಂದು ಏಕೆ ಟೀಕಿಸುತ್ತಿದ್ದರು ಇವರು?

ಇನ್ನು ಇವರು ಬಹು ಪ್ರಚಾರದಿಂದ ಘೋಷಿಸುತ್ತಿರುವ ಸ್ವಚ್ಛ ಭಾರತ ಅಭಿಯಾನ ಯಾವ ರೀತಿಯಲ್ಲೂ ಹೊಸದಲ್ಲ. ಗಾಂಧಿ ಜಯಂತಿಯ ಸಂದೇಶಗಳನ್ನು ಮಸುಕುಗೊಳಿಸಲಷ್ಟೇ ಇದೆಲ್ಲ ಜಾರಿಗೆ ಬಂದಿರುವುದು.

ಹಣ ಚೆಲ್ಲಿ ಜನ ಸೇರಿಸಿ ದೊಡ್ಡ ಭಾಷಣಗಳನ್ನು ಮಾಡುವುದರಿಂದ ಯಾವ ಸಾಧನೆಯೂ ಆಗುವುದಿಲ್ಲ. ಜನರಿಗೆ ಏನೂ ಪ್ರಯೋಜನವಾಗುವುದಿಲ್ಲ. ರೈತರಿಗಾಗಿ ಏನೆಲ್ಲ ಸೌಲಭ್ಯ ಕೊಟ್ಟಿರುವುದಾಗಿ ಇವರು ಹೇಳುತ್ತಾರೆ. ಆದರೆ ರೈತರ ಆತ್ಮಹತ್ಯೆಯ ಸರಣಿ ನಿಂತೇ ಇಲ್ಲ ಎನ್ನುವುದು ಏನನ್ನು ಸೂಚಿಸುತ್ತದೆ? ಅಡಿಕೆ-ತೆಂಗು ಬೆಳೆಗಾರರು ಸಂಕಷ್ಟದಲ್ಲಿದ್ದು ಮೋದಿಯವರು ಅಡಿಕೆ-ತೆಂಗು ಉತ್ಪನ್ನಗಳ ಆಮದನ್ನು ಕಡಿಮೆ ಮಾಡಬೇಕೆಂದು ನಾನು ಆಗ್ರಹಿಸಬಯಸುತ್ತೇನೆ. ಹಾಗೇ ಬೆಳೆ ವಿಮೆ ಯೋಜನೆಗಳ ಸ್ವರೂಪವನ್ನು ಅಧಿಕಾರಶಾಹಿಗೆ ಬದಲಾಗಿ ಕೃಷಿ ಪರಿಣತರು ನಿರ್ಧರಿಸುವಂತಾದರೆ ರೈತರಿಗೆ ಅದರಿಂದ ನಿಜವಾದ ಪ್ರಯೋಜನವಾದೀತು.

ಈ ಹಿಂದಿನ ಪ್ರಧಾನಿ ನರಸಿಂಹರಾಯರು ಕಣ್ಣು ಮುಚ್ಚಿಕೊಂಡು ಒಪ್ಪಿ ಜಾಗತೀಕರಣದ ಒಪ್ಪಂದಗಳಿಗೆ ಸಹಿ ಹಾಕಿಬಿಟ್ಟರು. ಭಾರತದಂತಹ ಬಡ ದೇಶದ ಬಡ ಜನರ ಹಿತಾಸಕ್ತಿಗೆ ವಿರುದ್ಧವಾದ ಇಂತಹ ಅವೈಜ್ಞಾನಿಕ ಒಪ್ಪಂದಗಳನ್ನು ಮಹಾ ದೇಶಭಕ್ತರೆಂದು ಹೇಳಿಕೊಳ್ಳುವ ಮೋದಿಯವರು ಪ್ರಧಾನಿಯಾದ ಮೇಲೂ ಪ್ರಶ್ನೆ ಮಾಡದೆ ಒಪ್ಪಿ ಜಾರಿಗೆ ತರುತ್ತಿರುವುದು ನಮ್ಮೆಲ್ಲರ ದೌರ್ಭಾಗ್ಯವೆಂದೇ ಹೇಳಬೇಕು.

೩. ಕಾಂಗ್ರೆಸ್ ಮುಕ್ತ ಭಾರತದ ಘೋಷಣೆ ಹಾಕುವ ಮೋದಿ ಸರ್ಕಾರಕ್ಕೆ ಇತಿಹಾಸ ಗೊತ್ತಿಲ್ಲ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ ಎಂಬುದನ್ನು ಸಾಬೀತುಪಡಿಸುತ್ತದಷ್ಟೆ. ತಾವು ಮಹಾತ್ಮ ಗಾಂಧಿ ಸ್ವಾತಂತ್ರ್ಯ ತಂದುಕೊಟ್ಟ ದೇಶದ ಪ್ರಧಾನಿ ಎಂಬುದನ್ನು ಮೋದಿಯವರು ಮರೆತಂತಿದೆ!



**–ಕಡಿದಾಳು ಶಾಮಣ್ಣ**, ಹಿರಿಯ ಸಮಾಜವಾದಿ ಹಾಗೂ ರೈತ ಮುಖಂಡರು, **ಭಗವತಿಕೆರೆ**

ಸಾಗರದ ಹಿರಿಯ ರಂಗಕರ್ಮಿ ಡಾ. ಗುರುರಾವ್ ಬಾಪಟ್ ಹಾಗೂ ಮೇಲುಕೋಟೆಯ ಸರ್ವೋದಯ ಮುಖಂಡ ಸುರೇಂದ್ರ ಕೌಲಗಿಯವರ ಪತ್ನಿ ಹಾಗೂ ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ಗಿರಿಜಮ್ಮ ಅವರು ಇತ್ತೀಚೆಗೆ ನಿಧನರಾಗಿದ್ದಾರೆ. ಇವರಿಬ್ಬರಿಗೂ ಪತ್ರಿಕೆ ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ-ಸಂ.

# ಸಾಹಿತ್ಯ-ಸಂಸ್ಕೃತಿ-ಭಾಷೆ-ಅಭಿವ್ಯಕ್ತಿ ಇತ್ಯಾದಿ ಮೂರು ಟಿಪ್ಪಣಿಗಳು



**ದೇ**ಜಗೌ ಎಂದೇ ಹೆಸರಾಗಿದ್ದ ದೇ. ಜವರೇಗೌಡರು ನಿಧನರಾಗಿದ್ದಾರೆ. ಈಚಿನ ತಲೆಮಾರಿಗೆ ಇವರು ಅಷ್ಟು ಪರಿಚಿತರಲ್ಲ. ಆದರೆ ನಮ್ಮ ತಲೆಮಾರಿಗೆ ಅವರು ಒಂದು ಕಾಲದ 'ಹೀರೋ'. ಕುವೆಂಪು ಅವರಿಂದ ಕನ್ನಡದ ದೀಕ್ಷೆ ತೊಟ್ಟವರು ಎಂಬ ನಂಬಿಕೆ ಮತ್ತು ಸ್ವತಃ ಅವರು ಕನ್ನಡಕ್ಕಾಗಿ ಮಾಡಿದ ಕೆಲಸಗಳೂ ಇದಕ್ಕೆ ಕಾರಣವಾಗಿದ್ದವು. ಮೈಸೂರು ವಿಶ್ವವಿದ್ಯಾಲಯದಲ್ಲಿನ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ನಂತರ ಅದೇ ವಿಶ್ವವಿದ್ಯಾಲಯದ ಕುಲಪತಿಗಳಾಗಿ (ಆವರೆಗೆ ಇದ್ದ ಉಪ ಕುಲಪತಿ ಎಂಬ ಅಭಿದಾನವನ್ನು ಕುಲಪತಿ ಎಂದೂ, ಕುಲಪತಿ ಎಂಬ ಅಭಿದಾನವನ್ನು ಕುಲಾಧಿಪತಿ ಎಂದೂ ಪರಿವರ್ತಿಸಿದವರು ಅವರೇ!) ಕನ್ನಡವನ್ನು ಆಧುನಿಕ ಜ್ಞಾನದ ಎಲ್ಲ ಸ್ತರಗಳ ವಾಹಿನಿಯನ್ನಾಗಿ ಮಾಡುವ ಕುವೆಂಪು ಅವರ ಸಂಕಲ್ಪವನ್ನು ತಮ್ಮ ವಿಶ್ವವಿದ್ಯಾಲಯದ ಮೂಲಕ ಹಠ ತೊಟ್ಟಂತೆ ಜಾರಿಗೊಳಿಸಿ 'ಕನ್ನಡದ ಕಟ್ಟಾಳು' ಎಂಬ ಮಾದರಿಯನ್ನು ನಿರ್ಮಿಸಿದವರು ಅವರು. ಆ ಮೂಲಕ ಆ ಕಾಲಕ್ಕೆ ಬರೀ ಕೂಗಾಟ-ಹಾರಾಟಗಳ ವೇದಿಕೆಯಂತಿದ್ದ ಕನ್ನಡ ಚಳುವಳಿಗೆ ಒಂದು ಘನತೆಯನ್ನು ಒದಗಿಸಿದವರೂ ದೇಜಗೌ. ಈ ಕಾರಣಕ್ಕಾಗಿ ಕನ್ನಡ ಮತ್ತು ಕನ್ನಡ ಸಮುದಾಯ ಅವರಿಗೆ ಋಣಿಯಾಗಿವೆ.

ಆದರೆ ದೇಜಗೌ ಕನ್ನಡದ ಈ ಕೆಲಸಗಳನ್ನು ಮಾಡಿದ್ದರ ಹೊರತಾಗಿ ಕುವೆಂಪು ಅವರಿಗೆ ತಕ್ಕ ಶಿಷ್ಯರೇನೂ ಆಗಿರಲಿಲ್ಲ ಎಂಬ ಅಭಿಪ್ರಾಯವೂ ಇದೆ. ಆ ಕಾಲಕ್ಕೆ ಕುವೆಂಪು ಬಳಿಗೆ ಹೊಸ ತಲೆಮಾರಿನ ಪ್ರತಿಭಾವಂತರಾರೂ ಸುಳಿಯದಂತೆ ಅಡ್ಡಗೋಡೆ ನಿರ್ಮಿಸಿದ ಪ್ರಮುಖರಲ್ಲಿ ಸ್ವತಃ ಅಷ್ಟೇನೂ ಸಾಹಿತ್ಯ ಪ್ರತಿಭೆ ಹೊಂದಿಲ್ಲದಿದ್ದ ಅವರೂ ಒಬ್ಬರು ಎಂದೂ ಹೇಳಲಾಗುತ್ತದೆ. ತೇಜಸ್ವಿ ಬೆಳೆದು ದೊಡ್ಡವರಾಗಿ ಎಚ್ಚರಿಸುವವರೆಗೂ ಇವರ ಶೂದ್ರ ಪೌರೋಹಿತ್ಯದ ಹೊಗಳುಭಟರ ಪಡೆಯೇ ಕುವೆಂಪು ಅವರನ್ನು ಹೊನ್ನಶೂಲಕ್ಕೆ ಏರಿಸಿಟ್ಟಿದ್ದುದು ಎಂಬ ಮಾತೂ ಪ್ರಚಲಿತದಲ್ಲಿದೆ. ಇನ್ನು ಅವರನ್ನು ಕೆಲವರು ಗೌಜದೇ(ಗೌಡ ಜನಾಂಗದ ದೇವರು) ಎಂದು ವ್ಯಂಗ್ಯಪೂರ್ಣವಾಗಿ ಕರೆಯುತ್ತಿದ್ದುದಕ್ಕೆ ಕಾರಣವಾಗಿದ್ದ ಅವರ ಜಾತಿವಾದವೂ ಅಷ್ಟೇ ಕುಪ್ರಸಿದ್ಧವಾದದ್ದು.

**ಕ**ನ್ನಡಕಟ್ಟಾಳುವೊಬ್ಬರ ಬಗ್ಗೆ ಬರೆಯುತ್ತಿರುವ ಈ ಸಂದರ್ಭದಲ್ಲೇ ಇಂದಿನ ಕನ್ನಡ ಶಾಲೆಗಳ ಬಗ್ಗೆ ಎದ್ದಿರುವ ವಿವಾದದ ಬಗೆಗೂ ಬರೆಯುವುದು ಉಚಿತ. ಮೂರು ಸಾವಿರ ಸರ್ಕಾರಿ (ಅಂದರೆ ಕನ್ನಡ ಮಾಧ್ಯಮದ) ಶಾಲೆಗಳನ್ನು ವಿದ್ಯಾರ್ಥಿಗಳ ಕೊರತೆಯಿಂದಾಗಿ ಮುಚ್ಚುವ ತನ್ನ ಆದೇಶವನ್ನು ರಾಜ್ಯ ಸರ್ಕಾರ ಹಿಂತೆಗೆದುಕೊಂಡಿದೆ. ಈ ಶಾಲೆಗಳನ್ನು ಮುಚ್ಚುವ ಸುದ್ದಿ ಬಂದಾಗಲೆಲ್ಲ ತಮ್ಮ ಒರೆಗಳಿಂದ ಕತ್ತಿ ಎಳೆದು ಝಳಪಿಸುವ ಕನ್ನಡ ವೀರರು ಈ ವರ್ಷವೂ ಒಮ್ಮೆ ತಮ್ಮ ಕತ್ತಿಗಳನ್ನೆಳೆದು ಅವನ್ನು ಪತ್ರಿಕೆಗಳಲ್ಲಿ ಝಳಪಿಸಿ ಮತ್ತೆ ಒರೆಗೆ ಸೇರಿಸಿದ್ದಾರೆ! ಆದರೆ ಈ ಕನ್ನಡ ವೀರರು ಈ ಕನ್ನಡ ನಾಡಿನ ಜವಾಬ್ದಾರಿ ಪ್ರಜೆಗಳಾಗಿ ಈ ಒಂದು ಮೂಲಭೂತ ಪ್ರಶ್ನೆಯನ್ನೇಕೆ ಕೇಳಿಕೊಳ್ಳುತ್ತಿಲ್ಲ ಎಂದು ಆಶ್ಚರ್ಯವಾಗುತ್ತಿದೆ: ಐದು-ಹತ್ತು ವಿದ್ಯಾರ್ಥಿಗಳಿರುವ ಶಾಲೆಯೊಂದನ್ನು ಲಕ್ಷಾಂತರ ರೂಪಾಯಿಗಳ ವಾರ್ಷಿಕ ವೆಚ್ಚದೊಂದಿಗೆ ನಡೆಸುವುದು ಎಷ್ಟು ಸಾಧು? ನಮ್ಮ ಇಂತಹ ಒಣ ಕನ್ನಾಡಾಭಿಮಾನವೊಂದೇ ರಾಜ್ಯದ ಪ್ರಗತಿ ಚಕ್ರವನ್ನು ಮುನ್ನಡೆಸಬಲ್ಲುದೆ? ರಾಜ್ಯಕ್ಕೊಂದು ಆರ್ಥಿಕ ಶಿಸ್ತು ಎಂಬುದೂ ಕನ್ನಡದಷ್ಟೇ ಮುಖ್ಯವಲ್ಲವೆ?

ಇಲ್ಲಿ ನಾನು ಒಣ ಕನ್ನಡಾಭಿಮಾನ ಎಂದೆ. ಅದಕ್ಕೆ ಕಾರಣವಿದೆ. ಸಂವಿಧಾನದತ್ತವಾಗೇ ಭಾಷಾವಾರು ಪ್ರಾಂತ್ಯ ರಚನೆಯಾಗಿ, ಅದರ ಮೂಲಕ ಕರ್ನಾಟಕವು ಕನ್ನಡ ರಾಜ್ಯವಾಗಿ ರೂಪುಗೊಂಡಿರುವಾಗ, ಕನ್ನಡದ ಮಕ್ಕಳಿಗೆಲ್ಲರಿಗೂ ಪ್ರಾಥಮಿಕ ಶಿಕ್ಷಣವನ್ನಾದರೂ ಕನ್ನಡದಲ್ಲಿ ಒದಗಿಸುವ ರಾಜ್ಯ ಸರ್ಕಾರದ ಹಕ್ಕು ಸಂವಿಧಾನ ವಿರೋಧಿಯಾಗಿದೆಯಂತೆ! ನಮ್ಮ ಸರ್ವೋಚ್ಚ ನ್ಯಾಯಾಲಯದ ಈ ವಿಚಿತ್ರ ತೀರ್ಪಿಗೆ ಉತ್ತರವೇ ಇಲ್ಲವೆಂಬಂತೆ ಕನ್ನಡ ಸಮೂಹ ತೆಪ್ಪಗಾಗಿದೆ. ಇಂತಹ ಈ ವೀರ ಸಮೂಹಕ್ಕೆ, ಇಂಗ್ಲಿಷ್ ಶಾಲೆಗಳ ಹೊಡೆತಕ್ಕೆ ಸಿಕ್ಕಿ ಮುಚ್ಚುತ್ತಿರುವ ಕನ್ನಡ ಶಾಲೆಗಳ ಮೇಲೆ ಜನರ ಹಣ ಸುರಿಯಿರಿ ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸುವ ಯಾವ ಹಕ್ಕಿದೆ? ಈ ಕನ್ನಡ ವೀರರಲ್ಲಿ ಯಾರೂ ಯಾಕೆ, ಕನ್ನಡ ಶಿಕ್ಷಣಕ್ಕೆ ಕುತ್ತಾಗಿರುವ ಸಾಂವಿಧಾನಿಕ ಅಡೆ-ತಡೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಿ ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸುವ ಸ್ಥೈರ್ಯವನ್ನು ತೋರುತ್ತಿಲ್ಲ? ಏಕೆಂದರೆ, ಇಂದು ನಿಜವಾಗಿ ಕನ್ನಡವು ಯಾರಿಗೂ ಬೇಕಾಗಿಲ್ಲ. ಅದು ಎಷ್ಟು ದಿನ, ಎಷ್ಟರ ಮಟ್ಟಿಗೆ ಉಳಿದರೆ ಅಷ್ಟು ಸಾಕು ಎಂಬ ತೀರ್ಮಾನಕ್ಕೆ ಜನವೂ, ಸರ್ಕಾರವೂ ಬಂದಂತಿದೆ. ಹಾಗಾಗಿ ಕನ್ನಡ ಹೋರಾಟ ಅಥವಾ ಸಮಾನ ಶಿಕ್ಷಣ ಹೋರಾಟವೆಂಬುವುಗಳೆಲ್ಲ ಕಾಲಧರ್ಮಕ್ಕನುಸಾರವಾದ ತೋರುಹೋರಾಟಗಳೇ ಆಗಿರಬಹುದಲ್ಲವೆ?



**ಹೀ**ಗೆಲ್ಲ ಯೋಚಿಸುತ್ತಿರುವ ಸಂದರ್ಭದಲ್ಲೇ ನಮ್ಮ ಯು.ಆರ್. ಅನಂತಮೂರ್ತಿಯವರ ಕೊನೆಯ ಪುಸ್ತಕ 'ಹಿಂದುತ್ವ ಅಥವಾ ಹಿಂದ್ ಸ್ವರಾಜ್?' ಬಗ್ಗೆ ಪತ್ರಿಕೆಗಳಲ್ಲಿ ಇದ್ದಕ್ಕಿದಂತೆ ಒಂದಾದಮೇಲೊಂದರಂತೆ ಎರಡು ಲೇಖನಗಳು ಪ್ರತ್ಯಕ್ಷವಾದಾಗ ನಾನು ಈ ದೇಶದಲ್ಲಿನ ಇಂಗ್ಲಿಷ್ ಬರಹ ಲೋಕದ ಬಗೆಗಿನ ನನ್ನ ಆಲೋಚನೆಗಳನ್ನು ಮತ್ತೆ ತಿರುವಿಹಾಕುಂತಾಯಿತು. ಈ ಲೇಖನಗಳಲ್ಲಿ ಒಂದು ನಲವತ್ತು ವರ್ಷಗಳಿಂದ ಬೆಂಗಳೂರಿನಲ್ಲಿದ್ದೂ ಸರಿಯಾಗಿ ಒಂದು ವಾಕ್ಯ ಕನ್ನಡ ಮಾತನಾಡಲಾಗದ ರಾಮಚಂದ್ರ ಗುಹಾ ಅವರದಾದರೆ ('ಪ್ರಜಾವಾಣಿ'ಯಲ್ಲಿ ಅನುವಾದಿತ ಅಂಕಣ), ಇನ್ನೊಂದು ಕನ್ನಡದವರೇ ಆದ ಗೆಳೆಯ ಚಂದನ್ ಗೌಡ ಅವರು 'ಮಿರರ್' ಪತ್ರಿಕೆಯಲ್ಲಿ ಬರೆದ (ಇಂಗ್ಲಿಷ್) ಅಂಕಣ ಬರಹ. ಎರಡು ವರ್ಷಗಳಷ್ಟು ಹಳೆಯದಾದ ಈ ಪುಸ್ತಕದ ಬಗ್ಗೆ ಈಗ ಇದ್ದಕ್ಕಿದ್ದಂತೆ ಈ ಇಂಗ್ಲಿಷ್ ಅಂಕಣಕಾರರಿಗೆ ಆಸಕ್ತಿ ಮೂಡಲು ಕಾರಣಗಳಾದರೂ ಏನು? ಅದರ ಇಂಗ್ಲಿಷ್ ಅವತರಣಿಕೆಯೇನಾದರೂ ಹೊರಬಂದಿರಬಹುದೇ? ಬಂದಿರಬೇಕು. ಇಲ್ಲದಿದ್ದರೆ ಗುಹಾ ಹೇಗೆ ಅದನ್ನು ಓದಿಯಾರು? ಹಾಗೆ ನೋಡಿದರೆ, ಅನಂತಮೂರ್ತಿಯಂತಹವರ ಬಗ್ಗೆ ನಮ್ಮ ಈ ಇಂಗ್ಲಿಷ್ ಲೇಖಕರು ಅವರ ಈ ಪುಸ್ತಕವನ್ನು ಓದದೆ ಕೂಡ ಬರೆಯುವಷ್ಟು ಪರಿಣತರು! ಅಥವಾ ಅನಂತಮೂರ್ತಿಯವರು ಅವರನ್ನೆಲ್ಲ ಹಾಗೆ 'ತಯಾರು' ಮಾಡಿ ಹೋಗಿದ್ದಾರೆ!

ಅದೇನೇ ಇರಲಿ, ತಮ್ಮ ಮಾತೃಭಾಷೆಯಲ್ಲಿ ಬರೆಯಲು ಆಶಕ್ತರಾದ 'ಅಥವಾ ಬರೆಯಲು ಸಂಕೋಚಪಡುವ (ಈ ಎರಡರ ಅರ್ಥವೂ ಒಂದೆ!) ಈ ಇಂಗ್ಲಿಷ್ ಬರಹಗಾರರ ಬಗ್ಗೆ ನನಗೆ ಮೊದಲಿಂದಲೂ ಅಷ್ಟು ಗೌರವವಿಲ್ಲ. ಏಕೆಂದರೆ, ಹುಟ್ಟಿನೊಂದಿಗೇ ಚರ್ಮದಂತೆ ಕಚ್ಚಿಕೊಂಡು ಬರುವ ಮಾತೃಭಾಷೆಯನ್ನು ಬಿಟ್ಟು ಕಲಿತ ಭಾಷೆಯಲ್ಲಿ ಬರೆಯುವವರ ವ್ಯಕ್ತಿತ್ವ ಅಷ್ಟು ಅಸಲಿಯಾದದ್ದಾಗಿರಲಾರದು ಎಂದು ನನ್ನ ಅನುಮಾನ. ಆ ಅನುಮಾನ ಈ ಎರಡು ಬರಹಗಳನ್ನು ಓದಿದಾಗ ನನಗೆ ಖಚಿತವಾಯಿತು. ಅತ್ಯಂತ ಬಡಕಲಾದ ಈ ಪುಸ್ತಕವನ್ನು ಈ ಇಬ್ಬರು ಎಷ್ಟು ಆಕಾಶಕ್ಕೆ ಏರಿಸಿದ್ದಾರೆಂದರೆ ಭೂಮಿಯ ಮೇಲಿನ ಆಳದ ಸತ್ಯ ಹೇಳುವ ಗಾಂಧಿಯ ಈ 'ಹಿಂದ್ ಸ್ವರಾಜ್' ಕೇವಲ ಆಕಾಶದ-ಅಂದರೆ ಬರೀ ಬೌದ್ಧಿಕ ಭೋಳೆಯ-ಪುಸ್ತಕದಂತೆ ಕಾಣತೊಡಗುತ್ತದೆ. ತಡೆಯಲಾಗದೆ ನಾನು ಪರಿಚಯದವರಾದ ಚಂದನ್ ಗೌಡರಿಗೆ ಸ್ವಲ್ಪ ಸಲಿಗೆಯಿಂದಲೇ ಹೀಗೆ ಬರೆದೆ: 'ನಿಮ್ಮ ಮತ್ತು ಗುಹಾ ಅವರ ಈ ಬರಹಗಳನ್ನು ಓದಿದಾಗ ನನಗೆ ಅನ್ನಿಸಿದ್ದು, ಮಾತೃಭಾಷಾ ಲೋಕದಿಂದ ಸಾವಯವವಾಗಿ ದೂರಾದ (ಅಂದರೆ ತನ್ನ ವ್ಯಕ್ತಿತ್ವದ ಅಭಿವ್ಯಕ್ತಿಯೇ ಆದ ತನ್ನೆಲ್ಲ ಬರವಣಿಗೆಯನ್ನು ಮಾತೃಭಾಷೆಯ ಮೂಲಕ ಮಾಡಲಾಗದ ಒತ್ತಡಗಳಿಗೆ ಸಿಕ್ಕಿಕೊಂಡಿರುವ) ವ್ಯಕ್ತಿಗಳಿಗೆ ಈ ನೆಲದ ಮೂಲದ್ದೆಂದು ಅನ್ನಿಸಿದ್ದಕ್ಕೆ ಸಂಬಂಧಿಸಿದ ಎಲ್ಲವೂ ಹುಸಿ ರೋಮಾಂಚನವನ್ನಷ್ಟೇ ಉಂಟು ಮಾಡುತ್ತದೆ ಮತ್ತು ಈ ರೋಮಾಂಚನ ಅದರ ಎಲ್ಲ ಗುಣಾತ್ಮಕತೆಯನ್ನೂ ನಿರ್ಲಕ್ಷಿಸಿ ಅದನ್ನು ಮರೆಸಲು ಹಾತೊರೆಯುತ್ತದೆ. ಬಹುಶಃ ಇದು ತಾನು ಇಂಗ್ಲಿಷ್‌ನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆರಿಸಿಕೊಳ್ಳಬೇಕಾದ ಸ್ಥಿತಿಗೆ ಈಡಾಗಿರುವುದರ ಬಗ್ಗೆ ಇರುವ ಸುಪ್ತ 'ತಪ್ಪಿತಸ್ಥ' ಭಾವನೆಯಿಂದಲೋ ಅಥವಾ ಅದನ್ನು ಪರಿಹರಿಸಿಕೊಳ್ಳುವ ಪ್ರಯತ್ನವಾಗಿಯೋ ಹುಟ್ಟಿರಬಹುದು'

ನೀವೇನನ್ನುತ್ತೀರಿ?

-ಡಿ.ಎಸ್. ನಾಗಭೂಷಣ

## ಪುಸ್ತಕಾವಲೋಕನ

ಪು: **ಓದಿರಿ** (ಪ್ರವಾದಿ ಮಹಮ್ಮದರ ಜೀವನಾಧಾರಿತ ಐತಿಹಾಸಿಕ ಕಾದಂಬರಿ) ಲೇ: **ಬೋಳುವಾರು ಮೊಹಮ್ಮದ್ ಕುಂಞ** ಪ್ರ: **ಮುತ್ತುಪ್ಪಾಡಿ ಪುಸ್ತಕ,** ಬೆಂಗಳೂರು–೫೬೦ ೦೪೭ ಪು: **೩೦೨ ಬೆಲೆ: ರೂ. ೨೨೦/–**

# ಪ್ರವಾದಿಯೊಂದಿಗೆ ಪಯಣ




ನಮ್ಮ ರಾಷ್ಟ್ರೀಯ ಸಮುದಾಯದ ಅವಿಭಾಜ್ಯ ಅಂಗವಾಗಿರುವ ಮುಸ್ಲಿಮರು ಎಂದರೆ ಹೊರಗಿನವರು ಎಂಬ ಭಾವನೆಯನ್ನು ಹೆಚ್ಚು ಸಾರ್ವತ್ರಿಕವಾಗಿ ಹರಡುತ್ತಿರುವ ಸಂದರ್ಭವಿದು. ಈ ಸಮುದಾಯದ ಧಾರ್ಮಿಕ ಪ್ರವೃತ್ತಿಯ ಬಗೆಗೆ ಮುಸ್ಲಿಮೇತರರಲ್ಲಿ ಅನೇಕ ಪೂರ್ವಾಗ್ರಹಗಳಿವೆ. ಪರಸ್ಪರ ಪರಿಚಯ, ಬರಿಯ ವ್ಯವಹಾರಕ್ಕಷ್ಟೇ ಸೀಮಿತಗೊಂಡು ಆ ಸಮುದಾಯದ ಧರ್ಮ–ಸಂಸ್ಕೃತಿಗಳ ಬಗೆಗೆ ಕುತೂಹಲ–ಪ್ರಶ್ನೆ–ಅನುಮಾನಗಳು ಹೆಚ್ಚುತ್ತಿವೆ. ಈ ಎಲ್ಲವನ್ನೂ ಪರಿಹರಿಸುವ ಒಂದು ಪ್ರಯತ್ನವಾಗಿ ಕನ್ನಡದ ಹಿರಿಯ ಕತೆಗಾರ ಬೋಳುವಾರು ಮೊಹಮ್ಮದ್ ಕುಂಞ ಅವರು 'ಓದಿರಿ' (ಕುರ್‌ಆನ್‌ನ ಅರ್ಥ ಇದೇ!)) ಕಾದಂಬರಿಯನ್ನು ಪ್ರಕಟಿಸಿರುವುದು ಸಕಾಲಿಕವೇ ಆಗಿದೆ.

ಕಾದಂಬರಿಯ ಪ್ರಸ್ತಾವನೆಯಲ್ಲಿ ಇಂತಹ ಕಾದಂಬರಿಯನ್ನು ಬರೆದು ಓದುಗರಿಗೆ ದಾಟಿಸುವಲ್ಲಿ ಇರುವ ಕಷ್ಟಗಳನ್ನು ಲೇಖಕರು ನಿವೇದಿಸಿಕೊಳ್ಳುತ್ತಾರೆ. ದೇವಸ್ಥಾನಗಳಲ್ಲಿ, ಚರ್ಚುಗಳಲ್ಲಿ, ಪ್ರೇಕ್ಷಣೀಯ ಸ್ಥಳಗಳಲ್ಲಿ ಬೇರೆ ಬೇರೆ ಧರ್ಮಗಳ ಪೌರಾಣಿಕ–ಐತಿಹಾಸಿಕ ಘಟನೆಗಳು ಚಿತ್ರ ರೂಪಕಗಳಾಗಿ ಕಾಣಸಿಗುವಂತೆ, 'ಕುರ್‌ಆನ್'ನಲ್ಲಿ ಬರುವ ಪಾತ್ರಗಳು ಎಲ್ಲೂ ಕಾಣಸಿಗದಿರುವುದಕ್ಕೆ ಧರ್ಮದಲ್ಲಿಯ ವರ್ಣಚಿತ್ರ, ಶಿಲ್ಪಗಳ ನಿಷೇಧವೇ ಕಾರಣವೆಂದೂ ಅವರು ಸೂಚಿಸುತ್ತಾರೆ. ಇಸ್ಲಾಂ ಧರ್ಮದ ಬಗೆಗೆ ಕನ್ನಡದಲ್ಲಿ ಇರುವ ಆಕರಗಳಲ್ಲೂ ಹಲವಾರು ತೊಡಕುಗಳಿರುವುದನ್ನೂ ಉಲ್ಲೇಖಿಸುತ್ತಾರೆ. ಈ ಹಿನ್ನೆಲೆಯಲ್ಲಿ, 'ಕುರ್‌ಆನ್'ನಲ್ಲಿ ಬರುವ ಪಾತ್ರಗಳನ್ನು ಸ್ಥೂಲವಾಗಿಯಾದರೂ ಪರಿಚಯಿಸುವುದಕ್ಕಾಗಿ, ಪ್ರವಾದಿ ಮೊಹಮ್ಮದರ ಜೀವನ ಚರಿತ್ರೆಯನ್ನಾಧರಿಸಿದ ಕಾದಂಬರಿಯನ್ನು ರಚಿಸಿದ್ದಾಗಿ ಹೇಳಿಕೊಳ್ಳುತ್ತಾರೆ. ಆ ದೃಷ್ಟಿಯಿಂದ ಮುಸ್ಲಿಮೇತರ ಕನ್ನಡದ ಓದುಗರಿಗೆ ಇದು ಬಹು ಮಹತ್ವದ ಐತಿಹಾಸಿಕ ಕಾದಂಬರಿ ಎನಿಸುತ್ತದೆ. ಸುಮಾರು ೩೦೦ ಪುಟಗಳ ಈ ಕಾದಂಬರಿಯಲ್ಲಿ ಮೊಹಮ್ಮದರ ಜೀವನದ ಮೂರು ಪ್ರಮುಖ ಘಟ್ಟಗಳನ್ನು ಅಂತರಂಗ, ಬಹಿರಂಗ ಮತ್ತು ಚದುರಂಗ ಎಂಬ ಮೂರು ಭಾಗಗಳಲ್ಲಿ ಚಿತ್ರಿಸಿದ್ದಾರೆ.

ಮೊಹಮ್ಮದರ ಬಾಲ್ಯದೊಂದಿಗೆ ಬಿಚ್ಚಿಕೊಳ್ಳುವ ಕತೆಯಲ್ಲಿ, ಎಳವೆಯಲ್ಲೇ ಅನಾಥರಾಗುವ ಅವರು, ಪ್ರತಿಷ್ಠಿತ ವ್ಯಾಪಾರಿ, ದೊಡ್ಡಪ್ಪ ಅಬುತಾಲಿಬರ ಆಶ್ರಯದಲ್ಲಿ ಬೆಳೆಯುತ್ತಾ, ಓದು ಬಾರದಿದ್ದರೂ ತನ್ನ ಸತ್ಯಸಂಧತೆ, ಪ್ರಾಮಾಣಿಕತೆಗಳಿಂದ ವ್ಯವಹಾರ ಚತುರನಾಗುವುದೂ, 'ಎಲ್ಲರಂತಿರದ' ಹುಡುಗನನ್ನು ಕ್ರೈಸ್ತ ಸಂನ್ಯಾಸಿಯೊಬ್ಬರು 'ಇವನೇ ನಮ್ಮ ಅಂತಿಮ ಪ್ರವಾದಿ' ಎಂದು ಗುರುತಿಸುವುದೂ, ಸ್ಫುರದ್ರೂಪಿ ಯುವಕ ಮೊಹಮ್ಮದ್, ತಮಗಿಂತ ಹದಿನೈದು ವರ್ಷ ಹಿರಿಯರಾದ ಶ್ರೀಮಂತ ವಿಧವೆ, ವರ್ತಕಿ ಖದೀಜಾರೊಂದಿಗೆ ಮದುವೆಯಾಗುವುದೂ ಸೇರಿದಂತೆ ಹಲವು ವಿಶೇಷ ಸಂಗತಿಗಳು ಸುಂದರವಾಗಿ ಚಿತ್ರಿಸಲ್ಪಟ್ಟಿವೆ.

ಹೊಸ ಧರ್ಮವೊಂದು ಹುಟ್ಟಲು ಕಾರಣವಾಗುವ ಭೂಮಿಕೆಯೊಂದು ಮರಳುಗಾಡಿನ ಮಕ್ಕಾದಲ್ಲಿ ಸಿದ್ಧವಾಗಿರುತ್ತದೆ. ಆ ಹಿಂದಿನ ವರ್ಷ, ಜನರನ್ನು ಭಯಾನಕವಾಗಿ ಕಾಡಿದ್ದ ಬರಗಾಲದಲ್ಲಿ, ಪೂರ್ವ ಪ್ರವಾದಿಗಳು ಕಟ್ಟಿಸಿದ್ದೆಂದು ನಂಬಲಾದ, ವಿವಿಧ ದೇವತೆಗಳ ವಿಗ್ರಹಗಳಿರುವ ಪೂಜಾಮಂದಿರ 'ಕಅಬಾ'ದ ಮುಂದೆ ದಯನೀಯವಾಗಿ ಪ್ರಾರ್ಥಿಸುತ್ತಾ ಅಪರೂಪಕ್ಕೊಮ್ಮೆ ಎಸೆಯಲ್ಪಡುವ ರೊಟ್ಟಿ ತುಣುಕುಗಳಿಗಾಗಿ ಕಾಯುವ ತಾಯಂದಿರನ್ನು ನೋಡಿ ಕಂಗೆಟ್ಟು ಹೋಗಿರುತ್ತಾರೆ ಮೊಹಮ್ಮದರು. ಗಾಯದ ಮೇಲೆ ಬರೆ ಎಂಬಂತೆ ಬಡ್ಡಿ ವ್ಯಾಪಾರಿಗಳ ಸಮಯ ಸಾಧಕತನ, ಮರಳಿನ ಪ್ರತಿಯೊಂದು ಕಣವನ್ನೂ ರಕ್ತದಿಂದ ಕೆಂಪಾಗಿಸುತ್ತಿದ್ದ ನಾಯಕರುಗಳು, ಭಯದಿಂದ ನಡುಗುವ ಗುಲಾಮರು...ಇತ್ಯಾದಿ ಇತ್ಯಾದಿ. ಕಾಡುತ್ತಿದ್ದ ಅನೇಕ ಪ್ರಶ್ನೆಗಳಿಗೆ ಉತ್ತರ ಹುಡುಕಲು ಅನಕ್ಷರಸ್ಥ ಮೊಹಮ್ಮದರು ಅನತಿದೂರದ 'ಹಿರಾ' ಗುಹೆಯಲ್ಲಿನ ಕತ್ತಲಿನಲ್ಲಿ ಧ್ಯಾನನಿರತರಾಗುತ್ತಾರೆ. ಒಂದು ರಾತ್ರಿ, 'ಓದಿರಿ' ಎನ್ನುವ ಅಲ್ಲಾಹುವಿನ ಕರೆ ಕೇಳಿಸುತ್ತದೆ. 'ನನಗೆ ಓದಲು ತಿಳಿಯದು' ಎಂದು ಮೊರೆಹೊಕ್ಕ ಮೊಹಮ್ಮದರಿಗೆ 'ನೀವು ಅಲ್ಲಾಹುವಿನ ಪ್ರವಾದಿಯಾಗಿರುವಿರಿ' ಎಂಬ ಪ್ರೇರಣೆಯಾಗುತ್ತದೆ. ಅಲ್ಲಾಹು ಒಬ್ಬನೇ ಸತ್ಯ, ಪ್ರಚಲಿತ ವಿಗ್ರಹಾರಾಧನೆ ಸರಿಯಲ್ಲವೆಂಬ ಅರಿವಾಗುತ್ತದೆ. ಗಂಡನಲ್ಲಿ ಅಪಾರ ನಂಬಿಕೆಯುಳ್ಳ ಖದೀಜಾರು ಇದನ್ನರಿತು ತಾವೇ ಮೊದಲು ಹೊಸ ಮಾರ್ಗವನ್ನು ಸ್ವೀಕರಿಸಿ ಮೊಹಮ್ಮದರಿಗೆ ಧೈರ್ಯ ತುಂಬುತ್ತಾರೆ. ಅಲ್ಲಿಯವರೆಗೆ 'ಅಂತರಂಗ'ವೆಂಬ ಮೊದಲ ಭಾಗ. ಈ ಭಾಗದಲ್ಲಿ ಲೇಖಕರು ಅರಬರ ಅಂದಿನ ಬರ್ಬರವೆನ್ನಿಸುವ ಸಾಮಾಜಿಕ ಜೀವನವನ್ನೂ, ಅರಬ್ ಸೀಮೆಯ ಭೌಗೋಳಿಕತೆ, ಕ್ರೌರ್ಯವೇ ಮೈವೆತ್ತ ಅಲ್ಲಿನ ಗಂಡು ಜಗತ್ತು, ಹೆಣ್ಣು ಮಕ್ಕಳ ಅಸಹಾಯಕತೆ, ಅರಬರ ಜೀವನ ಶೈಲಿ, 'ಎಲ್ಲರಂತಲ್ಲದ' ಮೊಹಮ್ಮದರ ಬಾಲ್ಯ, ಯುವಕ ಮೊಹಮ್ಮದರ ವಿಶೇಷ ಗುಣಗಳು, ಹಿಂದಿನ ಪ್ರವಾದಿಗಳ ಬಗೆಗಿನ ಕತೆಗಳು, ಉಪಕತೆಗಳು, ನಂಬಿಕೆಗಳು, ಪವಾಡಗಳು, ಇತ್ಯಾದಿಗಳೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಕಾವ್ಯಮಯವಾಗಿ ಚಿತ್ರಿಸಿದ್ದಾರೆ.

ಇನ್ನು ಎರಡನೆಯ ಭಾಗ 'ಬಹಿರಂಗ'. ಮಹಮ್ಮದರು ತಮ್ಮ ಪ್ರವಾದಿತ್ವವನ್ನು ಬಹಿರಂಗವಾಗಿ ಪ್ರಕಟಿಸುವುದರೊಂದಿಗೆ ಆರಂಭವಾಗುತ್ತದೆ. ಪ್ರತಿಷ್ಠಿತ ಕುರೈಶ್ ಮನೆತನದ ದೊಡ್ಡಪ್ಪನವರ ಕಣ್ಗಾವಲಿನಲ್ಲಿ ಒಂದಿಷ್ಟು ಸಮಯ ಬಹಿರಂಗ ಬೋಧನೆ ಮಾಡುತ್ತಾರೆ. ಬರಬರುತ್ತಾ ಸಂಪ್ರದಾಯಸ್ಥ ವಿರೋಧಿಗಳ ಕೈಮೇಲಾಗುತ್ತದೆ. ಸ್ವರಕ್ಷಣೆಯೇ ಕಷ್ಟಸಾಧ್ಯವಾದಾಗ ತಮ್ಮ ಕೆಲ ಅನುಯಾಯಿಗಳನ್ನು ಸಮುದ್ರದಾಚೆಯ ಅಬಿಸೀನಿಯಾ (ಈಗಿನ ಇಥಿಯೋಪಿಯಾ)ಕ್ಕೆ ಕಳುಹಿಸುತ್ತಾರೆ. ಒಂದು ಹಂತದಲ್ಲಿ ತಮ್ಮ ಕೊಲೆಯ ಸಂಚಿನ ಸುಳಿವು ಸಿಕ್ಕು ಜೀವದ ಗೆಳೆಯ ಅಬೂಬಕರರೊಂದಿಗೆ ತಪ್ಪಿಸಿಕೊಳ್ಳುತ್ತಾರೆ. ಹತ್ತಿರದ ಯಸ್ರಿಬ್ (ಈಗಿನ ಮದೀನಾ) ನಗರಕ್ಕೆ ಬಂದು ನೆಲೆಸುವುದರೊಂದಿಗೆ 'ಚದುರಂಗ'ವೆಂಬ ಮೂರನೆಯ ಭಾಗವು ತೆರೆದುಕೊಳ್ಳುತ್ತದೆ.

ಅಲ್ಲಿ ಪ್ರವಾದಿಯು ಸಾಮೂಹಿಕ ಪ್ರಾರ್ಥನೆಗಾಗಿ ಮಸೀದಿಯನ್ನು ಕಟ್ಟಿಸುತ್ತಾರೆ. ಹೊಸ ಧರ್ಮದ ಪ್ರಚಾರವೂ ನಡೆದಿರುತ್ತದೆ. ಇತ್ತ, ಮೊಹಮ್ಮದರ ಅನುಯಾಯಿಗಳು ಹೆಚ್ಚಾದರೆ ಕಅಬಾದಲ್ಲಿರುವ ಎಲ್ಲ ದೇವತೆಗಳ ವಿಗ್ರಹಗಳನ್ನು ನಾಶಮಾಡುವರು ಎಂಬುದನ್ನರಿತ ಮಕ್ಕಾದ ಪ್ರತಿಷ್ಠಿತರು, ರೋಷಾವೇಶದಿಂದ ಮದೀನಾದ ಮೇಲೆ ಆಕ್ರಮಣ ಮಾಡಲಣಿಯಾಗುತ್ತಾರೆ. ಇದನ್ನು ತಿಳಿದ ಮೊಹಮ್ಮದರ ಸಂಧಾನ ಸೂತ್ರಗಳೆಲ್ಲವೂ ವಿಫಲವಾಗಿ ಯುದ್ಧವೇರ್ಪಡುತ್ತದೆ. ಯುದ್ಧ ತಂತ್ರಗಳನ್ನೂ ಬಲ್ಲವರಾಗಿದ್ದ ಮೊಹಮ್ಮದರು ಅಂತಿಮವಾಗಿ ಗೆದ್ದು ಮಕ್ಕಾವನ್ನು ಪ್ರವೇಶಿಸಿ ಕಅಬಾದಲ್ಲಿದ್ದ ವಿಗ್ರಹಗಳನ್ನು ಹೊರಹಾಕಿ, ಅದರ ಪೂರ್ವ ಗೋಡೆಯ ಮೇಲಿರುವ ಪವಿತ್ರ ಕಪ್ಪುಶಿಲೆ 'ಹಜರುಲ್ ಅಸ್ವದ್'ಗೆ ಮುತ್ತಿಡುವ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡುತ್ತಾರೆ. ಈ ಎಲ್ಲದರ ಹಿನ್ನೆಲೆಯಲ್ಲಿ ಬಹಳ ಸ್ವಾರಸ್ಯಕರವಾದ ಅನೇಕ ಕತೆಗಳು ಬರುತ್ತವೆ. ಮನಮಿಡಿಯುವ ಅನೇಕ ಸನ್ನಿವೇಶಗಳಿವೆ. ಪ್ರವಾದಿ ಮೊಹಮ್ಮದರ ಬದುಕಿನ ಕೊಟ್ಟಕೊನೆಯ ಕ್ಷಣಗಳ ಈ ಚಿತ್ರದೊಂದಿಗೆ ಕಾದಂಬರಿಯು ಅಂತ್ಯಗೊಳ್ಳುತ್ತದೆ: "ಹೂವು ಅರಳಿದಂತೆ ಮುಗುಳು ನಕ್ಕ ಪ್ರವಾದಿಯವರು ಕೊನೆಯಬಾರಿಗೆಂಬಂತೆ ಹೇಳಿದರು, 'ಮರಣದ ಬಳಿಕ ನನ್ನ ದೇಹವನ್ನು ಮಾತ್ರ ದಫನ ಮಾಡಿರಿ. ಆದರೆ, ತಪ್ಪು ವ್ಯಾಖ್ಯಾನಗಳೊಂದಿಗೆ ನನ್ನ ಮಾತುಗಳನ್ನೂ ಹಾಗೆಯೇ ಮಾಡದಿರಿ.' ಎಲ್ಲರೂ ಆಯಿತು ಎಂದರು. ಮತ್ತು, ಅದು ಹಾಗೆಯೇ ಆಯಿತು....."

'ಅದು ಹಾಗೆಯೇ ಆಯಿತು..' ಎಂಬ ಪದಗುಚ್ಛವು ಕಾದಂಬರಿಯುದ್ದಕ್ಕೂ ಹಾಡಿನಲ್ಲಿಯ ಪಲ್ಲವಿಯಂತೆ ಅರ್ಥಪೂರ್ಣವಾಗಿ ಪುನರಾವರ್ತನೆಯಾಗುತ್ತಾ ಓದಿನ ಕೊನೆಯಲ್ಲಿ ನಾನಾ ಸೂಚ್ಯಾರ್ಥಗಳ ತೆರೆದ ವಾಕ್ಯವಾಗಿ ಮನಸ್ಸಿನಲ್ಲಿಳಿಯುತ್ತದೆ. ಓದು ಸಾರ್ಥಕವೆನಿಸುತ್ತದೆ. ಒಟ್ಟಿನಲ್ಲಿ ಒಂದು ಕಾದಂಬರಿಯ ಚೌಕಟ್ಟಿನೊಳಗೆ ಒಂದು ಧರ್ಮದ ಇತಿಹಾಸವನ್ನು ಕಾಣಿಸುವ ಕಷ್ಟಸಾಧ್ಯವಾದ ಕೆಲಸವನ್ನು ಲೇಖಕರು ಮಾಡಿ ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

**–ಟಿ.ಎಲ್ ರೇಖಾಂಬ**

**ಐದು ವರ್ಷಗಳನ್ನು ಪೂರೈಸುತ್ತಿರುವ**
**ಹೊಸ ಮನುಷ್ಯ' ಪತ್ರಿಕೆಗೆ**
**ಹಾರ್ದಿಕ ಶುಭಾಶಯಗಳು**



**ನಾಗರಾಜ ದೊಡ್ಡವಾಡ**
ಮತ್ತು **ವಿಜಯಕುಮಾರ ದೊಡ್ಡವಾಡ**
ಸಿವಿಲ್ ಗುತ್ತಿಗೆದಾರರು
ಸವದತ್ತಿ (ಬೆಳಗಾವಿ ಜಿಲ್ಲೆ)

**ಐದು ವರ್ಷಗಳನ್ನು ಪೂರೈಸುತ್ತಿರುವ**
**'ಹೊಸ ಮನುಷ್ಯ' ಪತ್ರಿಕೆಗೆ**
**ಹಾರ್ದಿಕ ಶುಭಾಶಯಗಳು**



**ಮೆ. ವಿಷ್ಣೇಶ್ವರ ಪಾಲಿಮರ್ಸ್**
ಪಾಲುದಾರರ: **ಎಂ.ಎಸ್. ನರಗುಂದ**
ಮತ್ತು **ಶೋಭಾ ನರಗುಂದ**
(ಎಚ್.ಡಿ.ಪ.ಇ ಪೈಪುಗಳ ತಯಾರಕರು
ಮತ್ತು ಮಾರಾಟಗಾರರು
ಬೇಲೂರು ಕೈಗಾರಿಕಾ ಕ್ಷೇತ್ರ
ಧಾರವಾಡ

ಐದು ವರ್ಷಗಳನ್ನು ಪೂರೈಸುತ್ತಿರುವ

ಹೊಸ ಮನುಷ್ಯ' ಪತ್ರಿಕೆಗೆ

ಹಾರ್ದಿಕ ಶುಭಾಶಯಗಳು



**–ಹೋಟೆಲ್ ವಿಶ್ವ ರೆಸಾರ್ಟ್**

ಮಾಲೀಕರು: ನಾರಾಯಣ ಶೆಟ್ಟಿ

ಮತ್ತು ಕುಟುಂಬ

ಮಮ್ಮಿಗಟ್ಟಿ ಗ್ರಾಮ

ಪವರ್‌ಗ್ರಿಡ್ ಎದುರು

ಧಾರವಾಡ ತಾ.

**ತಿಂಗಳ ಸಾಲುಗಳು...**



ದೇವರ ಸೃಷ್ಟಿಯಲ್ಲಿ ಪ್ರತಿಯೊಂದೂ ಪರಿಪೂರ್ಣವೇ

ಅಜ್ಞಾನ ಮತ್ತು ಕಷ್ಟಗಳು ಇರುವುದು ಜನರ ಮನಸ್ಸಿನಲ್ಲಿ ಮಾತ್ರ

-ರಮಣ ಮಹರ್ಷಿ

ಪತ್ರಿಕೆಗೆ ಶುಭ ಕೋರುತ್ತಾ...

–ಸಿ. ಪ್ರಶಾಂತ್

ದೀಪಾ

ಕು. ಅನಘ

ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568

Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)